ಮನಕ್ಕವೆರಡುಂ ವಿಪಾಕವಿಪರೀತಂಗಳ್ ॥ ೧೦೨

---

1 ಗಳವೆಲ್ಲಂ, ಗಳಿವೆಲ್ಲಂ (ಓ.ಮ). * ಈ ಪದ್ಯವನ್ನು ಪುನಃ ೨೩ನೆಯ ಸೂತ್ರದ ಕೆಳಗೆ ನೋಡಬಹುದು.

ಪ್ರಾಯೋಗ್ರಹಣಕ್ಕೆ ॥

ಬಂಡಣದೊಳೆನ್ನನೋಡಿಸಿ
ಕೊಂಡುಯ್ದಂ ನಿನ್ನನಾ ಸರಿತ್ಸುತನಾನುಂ ।
ಪೆಂಡತಿಯೆನಾದೆನದಱಿಂ
ಪೆಂಡಿರ್ ಪೆಂಡಿರೊಳದೆಂತು ಕೂಡುವರಬಲೇ ॥ ೧೦೩

ಸೂತ್ರಂ ೨೨

ಸ್ವರಮಿದಿರೊಳಕಾರಾಂತ
ಕ್ಕಿರೆ ನಾಗಮಮಕ್ಕುಮಲ್ಲಿ ಪುಲ್ಲಿಂಗ[1]ದೊಳಿ ।
ನ್ನೆರಡನೆಯ[1] ವಿಭಕ್ತಿಯನ
ತ್ತಿರಲಿತ್ತು ನಪುಂಸಕಕ್ಕೆ ದಾಗಮಮಕ್ಕುಂ ॥ ೧೦೪

ಪ್ರಯೋಗಂ ॥

ಇವನಧಿಕಪುಣ್ಯಸೀತನ
ನವಶ್ಯಮ್ಮೋಲಗಿಸೆ [2]ತೀರ್ಗು[2]ಮಭಿಮತಮಿವನಿಂ ।
ಭುವನವಿಶೇಷಕರಾರೆಂ
ದವನವನತನಾದನಾ ಧರಾಧಿಪನಡಿಯೊಳ್ ॥ ೧೦೫

ಮನದಿಂ ಬೇಗಂ ಮುಟ್ಟಿದ
ನನೂನಫಲಕುನುಮಪಲ್ಲವಭ್ರಾಜಿತಮಂ ।
ಬನದೊಳಗೆ ಪವನನಂದನ
ನನಿಂದ್ಯಗುಣನೆಸೆವಶೋಕಧಾತ್ರೀರುಹಮಂ ॥ ೧೦೬

ಸೂತ್ರಂ ೨೩

ಮತ್ತಾ ದ್ವಿತೀಯೆಗಂ ಮನ
ಪೊತ್ತರಿಸಿರ್ಕುಂ ವಿಭಾಷೆಯಿಂ ನಿಧನದೊಳಂ ।
ಪತ್ತಿ ನಿಮಿರ್ದಮರ್ದು ನಿಲ್ಕುಮು
ದಾತ್ತತೆ ಮಿಗೆ ದಂ ತೃತೀಯೆಗೇದಂತಂ ಮೇಣ್ ॥ ೧೦೭

ಪ್ರಯೋಗಂ ॥

ದ್ವಿತೀಯೆಗೆ ॥

ನೆಲನಂ ನುಂಗಲುಮಂಬುಧಿ
ಜಲಮಂ ತವೆ ತುಳ್ಕಲುಂ ಕುಲಾಚಲಕುಲಮಂ ।
ನೆರೆಯಿಂ [3]ಕಿಬಲುಂ[3] ತಾರಾ
ವಲಯನುದಿರ್ಚಲುಮೊಡರ್ಚಿದಂ ಚಕ್ರಧರಂ ॥ ೧೦೮

---

1 ದೊಳಂ ॥ ಎರಡನೆಯ ವಿಭಕ್ತಿಯಿಂ (?). 2 ತೋರ್ಗು (ಮ). 3 ನೆಗವಲ್ (ಅ).

ಹರನಗಮಿಂತಿದು ಲಂಕೇ
ಶ್ವರನೀ ಗಿರಿವರಮನೊತ್ತಿ ಕಿಡ್ತತ್ತಿದನ ।
ಚ್ಚರಿವಟ್ಟು ಸುರವಿಯಚ್ಚರ
ಗರಣಡೋರಗನಮಿತ ಮೆಚ್ಚಿ ತಲೆದೂಗುವಿನಂ ॥ ೧೦೯ *

ತೃತೀಯೆಗೆ ॥
ಧಯದಿಂದಂ ಮುಳಿಸಿಂದಂ
ನ್ಮಯದಿಂದಂ ರಾಗದಿಂದಮಳಿಪಿಂದಂ ದು ।
ರ್ಜಯಮಂ ಭಾವಿಸದೆ ಯದ್ಯ
ಚ್ಛೆಯಿಂದೆ ನೆಗಳ್ವಂಗೆ ತೀರ್ವ ಕಜ್ಜಮುಮೊಳವೇ ॥ ೧೧೦

ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೈನದೀ ।
ಕ್ಷೆಗೆ ಪೂಣ್ದಕ್ಷಯಪುಣ್ಯನುಗ್ರತಪಮೆಂಬುಗ್ರಾಸಿಯಿಂ ಕೂಡೆ ಘಾ
ತಿಗಳಂ ಘಾತಿಸಿ ತದ್ಯುಗಂಧರಮಹಾಯೋಗೀಶ್ವರಂ ತಾಳ್ದಿದಂ
ನೆಗಡ್ದಾರ್ಹಂತ್ಯಮನೇನನೀಯೆದೊ ಶುಭಧ್ಯಾನೋಪಯೋಗೋದಯಂ॥ ೧೧೧

ಸೂತ್ರಂ ೨೪

ಅಕ್ಕುಂ ಬಹುಳಮುಕಾರಾಂ
ತಕ್ಕೆ ತೃತೀಯಾದಿ[1]ಗಳೊಳಿನಾ[1]ಗಮಮಱುವೆಂ ।
ದಕ್ಕುಮವು ಸರ್ವನಾಮದ
ಪಕ್ಕದೊಳಿರೆ ಮೊದಲೊಳಿರ್ದುಕಾರದ ನೆಲೆಯೊಳ್ ॥ ೧೧೨

ಉದಾಹರಣೆ॥
ಪೂರ್ವಾರ್ಧಕ್ಕೆ॥
ಮನುವಿನ ಮಾರ್ಗಂ ಸುರಗುರು
ವಿನಱುವು ಪವಮಾನನೂನುಪೊಂದಾಯತಿ ಪೆಂ ।
ಪಿನೊಳೆಸವ ಕರ್ಣನೊ[2]ರ್ನುಡಿ[2]
ತನಗವು ನಿಜಮಾಗೆ ನೆಗಟ್ದನಾ ವಿಭುವಿಳೆಯೊಳ್ ॥ ೧೧೩

ಅಪರಾರ್ಧಕ್ಕೆ ॥
ಅದಱಿಂದಾನೊಂದಂ ಬೇ
ಡಿದಪೆಂ ಮಾರ್ಕೊಳ್ಳದೀಪ್ಪದೆಂಬುದುಮದಱೊಳ್ ।
ಪುದಿದನುರಾಗಂ ಮಾಣ್ದಿರೆ
ತದನ್ತುವೆಂದಿತ್ತನಮಳವಸ್ತುವ[3]ನಾತಂ[3] ॥ ೧೧೪

* ಈ ಪದ್ಯವು ಒಂದು ಪ್ರತಿಯಲ್ಲಿಲ್ಲ. 1 ಗಳ್ಗನಾ (ಅ). 2 ಳ್ನುಡಿ (ಓ.ಮ). 3 ನಾದಂ (ಮ).

ಸೂತ್ರಂ ೨೫

ಮೊದಲೊಳನುಸ್ವಾರಂ ಬೆರೆ
ಸದಂತಪುಲ್ಲಿಂಗದೊಳ್ ಗೆಯಕ್ಕುಂ ದ್ವಿತ್ವಂ ।
ವಿದಿತನಪುಂಸಕದೊಳ್ ಪ
ಕ್ಷದಿಂ ತೃತೀಯಂ ಚತುರ್ಥಿಗಂತುಟಿದುವಱೊಳ್ ॥ ೧೧೫

ಪ್ರಯೋಗಂ॥
ಆತಂಗಮಾಕೆಗಂ ವಿ
ಖ್ಯಾತಯಶಂ ಪುಟ್ಟಿದಂ ಕುಲಕ್ಕಂ ಚಲಕಂ ।
ಭೂತಳದೊಳಾರ್ಗಮಧಿಕಂ
ನೀತಿಪರಂ ಪರಬಲಾಬ್ಧಿಗೌರ್ವಪ್ರತಿಮಂ ॥ ೧೧೬

ಸೂತ್ರಂ ೨೬

ಅತ್ತಣ್[1]ಮೆಂದನುಸಂಧಿಸಿ[1]
[2]ಯೊತ್ತಂಬರದಿಂ[2] ತಗುಳ್ಚುವರ್ ಪಂಚಮಿಯೊಳ್ ।
ಬಿತ್ತರಿಸುವರ್ ತೃತೀಯಾ
ವೃತ್ತಿಯುಮಂ ಪಂಚಮಿಪ್ರಯೋಗದೊಳರೆಬರ್ ॥ ೧೧೭

ಉದಾಹರಣೆ ॥
ಕವಡಿಕೆ ಬಂದು[3] ದೋಪ[3] ಳುಟಿದಟ್ಟಿದಳಾಳ್ವನ ನಂಟ[4] ರತ್ತಣಿಂ[4]
ದವದಳಮಾಯ್ತು ಪೋಯ್ತು ರವಣಂ ಪೊರೆವಾವುಗೆ[5] ನೆಂಬ[5] ನಾದನಿ ।
ನ್ನವಧರಿಸಲ್ಕಮಾಱುನೆನುತುಂ [6]ಮಗುಳಾ ಡುವ[6] ನಿಲ್ಲಜಂಗೆ ತಾಂ
ಕವಡಿಕೆ ಕಯ್ಯೊಳಿರ್ದುಮವು [7]ಮುಂದಲೆ[7]ಯೊಳ್ ನೆಲಸಿರ್ದುವಲ್ಲವೇ ॥ ೧೧೮

ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಫಣೀಂ
ದ್ರೋತ್ತಮಾಂಗದಿನಗುರ್ವಿಪ ಪಂದಿಯ ಕೋಳ್ಕುಳಿಂ ।
ಪತ್ತುವಿಟ್ಟಿಗ[8]ನಿಕುಂಜ[8]ದೊಳೊಕ್ಕೆಳಮುತ್ತನಾ
ಯುತ್ತುಮಿರ್ಪ ಶಬರಪ್ರಿಯಕಾಮಿನಿಯರ್ಕ[9]ಳಂ[9] ॥ ೧೧೯

ಸೂತ್ರಂ ೨೭

ಆದಿವಿಭಕ್ತಿಯೊಳಂ ಸ್ವಾ
ಮ್ಯಾದಿಯೊಳಂ ಷಷ್ಠಿ ತಾನದಕ್ಕುಂ ಕೆಲರು ।

---

1 ನೆತ್ತನುಬಂಧಿಸಿ (ಓ.ಮ). 2 ಕ್ರುತ್ತುಂಬುದನಂ (ಓ). 3 ಪೋಪ (ಓ). 4 ನತ್ತಣಿಂ (ಓ.ಮ). 5 ವೆಂಬ, ನಂಬ (ಅ). 6 ಮಗುಡ್ಪೋಡುವ (ಅ). 7 ಮೂದರೆ (ಮ). 8 ನಿಕಾಯ- (ಅ.ಓ.ಮ). 9 ಳಿಂ (ಅ).

ತ್ಪಾದಿಸುವರ್ ಸ್ವಾಮಿತ್ವದೊ
ಳಾದಮಭೇದದೆ ಚತುರ್ಥಿಯಂ ಷಷ್ಠಿಯುಮಂ ॥ ೧೨೧

ಲಕ್ಷ್ಯಂ॥

ಕವಿಗಾದ ಸಂತಸಂ ಕ
ಣ್ಗವತರಿಸಿದುದೀಗಳೆಮಗೆ [1]ಕಾಮಾಂಧಕಿ[1]ಗ ।
ಳ್ಗವದಾತಮಂತ್ರಸಿದ್ಧಿಯು
ಮವಯವದಿಂದಾಯ್ತು ನಿನ್ನ ಬರೆ [2]ಮುರ[2]ಮಥನಾ ॥ ೧೨೧

ಅದಲ್ಲದೆಯುಂ॥

ತೆಂಕ[3]ವಂಕದೊ[3]ಳಸಂಖ್ಯಬಲಂ ನಿ
ಶ್ಶಂಕೆಯಿಂ ನೃಪನ ಪೇಜೆ ವಿರುದ್ದಾ ।
ತಂಕನಳ್ಕಱೆ ಸುಶರ್ಮನೃಪಂ ವೀ
ತಾಂಕುಶಂ ತುಱುಗೊಳಲ್ [4]ಪೊಱಮಟ್ಟಂ[4] ॥ ೧೨೨

ಸ್ವಾಮ್ಯಾದಿಗೆ॥

ಮದನನ ಕೆಯ್ವುವೆಲ್ಲದನನಂಗನ ಕೆಯ್ಪಿಡಿಯೆಲ್ಲದಂ ವಿರಾ
ಸದ ಕಣಿಯೆಲ್ಲದಂ ಚದುರ[5]ನೆಲ್ಲದನೆ[5]ಲ್ಲದನೆಲ್ಲದಂ ವಿನೋ ।
ದದ ಪೊದರೆಲ್ಲದಂ ಸೊಬಗಿನಾಗರಪೆಲ್ಲದನಿಚ್ಚೆಯಾಣ್ಮನೆ
ಲ್ಲದನೆರ್ದೆಗಾಣ್ಮನೆನ್ನರಸನೆಲ್ಲದನೋ ಲಲಿತಾಂಗವಲ್ಲಭಂ ॥ ೧೨೩

ಅಪರಾರ್ಧಕ್ಕೆ॥

ಈತನೀ ನೆಲನನಾಳ್ವರಸಂ ಕೇ
ಳೀತನೀ ಧರಣಿಗೀಶ್ವರನೇಮಾ
ತೀತನೀ ವಿಷಯನಾಯಕನೀ ತೋ
ರ್ಪಾತನೀ ದೆಸೆಯ ನಾಲ್ಕುಧಿನಾಥಂ ॥ ೧೨೪

ಸೂತ್ರಂ ೨೮

ಗುಣದಿಂ ಕ್ರಿಯೆಯಿಂ ನಿರ್ದಾ
[6]ರಣೆಯೊಳ್[6] ಸಪ್ತಮಿಯುಮಕ್ಕುಮಾದಿಯದಾಮಂ ।
ತ್ರಣದೊಳ್ ನೆಗೞ್ದಂ ಸಾಧಾ
ರಣದೊಳ್ ಲೋಪಂ ತದೇಕವಚನಕ್ಕಕ್ಕುಂ ॥ ೧೨೫

---

1 ಕಾಮುಂದಕಿ (ಅ). 2 ಮಧು (ಅ). 3 ವಕ್ಕ (ಓ.ಮ). 4 ಪೆಱಮಟ್ಟಂ (ಅ). 5 ಪುಟ್ಟದ (ಓ.ಮ). 6 ರಣಿಂ (ಓ.ಮ).

ಲಕ್ಷ್ಯಂ॥

ಪೂರ್ವಾರ್ಧಕ್ಕೆ॥

ಸುರರೊಳಗೆಂತು ವಜ್ರಿ ಧಗಣಂಗಳೊಳೆಂತು [1]ಸುಧಾಕರಂ[1] ಮಹಾ
ಗಿರಿಗಳೊಳೆಂತು ಮೇರು ಭುಜಗಂಗಳೊಳೆಂತು ಭುಜಂಗನಾಯಕಂ।
ನರರೊಳಗೆಂತು ಚಕ್ರಿ ವಿಹಗಂಗಳೊಳೆಂತು ಗರುತ್ಮನಂತೆ ನೀಂ
[2]ಪಿರಿಯೆ[2] ಜಿನೇಂದ್ರ ದೇವರೊಳಗಿಂದ್ರ[3]ನರೇಂದ್ರಫಣೀಂದ್ರ[3]ವಂದಿತಾ ॥

ಅಪರಾರ್ಧಕ್ಕೆ॥

ಚತುರಂತಕ್ಷಿತಿಕಾಂತೆ ಕೇಳ್[4] ಜಲಧಿ ಕೇಳ್[4] ಸಪ್ತಾರ್ಚಿ ಕೇಳ್[4] ತಾತ ಮಾ
ರುತ ಕೇಳ್[4] ಮಾರುತಮಾರ್ಗ ಕೇಳ್[4] ಪಗೆವನಂ ಕೊಂದೆನ್ನ ಕೋಪಾಗ್ನಿಗಾ।
ಹುತಿಮಾಡ್ಪಂ ಕೊಲರಾಜಿದಂದು ತಱಿಸಂದಾನೆನ್ನನಿಂದಗ್ನಿಗಾ
ಹುತಿಮಾಡ್ಪಂ [4]ಗಡಿ[4]ಮೆಂದು ಪೂಣ್ದೊ[5]ದಱಿದಂ[5] ಕೌರವ್ಯ[6]ಕೋಳಾಹಳಂ[6] ॥

ಸೂತ್ರಂ ೨೯

ಭಾಷೆಯೊಳೇಕತ್ವಕ್ಕವಿ
ಶೇಷದಿನೇದಂತಮಲ್ಲಿ ವರ್ತಿಸುಗುಮಿರಾ ।
ಶ್ಲೇಷಂ ತಾನಕ್ಕುಂ ಪರಿ
ಶೇಷದ್ವಿಬಹುತ್ವವಿಷಯಮೆನಿತನಿತರ್ಕಂ ॥ ೧೨೮

ಪ್ರಯೋಗಂ॥

ಎಳಮಾವೇ ತಳಿರುಯ್ಯಲೇ ಕೊಳೆ ತಗುಳ್ದಿಂದೋಳವೇ ಕೋಗಿಲೇ
ಗಿಳಿಯೇ ತುಂಬಿಯ ಬಂಬಲೇ ಪುಳಿನವೇ ಬೆಳ್ದಿಂಗಳೇ ಚಂದ್ರನೇ ।
ಕೊಳನೇ ನಂದನವೇ ಲತಾಭವನವೇ ನುಗ್ಗೀ ಕರಂ ಬರ್ದಿದೆಂ
ಗಳ ನೀವೆಲ್ಲರುಮೆನ್ನ ಬರ್ದುಗೆಯನಾನಲ್ಲಂಗೆ ಪೇಟಿಂ[7]ಗಡಿಂ[7] ॥ ೧೨೯

ಸುರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ
ತರ ಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತನುಂ ।
ದರಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ
ರ್ದೆರಮೆಸೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡು[8]ತಿರ್ಪುದೇ[8] ॥ ೧೩೦

ಸೂತ್ರಂ ೩೦

ಎಸೆದಿರೆ ನಿಲ್ಕುಂ ಸಂಬೋ
ಧಿಸುವೆಡೆಗಳೊಳಮರ್ದು ದೇಸೆಯಿಂ ಮಾರ್ಗದೊಳಂ ।
ನಿಸದಂ ಕ್ರಮಗತಿಯೊಳತಿ
ಪ್ರಶಸ್ತಿಯಿಂ ಹ್ರಸ್ವದೀರ್ಘಕಾಕುಗಳೆರಡುಂ ॥ ೧೩೧

---

1 ನಿಶಾಕರ (ಅ). 2 ಪಿರಿಯ (ಓ.ಮ). 3 ಮುನೀಂದ್ರನರೇಂದ್ರ (ಅ).
4 ಗಡ (ಅ). 5 ಳಱಿದಂ (ಓ.ಮ). 6 ಕಾಲಾನಲಂ (ಓ.ಮ). 7 ಗಡಾ (ಅ).
8 ತಿರ್ಪರೇ (ಅ).

ಪ್ರಯೋಗಂ ॥
ಹ್ರಸ್ವಕ್ಕೆ ॥
ಕೇಳ ಮಾಧವ ಧವನ್ಮಥಿತವ್ಯಾ
ಳೋಳದಾನವಕುಲಾಂಬುಧಿಲಬ್ಧೋ
ನ್ಮೀಳನಂ [1]ಧುವನಸಂಹೃತಿ[1]ಮೂಲಂ
ಕಾಳಕೂಟಮೆನೆ [2]ಪುಟ್ಟಿ[2]ನಿಶಾಟಂ ॥ ೧೩೨

ದೀರ್ಘಕ್ಕೆ ॥
ವಾರಣೇಂದ್ರಮಣಿಹೇಮವರಸ್ತ್ರೀ
ಸಾರವನ್ತು ಚಯಮಂ ಕ್ರಮದಿಂ ಕೆ ।
ಯ್ಸಾರರಾಟಿನು[3]ಪೊಡಿಂ ತಡವರ್ತ್ತೇ[3]
[4]ಕಾರಣಂ[4] ಕುರುಪತೀ [5]ಎಮಗೀಗಳ್[5] ॥ ೧೩೩

ಸೂತ್ರಂ ೩೧

ಸ್ವರಸಂಜ್ಞಿಕಂಗಳಮರ್ದೊಂ
ದಿರೆ ಮುಂದೆ ವಿಕಲ್ಪದಿಂ ದ್ವಿತೀಯೆಗೆ ದೀರ್ಘಂ ।
ದೊರೆಕೊಳ್ಗುಮೆಲ್ಲಯಾನುಂ
ಪುರಾತನೋಕ್ತಿಗಳೊ[6]ಳಂತದಲ್ಲಿ[6] ಯಥೇಷ್ಟಂ ॥ ೧೩೪

ಪ್ರಯೋಗಂ ॥
ದಿವಾಕರನ ಪುಟ್ಟಿ ಪೋದ ದಿತಿಜಾಂಡಖಂಡಂಗಳಾ
ನವಂ ಪಿಡಿದು ಪದ್ಮಜಂ ತಗುಳೆ ಪಾಡಿ [7]ನಾಮಂ[7]ಗಳಂ ।
[8]ಸುವರ್ಷಜಲ[8]ಜಾತಿಗಂಧಮದಕೋಪನತ್ವಂಗಳಾ
ನವಂ ಪಡೆದನಿಂದ್ರಜಾಲಗನಪೋಲೆ ಕಣ್ಗೊಪ್ಪಿದಂ ॥ ೧೩೫

ಸೂತ್ರಂ ೩೨

ತುದಿಯೊಳ್ ದೀರ್ಘಾದೇಶಂ
ಪೊದಬ್ದು ಷಷ್ಠೀವಿಭಕ್ತಿಗರೆಬರ ಮತದಿಂ ।
ಪುದಿದಿರ್ಕುಂ ಕೆಲಬರ್ ಖೇ
ದದೊಳಂ ಸಂಭ್ರಮದೊಳಂ ಪ್ರಯೋಗಿಸುವರದಂ ॥ ೧೩೬

ಪ್ರಯೋಗಂ ॥
ಷಷ್ಠಿಯ ದೀರ್ಘಕ್ಕೆ—
ಮೃಡನಾ ಗಂಗಾಂಬುಧಾರಾಜಟಿಲಿತಜಟಿನಾ ಪಾದ[9]ಪದ್ಮಕ್ಕೆ[9] ಮುನ್ನಂ
ಪೊಡೆವಟ್ಟಿಂದ್ರಂ ಬಟಿಕ್ಕೀಕೆಗೆ ಪೊಡೆವಡೆ ತನ್ನೌಲರತ್ನಪ್ರತಾನಂ ।

---

1 ಯವನಸಂಹತಿ (ಅ). 2 ಪುಟ್ಟಿ (ಮ), ಪುಟ್ಟಿತುಶಾಪಂ (ಅ). 3 ಷ್ಟದಿಂತಡ ಮರ್ತ್ತೆ (ಅ). 4 ವಾರಣಂ (ಓ). 5 ನಮಗೀಗಳ್ (ಅ.ಇ). 6 ಳಜುವುದಲ್ಲಿ (ಅ). 7 ನಾಮಂ (ಓ.ಮ). 8 ಸುವರ್ಷಜಲ (ಓ.ಮ). 9 ಯುಗ್ಮ (ಓ.ಮ).

[1]ಪೊಡರ್ದು[1]ದ್ಯದ್ಯೋತಿ ತಟ್ಟುತ್ತ ಡಿದಳಿರ್ಗ[2]ಳವಿನ್ನೊಡಿದಂತಪ್ಪುವೀಗಳ್[2]
ಮುಡಿದತ್ತಿಂದ್ರಂಗಮುಗ್ರಾಸುರಬಲಮಥನೋದ್ಯೋಗಯೋಗಪ್ರಯೋಗಂ ॥

ಖೇದಸಂಭ್ರಮಂಗಳ್ಗೆ ॥

ಪೊಂಬೆಸದಿಂದಮೆಯ್ದೆ ನಮೆದಂತೆಸೆದೊಪ್ಪುವ ಬಣ್ಣಮುಂ ಕರಂ
ಪಂಬಲಿನಲ್ಕೆ [3]ತಕ್ಕವಚಲ್ಕುಗಾಗಿ[3]ಸದೋಗರಗಂಪುಮಾವ ಪೂ ।
ವಿಂ ಬಗೆವಾಗಳಿಂತಿವಱೊಳಗ್ಗಳಮಾದೊಡಮಕ್ಕಟಾ ಮರು
ಳ್ದುಂಬಿಗಳೇಕೆ ನಂಪಗೆಗಳೊಳ್[4] ಪಗೆಗೊಂಡುವೊ ನಿರ್ನಿಮಿತ್ತದಿಂ ॥ ೧೩೮

ಪುಗಿಲಂ ಕ್ರೀಡನಶೀಲನಕ್ಕರಿಗನಾದಂ ಪಲ್ಲವಗ್ರಾಹಿ ವಾ
ಸುಗಿ ನಮ್ಮಾದುದನಾಗಲುಂ [4]ನಮೆ[4]ಯಲುಂ ಪೆಯ್ದರ್ಕುಮೇ ತಾರನೆಂ ।
ಬೆ ಗಡಾ [5]ವೇಳೆ[5]ಯೆನೆಂಬ ಡೊಂಬನಱಯೆಂ [6]ಕುತ್ತಂ[6] ನೆಲಕ್ಕಿ [7]ಕ್ಕಿದಂ[7]
ದಗಲೆಂ [8]ರಾಜಿಗ[8] ನಿನ್ನನೆನ್ನೊಡಲೊಳೆನ್ನಿಪ್ರಾಣಮುಳ್ಳನ್ನೆಗಂ ॥ ೧೩೯

ಸೂತ್ರಂ ೩೩

ಮೊದಲ ವಿಭಕ್ತಿಯೆ ವಾಕ್ಯದ
ಮೊದಲೊಳ್[9] ಪುದಿದಿರೆಯುಮುರುವಿಶೇಷಣಗತಿಯಿಂ ।
ಪದಸಂತಾನಂ ತಾನದು
ತುದಿಯ ವಿಭಕ್ತಿಯೊಳೆ ಕಾರಕಾನ್ವಿತಮಕ್ಕುಂ ॥ ೧೪೦

ಪ್ರಯೋಗಂ ॥

ನಂಗತನ[9]ತ್ವಂ ಕು[9]ರುರಾ
ಜಂಗಂ ಕರ್ಣಂಗಮೇಱುಸಲ್ಕರಿದನಿದಂ ।
ತಾಂ ಗಡಮೇಱುಪನೀ ಪಾ
ರ್ವಂಗಕ್ಕಟ ಮೆಯ್ಯೊಳೊಂದು ಮರುಳುಂಟಕ್ಕುಂ ॥ ೧೪೧

ನರಪರೊಳಗೊಂದು ಕೋಟಿಯು
ಮರೆ ಚಾಪ[10]ಬಲಕ್ಕಧೀಶನಂ[10] ದುಂದುಭಿಯಂ ।
ಬರಿಸಿ [11]ಮದವ[11]ರಜನೆಂದಂ
ತಿರೆ ನೆಗಪಂದಾಹವಕ್ಕೆ ಪೇೞ್ದಂ ಬೆಸನಂ ॥ ೧೪೨

ಸೂತ್ರಂ ೩೪

ಕಾರಕಮುಂ ಕ್ರಿಯೆಯುಂ ಕ್ರಿಯೆ
ಕಾರಕದಿಂದನ್ವಿತಾರ್ಥಮಾಗಿರ್ಪಿನಮ ।

---

1 ತೊಡರ್ದು (ಓ.ಮ). 2 ಳವಿಂ ನೂಡಿದಂತಕ್ಕುಮಿಾಗಳ್ (ಅ). 3 ತಕ್ಕವಚ ಮಾಗಿ (ಓ.ಮ). 4 ನಮೆ (ಅ). 5 ವೇಳೆಯ (ಅ). (6) ಮತ್ತಂ (ಅ). 7 ಕ್ಕಲೆಂ (ಅ). 8 ದಾಜಿಗ (ಓ.ಮ)· 9 ತ್ವಕ್ರು (ಓ.ಮ). 10 ಬಲಕ್ಕಮಧಿಕನಂ (ಅ.ಮೆ). 11 ದುದ. (ಓ.ಮ).

ಧ್ಯಾರೋಪಮೆಯುಂ ತ
ತ್ಕಾರಕಗತಿಯೊಳ್ ವಿಭಕ್ತಿ ಪರಿಣತಮಕ್ಕುಂ ॥ ೧೪೩

ಪ್ರಯೋಗಂ ॥

ಅಮೃತದ ಕಂಡಸಕ್ಕರೆಯ ಕೂಟಮು[1]ಮೊಲ್ವಳ[1] ಕೂಟಮುಂ ನಮಾ
ನಮೆ ವಲಮೊಲ್ಲದಳ್ಗೆ ವಿಟ[2]ನೇಟ[2]ವಿಟಂ [3]ಬರೆ ಕೂಟ[3]ಮಿಂಪನೀ ।
ಗುಮೆ ಬೆರೆಗೊಂಡೆನಾ ಬೆರೆಗೆ ಮೆಯ್ವೆರೆ ಮೆಯ್[4]ನಿನ [4]ತಿತ್ತೆ[4]ನೆಂಬ ಕೂ
ಟಮನದನೊಂದು ಕೂಟಮೆನಲಕ್ಕುಮೆ ನಂಜಿನ ಕಾಳಕೂಟಮಂ ॥ ೧೪೪

ಪಿಡಿಯೆ ಮೆಲರ್ ಪಿಡಿ ಸ್ಪಕ್ಪದೊ
ಳಡಸಿದ ಪಲ್ಲವಕೆ ಪಲ್ಲಮಱು ನಿಳ್ಕುವುದುಂ ॥
ಕಡೆಗಣ್ಣೊಳ್ ಕಂಡೊಂದಿಥ
ಮುಡಿದಿತ್ತುದು ಸಾರ್ದ್ರನಲ್ಲಕೀಪಲ್ಲವಮಂ ॥ ೧೪೫

ವಿಭಕ್ತಿಪರಿಣಾಮಕ್ಕೆ ॥

ಅಸುಹೃತ್ಸೀನೆಗೆ ಸಾಲ್ವನೊರ್ವನೆ ಗಡಂ ರುದ್ರಾವತಾರಂ ಗಡಂ
ನೊಸಲೊಳ್ ಕಣ್ ಗಡಮೆಂದು [5]ನಂಬಿ[5] ಪೊರೆದೆಂ ತಾನಕ್ಕೆ ತಮ್ಮಮ್ಮನ ।
ಕ್ಕಿಸಲಂಬಂ ತಿರುವಾಯ್ಗೆ [6]ತಂದಱುವರೇ[6] ತಮ್ಮಿರ್ವರುಂ ಕೆಯ್ದುವಂ
ಬಿಸುಟರ್ ಜೋಳದ ಪಾಟಿಯಂ ಬಗೆದರಿಲ್ಲಾ[7]ದ್ಯೋಣಿಯುಂ ದ್ರೋಣನುಂ[7] ॥

ಸೂತ್ರಂ ೩೫

ಜಾತಿಯೊಳಂ ಸಂಖ್ಯಾ[8]ನಾ[8]
ಖ್ಯಾತಿಯೊಳಂ ಕೂಡಿ ನೆಗಟ್ಗುಮೇಕಬಹುತ್ವೋ ।
ದ್ಯೋತನಪರಮೇಕತ್ವಂ
ಮಾತೇಂ ಭಾವದೊಳಮೇಕವಚನಮೆ ಅಕ್ಕುಂ ॥ ೧೪೬

ಪ್ರಯೋಗಂ ॥
ಜಾತಿಗೆ ॥

ಕರಿ[9]ಯಿವು[9] ಕರಿಯಲ್ಲಿವು ಗಿರಿ
ಗಿರಿಯಲ್ಲಿವು ಕರಿ [10]ಕರೀಂದ್ರಮಲ್ಲಿವು[10]ಗಿರಿ ಪೋ ।
[11]ಕರಿಗಿರಿಯೆಂ[11]ದಿನಿಸಪ್ಪೊಡ
ಮರಣ್ಯದೊಳಗಱಿಯಲಾಗ ಕರಿಯಂ ಗಿರಿಯಂ ॥ ೧೪೭

---

1 ಮೋಪಳ (ಓ). 2 ನಾಟ (ಓ.ಮ). 3 ಬಗೆಗೂಟ (ಅ). 4 ಗಿತ್ತೆ (ಅ). 5 ನಚ್ಚಿ (ಅ). 6 ದಂದವರಿದಂ (ಓ). 7 ದ್ರೋಣನುಂ ದ್ಯೋಣಿಯುಂ (ಓ.ಮ). 8 ನು (ಓ). 9 ಯಿವು (ಓ). 10 ವರ್ಂಗಳಲ್ಲಿವು ಕರಿ (ಓ). 11 ಗಿರಿವರಮೆಂ (ಓ).

ಸಂಖ್ಯೆಗೆ ॥

ದೆಸೆ ಪತ್ತು ಜಲಧಿ ನಾಲ್ಕಾ
ಗಸವೊಂದು ಕುಲಾದ್ರಿಯೇಱು ತಾಮೆನೆ ಮತ್ತೀ ॥
ವಸುಧಾಮಧ್ಯದೊಳೆತ್ತಲ್
ಮಿಸುಕುವನಿನ್ನೆತ್ತಲುಳಿವನಹಿತಕ್ಷಿತಿಪಂ ॥ ೧೪೯

ಭಾವಕ್ಕೆ ॥

ನಡುವಣ ಕರ್ಪುಂ ಕಡೆಯಣ
ಕಡುವೆಳ್ಪುಂ ತುದಿಯ ಕೂರ್ಪುಮೆಸೆದಿರೆ ಮಿಱರಂ ।
ಬಿಡ[1] ದಿನರೆ[1] ತೆಗೆದ ಮದನನ
ನಿಡಿಯಲರ್ಗಣೆಗಳನೆ ಪ್ರೋಲ್ತುವಾಕೆಯ ಕಣ್ಗಳ್ ॥ ೧೫೦

ಸಂಖ್ಯಾಜಾತಿವ್ಯತ್ಯಯಕ್ಕೆ ॥

ಸಂತಮಿರ್ಪುದೆ ನವಗ್ರಹಮಾಶಾ
ದಂತಿಗಳ್ ಪದುಳವೇ ದಿವದೊಳ್ ನಿ ।
ಶ್ಚಿಂತಮಿರ್ಪರೆ ಸುರರ್ ದಿತಿಪುತ್ರಾ
ಕ್ರಾಂತಿ[2]ಯಿಲ್ಲ[2] ವಲಮೆಂಬುದುಮಾಗಳ್ ॥ ೧೫೧

ಸೂತ್ರಂ ೩೬

ನೀನಾಂ ತಾನೆನಿಕುಂ ಪ್ರಥ
ಮಾನಿರ್ದೇಶಕ್ಕೆ ನಿನಗೆಯೆನಗೆ ತನಗೆಯೆಂ ।
ಬೀ ನುಡಿ ಚತುರ್ಥಿಯೊಳ್ ಸಲೆ
ತಾನಕ್ಕುಂ ಯುಷ್ಮದಸ್ಮದನ್ಯೋಕ್ತಿಗಳೊಳ್ ॥ ೧೫೨

ಉದಾಹರಣ ॥

ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕಟಿದ ಬಟೆ ।
ಕ್ಕಾನುಂ ನೀನೆ ದಲೀಗಳ್
ನೀನುಮಗಲ್ದೆತ್ತಪ್ಪೋದಯಂಗಾಧಿಪತೀ ॥ ೧೫೩

ತಾನೆ [3]ಗಡಳಿಪಂ[3] ಮೂರ್ಖಂ
ತಾನೆ ಗಡಂ ತೊಡರ್ದು ಮುಡಿಗೆಗಂ [4]ಬೋವ[4]ಕ್ಕಂ ।
ತಾನೆ ಗಡ ಬರ್ಪನೆನಿಸುವೊ
ಡಾ ನರನಯ್ದಾಱು ದೆವಸಮಂ ಬಟ್ಟಪನೇ ॥ ೧೫೪

---

1 ದೆನರೆ (ಓ.ಮು). 2 ಯಲ್ಲ (ಓ). 3 ಗಳಿದಪಂ (ಓ.ಮು). 4 ಜೋವ, ಚೌವ (ಅ.ಓ).

ವೈ॥ ಎನಗೆ ಕೂರ್ಪುದನಾ ಘಟಸಂಭವಂ
ನಿನಗೆ ಕೂರನಱರ್ ನಿನತಲ್ತು ಕೇ।
ಳೆನತು ತಂದೆಯ ಶೋಕಮ[1]ನಿರ್ವೆಮುಂ[1]
ಮುನಿವರಂ ತವೆ [2]ಕೊಂದೊಡನೀಗುವಂ[2] ॥ ೧೫೫

ತನಗೆ [3]ಮೇಗಿನಿ[3]ನೆಂಬನಿತಾದೊಡಾ
ವನುಮನಾವನುಮೊಲ್ಲುಮೆ ಮೆಚ್ಚಲಂ।
ತಿನಿತು ಮೆಚ್ಚದರೆಲ್ಲಮನೆನ್ನು ಮೆಂ
ದನಿತಱಿಂ ಪಟಿ ಸಾರ್ಗುಮೆ ಗಂಡರಂ ॥ ೧೫೬

ಸೂತ್ರಂ ೩೭

ಅವನಾತನೆಂಬ ಮಾತುಗ
ಳವು ಪುಲ್ಲಿಂಗಪ್ರಯೋಗದೊಳ್ ಸ್ತ್ರೈಣದೊಳಿ।
ನ್ನವಳಾಕೆಯೆಂಬ ನುಡಿ ಸಂ
ಭವಿಕುಂ ಶೇಷದೊಳದೆಂಬ ಮಾತನೆದಿರ್ಕುಂ ॥ ೧೫೭

ಪ್ರಯೋಗಂ ॥
ಅವನಾಕೆಯನಂತಾತನ
ನವಳುಮಗರೊಂದು ಪೊಱ್ತು ಮಿರಲಾಱರ್ ಕೂ।
ರ್ಪವರನಿತುವರೆಗಮಾರನೆ
ಭವಾಂತರಸ್ನೇಹಮವರೊಳಾದುದಳುಂಬುಂ ॥ ೧೫೮

ಆದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆ ಬಾ
ದ್ಮೊದಲದು ಚಿತ್ತಜಂಗೆ ಕುಲದೈವಮದಂಗಜಚಕ್ರವರ್ತಿಗೆ।
ತ್ತಿದ ಪೊಸವಟ್ಟಮಂತದು ಮನೋಜನ ಕೆಯ್ಪಿಡಿಯೆಂದೆ [4]ಮಾಣ್ಬೆ[4]ನಾ
ನುದತಿಯ ರೂಪನಿಂ ಪೆಱತನೆಂದೊಡೆ ಚಿಃ ಕರಮೆಗ್ಗನಾಗೆನೇ ॥ ೧೫೯

ಸೂತ್ರಂ ೩೮

ನಿತ್ಯಂ ನಪುಂಸಕತ್ವಮ
ಪತ್ಯಕಲತ್ರಾದಿಶಬ್ದದೊಳ್ ಸ್ತ್ರೀಪುಂಸ।
ವ್ಯತ್ಯಯಮಕ್ಕುಂ ಕರುಣೋ
ಪತ್ಯಕೆಗಳೊಳಂ [5]ವಧಾ[5]ಭಿಲಾಷಾದಿಯೊಳಂ ॥ ೧೬೦

---

1 ನಿರ್ವರುಂ (ಓ). 2 ಕೊಂದೊಡೆನೀಗುವೆಂ (ಅ.ಮ). 3 ಮೇಲನಿ (ಅ). 4 ಮಾಣ್ದೆ. 5 ತಥಾ (ಓ.ಮ).

ಪ್ರಯೋಗಂ ॥

ತದಪತ್ಯಂ [1]ಚಾಗದ[1] ಪೆಂ
ಪೊದವಿರೆ ನೆಗಳ್ದಳ್ ಜಗಕ್ಕೆ ವಿನಯಗುಣ್ಯಿಕಾ ।
ಸ್ಪದೆ ನುಗ್ಗಿಯಬ್ಬೆ ತನಗೊಂ
ದಿದ ಚಾಗವೆಡಂಗಿಯೆಂಬ ಪೆಸರೆಸೆವಿನೆಗಂ ॥ ೧೬೧

ಸರಸತಿಗಂ ಸಿರಿಗಂ ಮ
ಚ್ಚರಿಸುವ ವಿದ್ಯಾವಿಶೇಷವಿಭವೋನ್ನತಿಯಿಂ ।
ಸುರಮಾನವಲಲನೆಯ[2]ರೇ[2]
ದೊರೆಯರುಮಾ ನೃಪಕಳತ್ರಮಂ ಪೊಲ್ತಪರೇ ॥ ೧೬೨

ಆದಿಗ್ರಹಣಕ್ಕೆ ॥

ಒರ್ವಳೆ ಪೆರ್ಮಗಳ್ ಬಗೆಪೊಡಿನ್ನೆಮಗೀಕೆಯೆ ಗಂಡುಗೂಸು ತಾಂ
ಸರ್ವಕಲಾವಿದಗ್ಗೆ ಪೆಱತೇನೊ ಸರಸ್ವತಿಗತ್ತಮತ್ತೆ ಪ ।
[3]ನ್ನಿರ್ವೆರಲಗ್ಗಳಂ[3] ಶ್ರುತದೊಳಾದೊಡಮೇನಿನಿಸೂನಮುಂಟು ಗಾಂ
ಧರ್ವಮನೊಂದುಮಂ ನೆಱಿಯೆ ಕಲ್ಲಳೆ ಕಲ್ಪಿಪು[4]ದಂತದಂ[4] ನೃಪಾ ॥ ೧೬೩

ಅಪರಾರ್ಧಕ್ಕೆ ॥

ಕರುಣದಿಂ ಮೃಗಮಂ ನಿಜಾಂಕದೊಳಿಟ್ಟೊಡಾ ಕಱಿಯಾದೊಡೀ
ಧರೆ ಮೃಗಾಧಿಪನೆಂದುದಿಲ್ಲ ಮೃಗಾಂಕನೆಂದುದು ಚಂದ್ರನಂ ।
ಕರುಣಮಿಲ್ಲದ ಸಿಂಗಮಂ ಮೃಗರಾಜನೆಂದುದು ಭೂಪರೊಳ್
ಧರೆಗಧೀಶ್ವರನಕ್ಕುಮೇ ಪರಚಕ್ರಕರ್ಕಶನಲ್ಲದಂ ॥ ೧೬೪

ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೊಳ್ ಸಾಂದ್ರೋಂದುಕಾಂತೋಪಳೋ
ಚ್ಚಳಿತಾಚ್ಛಾಚ್ಛಜಳಪ್ರವಾಹಧರದೊಳ್ ಮಂದಾನಿಳಾಂದೋಳನಾ ।
ಕುಳಿತಾರಾಮಫಳಾಮೃತೋಪಮರಸಸ್ಯೋತಂಗಳೊಳ್ ಸಾಲ್ವಿನಂ
ಬೆಳೆದೋರಂ[5]ತೊಱಗಿರ್ದ[5] ಶಾಲಿವನದಿಂ ಸೇವ್ಯಂ ನಗೋಪತ್ಯಕಂ ॥ ೧೬೫

ಅವಳುಮನೊಲಿಸಿ ಕಂಟಿಸಿ
[6]ಗೋವರ ಗುಗ್ಗುರಿಗೆ[6]ಮಾಡಿಯುಂ ತಣಿಯಯ್[6] ಪೆ ।
ರ್ಮಾವುಲಿಗ[7]ನಯೋ[7] ಪೇೞೀಂ
ಸ್ತ್ರೀವಧೆ ನಿನಗಶ್ವಮೇಧಮೋ ಸಂಬಳಮೋ ॥ ೧೬೬

ಎನಗದಱಖಿಲಾಷೆ ತಾನದೇನುಂ
ಮನದೊಳಗಿಲ್ಲ ವಿವೇಕಶೂನ್ಯನಾದಂ ।
ತನಗನುಚಿತಮಪ್ಪುದೊಂದಕೃತ್ಯ
ಕ್ಕೆನಿತುವರಂ ಬಗೆದಂದನೂಹೆಯೆಂದಂ ॥ ೧೬೭

---

1 ಭಾವದ. 2 ರೀ (ಓ.ಮ). 3 ನ್ನಿರ್ವರೊಳಗ್ಗಳಂ. 4 ದಂತುಮಂ. 5 ತೊಸೆದಿರ್ಪ, ತೆಸೆದಿರ್ಪ (ಓ.ಮ). 6 ಗೋವರು ಗುಗ್ಗುರಿಕೆ (ಓ.ಮ). 7 ನೆಯೋ, ನೆಯಂ(ಓ).

ಗ್ರೀವಾದಿಯೊಳ್ ವಿಕಲ್ಪಕ್ಕೆ ॥--

ಕೈಲಾಸಾದ್ರಿಯನೆತ್ತಿ ನೊಂದ ಭುಜಸಂದೋಹಂಗಳಂ ಕೃಷ್ಣಕೀ
ರಾಲಂ ನೋರ್ವಿನಮೆಯ್ದೆ ನೀಳ್ದನಿತುಮಾ ಗ್ರೀವಂಗಳಂ ರಾಗದಿಂ ।
ನೀಲಗ್ರೀವನಳುಂಬುಮಪ್ಪ ದಯೆಯಿಂದಂ ನೀವಿ ರಾಗಾಬ್ಧಿಕ
ಲ್ಲೋಲಂ ಪೆರ್ಚೆ ದಶಾನನಂಗೆ ಪಿರಿದೊಂ[1]ದುತ್ಸಾಹಮಂ[1] ಮಾಡಿದಂ ॥ ೧೬೮

ಗ್ರೀವೆ ಪೊಗಮಂಸಮಳಿಕಂ
ಭ್ರೂ ವಕ್ಷಂ ತೋಳ್ ತೊಳಂಕು ತೊಡೆಯೆಂಬೆಡೆಯೊಳ್ ।
ತೀವಿದುವು ಭೀಮನಿನೆ ವಿಶಿ
ಖಾವಲಿ ಮಾಱುತಾಂತರಾತಿನೇನೆಯ ಮೆಯ್ಯೊಳ್ ॥ ೧೬೯

ಸೂತ್ರಂ ೩೪

ಆಕಾರಕ್ಕೆ ಲಘೂಕೃತ
ಮೇಕಾರಂ ಬಹುಳಮಕ್ಕುಮಾದೂದಂತ ।
ಕ್ಕೇಕಾಕ್ಷರಪದಮುಟಿಯೆ ನಿ
ರಾಕುಳದಿಂ ಹ್ರಸ್ವಮಕ್ಕುಮೆಲ್ಲೆಡೆಗಳೊಳಂ ॥ ೧೭೦

ಪ್ರಯೋಗಂ ॥

ಧರೆಯಂ ಕ್ಷಮೆಯಿಂ ಹಿಮವ
ದ್ಗಿರಿಸುತೆಯಂ ಪೆಂಪಿನಿಂ ಸುರಾಪಗೆಯಂ ಬಿ ।
ತ್ತರಿಸುವ ಜಸದೆಸಕದಿನನು
ಕರಿಸುವಳಾ ಕಾಂತೆ ಕಾಂತಿಯಿಂ ಶಶಿಕಳೆಯಂ ॥ ೧೭೧

ಬಹುಳಗ್ರಹಣಕ್ಕೆ—

ಕಮಲಂದೊರ್ ಮೊಗಮುತ್ಪಲಂಬೊಲಲರ್ಗಣ್ ಚಕ್ರಾಹ್ವಯಂಬೊರ್ ಕುಚಂ
ಭ್ರಮರಂಬೊಲ್ ಕಡಮಿಕ್ಷುಚಾಪದಳಿನೀಜ್ಯಾಯಂತೆವೊಲ್ ಬಾಸ ಕ ।
ಣ್ಗಮರ್ದಿಂಬಾಗಿರೆ [2]ಲಕ್ಕ[2]ಸೂದ್ ಪರಸುತುಂ ಶ್ರೀ[3]ಗಾತ್ಮ[3]ವನ್ತೂಪಮೋ
ಪಮೆಯರ್ ದ್ಯೆವದಗಣ್ಯಪುಣ್ಯವಧುವರ್ ಸೇಸಿಕ್ಕಿ ಬಂದಾಡಿದರ್ ॥ ೧೭೨

ಅಂತುಮಲ್ಲದೆಯುಂ ॥

ಉದಯಾನ್ತ್ರೋನ್ನತಶೈಲಸೇತುಹಿಮವತ್ಕುಕ್ಷೀಳಪರ್ಯಂತ ಸಂ
ಪದೆಯಂ ವಾರ್ಧಿತರತ್ತರಂಗ ನಿನದತ್ಕಾಂಚೀಕಳಾಪಾಂಚಿತಾ ।
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆ[4]ಲನಂ[4] ನಿರ್ವ್ಯಾಜದಿಂದಂ ನಿಮಿ
ರ್ಚಿದ ಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆಱರ್ಗಕ್ಕುಮೇ ॥ ೧೭೩

---

1 ದಾಹ್ಲಾದಮುಂ. 2 ಲಕ್ಕೆ (ಓ.ಮ). 3 ಗೋತು. 4 ವಲಂ.

ಅಪರಾರ್ಧಕ್ಕೆ॥

ಮದನವಿಭ್ರಮಲಕ್ಷ್ಮಿಗೆ ಮೂಲಂ ವಾಗ್ವಧುಗಾಯತಿ ಲೀಲೆಗಾ
ಸ್ಪದಮಳುರ್ಕೆಗೆ ತಾಯುರುಸೌಭಾಗ್ಯಕ್ಕೆ ವಿಳಾಸನಿಕೇತನಂ ।
ಮದಗಜಾಲಸಗಾಮಿನಿ ತಾನಾ ಕಾಮಿನಿ ಗೋಮಿನಿಯಿಂ ಮಿಗಿಲ್
ಚದುರ ಪಾಟಿಯ ಸೀಳದ ಪೆಂಪಿಂದಾ ಸತಿಗಾರ್ ದೊರೆ ಧಾತ್ರಿಯೊಳ್ ॥ ೧೭೪

ಏಕಾಕ್ಷರಪದಕ್ಕೆ ॥

ಆಗಳ್ ಜನಂ ಕೆಯ್ದುವನಿಕ್ಕಿ ವೀರ
ಶ್ರೀಗಾಣ್ಮನಯ್ ಪಾಣ್ಬ[1]ತನಕ್ಕೆಳ[1]ಪ್ಪಯ್ ।
ಪ್ರೋಗೇಕೆ ನೀಂ ಮೆಯ್ಗರೆದಿರ್ಪಯೆಂದಾ
ಭೋಗೀಶ್ವರಂಗಂದು ವಿನಮ್ರನಾದಂ ॥ ೧೭೫

ಸೂತ್ರಂ ೪೦

ಧಾತುವಿಹಿತಂ ತೃಶಬ್ದಂ
ಖ್ಯಾತವಿಭಕ್ತ್ಯಂತರಂಗದೊಳ್ ನಿಲ್ಕುಂ ತಾ ।
[2]ನಾ ತೆಱದೆ ನಿಲ್ಲದಂದುಪ[2]
ಜಾತಾರಾದೇಶಮಾಗಿ ನಿಯತಂ ನೆಗಟ್ಕುಂ ॥ ೧೭೬

ಲಕ್ಷ್ಯಂ ॥

ಹೋತೃವೆನಾನಧ್ವರಿಯಯ್
ಭ್ರಾತೃವೆ ನೀನುಟಿದ ಋತ್ವಿಜರ್ ಯಾದವರು ।
ದ್ಧಾತೃ ಶುಚಿಸಚಿವನೆನೆ ಸುರ
ಜೇತೃವೆ ಪಶುವಾಗೆ[3]ಯಾಮೆ[3] [4]ಬೇಳೆವೆ[4]ಮುನ್ನಂ ॥ ೧೭೭

ಅನ್ನೋಡರ್ಜುನನೆಂಬೆನಂತಕಸುತಂ ಭರ್ತಾರನೆಂಬಾತನ
ಕ್ಕುಂ [5]ನಾನಾನ್ನವಿಪಾಕಿ ವಲ್ಲಲ[5]ನವಂ ಭೀಮಂ ಹಯಾಧ್ಯಕ್ಷತಾ ।
ಸನ್ನದ್ಧಂ ನಕುಲಂ ಗವಾಧಿಕೃತನಾ ಸಾದೇವನಂದಾವಳಿಂ
ದನ್ನರ್ ಕೀಚಕರಳ್ಕಿದರ್ ಮಗಳಪೊಳ್ ಸ್ಯೈರಂಧ್ರಿ ಪಾಂಚಾಲನಾ ॥ ೧೭೮

ಸೂತ್ರಂ ೪೧

ಬಿದಿಗಭಿಧಾನಂ ತಾನಂ
ತದಾದೊಡಕ್ಕುಂ ವಿಧಾತೃಶಬ್ದಂ ರಾಂತಂ ।

---

1 ತಳಕ್ಕೆನ. 2 ನೇತಱದಿಂದಲ್ಲಜೊಡುಪ (ಓ). 3 ನಾವೆ (ಓ:ಮ).
4 ಬೇಳ್ಪೆವು (ಅ). 5 ನಾನಾಜ್ಯವಲ್ಲವ (ಓ), ನಾನಾಭುಜ್ಯವಿಪಾಕಪಲ್ಲಲ (ಮ).

ತ್ರಿದಿವಸ್ಥಿತರೊಳರಾದೇ
ಶದಿಂದಮೊಡಗೂಡಿ ವರ್ತಿಕುಂ ಪಿತೃಶಬ್ದಂ ॥ ೧೭೯

ಉದಾಹರಣೆ ॥
ಪೂರ್ವಾರ್ಧಕ್ಕೆ ॥
ಕೆಯ್ವಾರಮೇಂ ಪೊಗಟ್ಟ್ತೆಯೆ
ಮುಯ್ವಾಂಪನಿತಂದವೊಂದೆ ಸುಂದರಿಯೆರಡುಂ ।
ಮುಯ್ವಂ ಪಡೆದಗ್ಗಳಿಕೆಗೆ
ಮೆಯ್ವೆರ್ಚಿ ವಿಧಾತ್ರ್[1]ನಿರದೆ ಮುಯ್ವಂ ನೋಟ್ಪಂ[1] ॥ ೧೮೦

ಅಪರಾರ್ಧಕ್ಕೆ ॥
ಉಡುವಮರುಮನುಣ್ಬರುಮಂ
ನಡೆ ನೋಡಿ ಕನಲೊದ್ದನಲ್ದು ಮುನ್ನಿನ ಭವದೊಳ್ ।
[2]ಕುಡದರ್[2] ಕಣ್ಣಡಿನೊಳ್ ಧೃತಿ
ಗಿಡೆ ಬಡವರ ಪಿತರರಂತೆ ಮಱುಗುತ್ತಿರ್ಕುಂ ॥ ೧೮೧

ಸೂತ್ರಂ ೪೨

ಶ್ವಯುವಾರ್ಧ್ವಸಖಿಯನ್ಯ
ತ್ಯಯಮನ್ಯಂತಂ ಬಹುತ್ವವಿಷಯಕೃತಾದೇ ।
ಶಯುತಂ ವಿಕಲ್ಪದಿಂದಂ
ಪ್ರಯೋಗಿಸಲ್ಪಡೆಗುಮೆಸೆವಿನಂ ಕನ್ನಡದೊಳ್ ॥ ೧೮೨

ಪ್ರಯೋಗಂ ॥
ಶ್ವಾನಂಗಳ್ [3]ಗಂಧ[3]ಮಾರ್ತಂಡನನತಿಹಿತದಿಂ ಕಾಪುಗೊಂಡಿರ್ದುವುಗ್ರ
ಶ್ವಾನಂಗಳ್ ಕಂಡು ದೂರಾಂತರದೊಳಿವರ ಬರ್ಪಂದಮಿಂಬ[4]ಲ್ತದ[4]ಸ್ಮ ।
ದ್ಭೂನಾರೀನಾಥನೊಳ್ ತಳ್ತಿಱುವ ಬವಸೆಯಂ [5]ಪೂಣ್ದು[5] ಬಂದಪ್ಪರೀತಂ
ಗೀ ನಿದ್ರಾಭಂಗಮಂ ಮಾಟ್ಪುದು ಪದನಣಮಲ್ತೆಂದು ನಿಂದಾಂತುವಾಗಳ್ ॥

ಈ ಯುವಾನರನವದ್ಯವಿದ್ಯರಾ
ಮ್ನಾಯಶುದ್ಧರವದಾತಕೀರ್ತಿಗಳ್ ।
ತೋಯಜಾಕ್ಷಿ ನಡೆ ನೋಡ ಮನ್ಮಥ
ಶ್ರೀಯನಾದರಿಸಿ ನಿಂದರಿಂತಿವರ್ ॥ ೧೮೪

ಪ್ರಣುತಗುಣರೆನಿಪ ವಿಬುಧಾ
ಗ್ರಣಿಗಳ್ ಕೆಯ್ಕೊಂಡು ಪೊಗಡೆ ನರೆ ನೆಗಟ್ಟುವು ಧಾ ।

---

1 ನರಮೆಮುಯ್ವಾಂತಿರ್ಪಂ (ಓ.ಮ). 2 ಕೆಡೆದಂ (ಓ). 3 ಕಂಡು (ಓ.ಅ). 4 ಲ್ಲಮ (ಓ.ಮ). 5 ಮಾಣ್ದು (ಓ), ಸ್ಸಾರ್ದು (ಮ).

ರಿಣಿಯೊಳಗೆ ನಾಗವರ್ಮನ
ಗುಣವರ್ಮನ ಶಂಖವರ್ಮನಧ್ವಾನಂಗಳ್ ॥ ೧೮೫

ಸಮವಯಸಂ ಸಮಸತ್ವಂ
ಸಮಾನವಿಭವಂ ಸಮಾನಶೀಲವ್ಯಸನಂ ।
ಸಮವಿದ್ಯಾವಿಭವಯುತಂ
[1]ಸಮಸುಖದುಃಖಂ[1] ಸಹಾಯನಕ್ಕೆ ಸಖಾಯಂ ॥ ೧೮೬

ಈಯಲ್ಬಂದತ್ತು ಕಲ್ಪಾಂಪ್ರಿಪಮಭಿಮತಮಂ ಪೂರ್ವಪುಣ್ಯಾರ್ಜಿತಂ ಕೇ
ೞೀಯಲ್ಬಂದತ್ತದೊಂದಕ್ಷಯನಿಧಿಯೆನುತುಂ ತನ್ನನೊಲ್ಪಾತ್ರಿರೋ[2]ಕ[2] ।
ಶ್ರೀಯೆಲ್ಲಂ ಪೊರ್ದಿದಂತೇನೊಸದನೊ ಮನದೊಳ್ ಸೂಕ್ತಿಕರ್ಣಾವತಂಸಂ
ಶ್ರೇಯಾಂಸಂ ಪ್ರೋನ್ನತಾಂಸಂ ಸುಕವಿಜನಮನೋಮಾನಸೋತ್ತಂಸಹಂಸಂ॥

ಅದ್ವೈತವಾದಿನಿವಹಮ
ದದ್ವಿರದಘಟಾವಿಪಾಟನೈಕಪಟಿಷ್ಠಂ ।
ನ್ಯಾದ್ವಾದಾಚಲಸಿಂಹಂ
ವಿದ್ವಾಂಸರ್ ಪೊಗಪ ವಾದಿರಾಜಂ ನೆಗಬ್ದಂ ॥ ೧೮೮

ವಿಕಲ್ಪಗ್ರಹಣಕ್ಕೆ ॥
ಜ್ಯಾಯನರಣ್ಯದೊಳ್ ನೆಲಸು[3]ಗುಂ[3] ಗಡ[4]ಮಯ್ಯ ಕನೀಯನನ್ವಯ
[5]ಶ್ರೀಯೊಳಧಿಷ್ಠಿತಂ[5] ಗಡವಿನಾನ್ವಯಜಾತರೊಳಿನ್ನವಿನ್ನವ ।
ನ್ಯಾಯಮವಿನ್ನವಿನ್ನಬಳಾಮುಖರತ್ವಮವಿನ್ನವಿನ್ನವ
ಶ್ರೇಯಮವಿನ್ನವಿನ್ನವಕೃತಕ್ರಮವೃತ್ತಿಯನಾರೊ ಸೈರಿಪರ್ ॥ ೧೮೯

ಸೂತ್ರಂ ೪೩

ಪಡೆಗುಂ ವಿಭಾಷೆಯಿಂದಂ
ಕಡೆಯೊಳದಂತತೆಯನಸ್ವರಂ ವೃದ್ಧನವೋಲ್ ।
ಪಡೆಗುಮದರ್ಶನಮಂ ಮೇಣ್
ಪಡೆಗುಂ ದ್ವಿರ್ಭಾವವೃತ್ತಿಯಂ ಮೇಣ್ [6]ಶ್ರುತಿವೋಲ್[6] ॥

ಪ್ರಯೋಗಂ ॥
ಪರಿಣತವಯಸರೆಮಿಕ್ಕ್ಕ
ಣ್ಗುರುಡರೆವೆಮಗಿಂಬುಕೆಯ್ವುದುಚಿತಂ[7]ನಿನ್ನೀ[7] ।

---

1 ಸಮದುಃಖಸುಖಂ (ಮ). 2 ಕೀ (ಅ). 3 ವಂ (ಅ). 4 ಮೆಯ್ಯೆ, ಮಯ್ಯೆ (ಅ). 5 ಶ್ರೀಯೆಕದಿಳದಿಕ್ಷಿತಂ (ಅ). 6 ಕೃತಿವೋಲ್, ಕೃತಿಯೊಳ್ (ಅ). 7 ನೀನೀ (ಅ).

ಗುರು ನುಡಿದ ನುಡಿಗೊಡಂಬುಡು
ಗುರುವಚನಮ[1]ಲಂಘನೀಯ[1]ಮೆಂಬುದು ಮಗನೇ॥ ೧೬೦

ಮೊದಲೊಳ್ ಚಪಲಂ ಮರ್ಕಟ
ನದು ವೃಶ್ಚಿಕದಷ್ಟನೆಂಬವೋಲ್ [2]ನವವಯದು[2] ।
ನ್ಮದ[3]ಮಂತೆ[3] ಸುತಂ ಪಿತೃಧನ
ಮೆದಮತ್ತಂ ಮೂರ್ಖನೆಂದೊಡೇನಱಿಸುವುದೋ ॥ ೧೬೨

ವ್ಯವಸ್ಥಿತಪಿಭಾಷೆಗೆ ॥
ಇವಂಬುನಿಧಿಕೂಪದಿಂದಮರನಂದನಕ್ಕೇತಮೆ
ತ್ತುವಲ್ಲಿ ಗದೆಯಾಗಲುಂ ಕಡಲ ಗುಣ್ಬನಾರಯ್ಯಲುಂ ।
ದಿವಕ್ಕಡರಲೇಣಿಯುಂ ನಮೆಯಲುಂ [4]ವಲಂ[4] ಬಾಪ್ತೆಯೆಂ
ಬವೊಲ್ ಬೆಳೆದು ನಿಂದ ಪೆರ್ವಿದಿರ ಸುರ್ವಗುರ್ವೆಲ್ಲಿಯುಂ ॥ ೧೬೩

ರೋಪಕ್ಕೆ ॥
ನರಿವದ[5]ಗಱು[5]ವಂತಿರೆ ಭೋ
ರ್ಗರೆದೊರ್ಮೊದಲೆಱಗಿ ದೆಸೆಗಳೆಲ್ಲಮನೊಡನಾ ।
ವರಿಸಿ ತರತರದೆ ನಸು ಮನು
ಳ್ದಿರೆ ಪುದಿದುವು ನಭವನಭವನಂಬುಗಳೆತ್ತಂ ॥ ೧೬೪

ದ್ವಿರ್ಭಾವಕ್ಕೆ ॥
ದಿಕ್ಕನಿತುಂ ತೋಱುದುವು ಜ
ಲಕ್ಕನೆ ಮೂಕಾದಿಗಳ್ಗಮಂದತಿಲಲಿತಂ ।
ವಾಕ್ಯಾದುವು ಕುನುಮಿಸಿದುವು
[6]ಮಿಕ್ಕಿಸೆವಾಕ್ಷು[6]ಪಕುಜಾತ[7]ವೀರುತ್ತು[7]ಗಳುಂ ॥ ೧೬೫

ಸೂತ್ರಂ ೪೪

ಅನುಸಂಧಿಸಿ ಕೃತ್ಸ್ನವ್ಯಂ
ಜನಂಗಳಿರೆ ಮುಂದೆ ಬಿಂದು ಪರಿವರ್ತಿಸುಗುಂ ।
ಮನದೊಳ್ ವರ್ಗಂ ಪರಮಾ
ಗಿ ನಿಲೆ ವಿಕಲ್ಪದೆ ತದೀಯಪಂಚಮಮಕ್ಕುಂ ॥ ೧೬೬

ಪ್ರಯೋಗಂ ॥
ಪೂರ್ವಾರ್ಧಕ್ಕೆ ॥
ಕುಲಮಂ ಚಲಮಂ ವಿದ್ಯಾ
ಬಲಮಂ ಶೌರ್ಯಾವಲೇಪಮಂ ಪೊಗದೆ ನೆಲಂ ।

---

1 ಲಂಘ್ಯನಿಯತ (ಓ.ಅ). 2 ನವಯವಮು, ನವಯವ್ಯನಮು (ಅ.ಮ).
3 ಮಂತ್ರ (ಓ). 4 ಡೆಲರ (ಓ.ಮ). 5 ಕಱು (ಅ). 6 ಮಿಕ್ಕಿನವಾಕ್ಷಪ (ಓ.ಮ).
7 ನೀರೊತ್ತು (ಓ.ಮ).

ನೆಲಕೆಲ್ಲಂ ನೆಗಟ್ಟಿಂ ದ್ವಿ
ಟ್ಕುಲಕುಲನಗದಳನಪಟುಪವಿಪ್ರತಿಮಭುಜಂ ॥ ೧೯೭

ಅಪರಾರ್ಧಕ್ಕೆ ॥
ಪಂನಗತಳ್ಪಡ್ಡಂನಹ
ರಂ ನಗಧರನಸುರಮರ್ದನಚ್ಚಕ್ರಿ ಮುಕು ।
ನ್ವಂ ನಳಿನನಾಭ[1] ನೇಗೊಳ
ಲೆನ್ನಂ[1] ಬಲಗರ್ವದಿಂದಿದಿರ್ಚುವನಾವಂ ॥ ೧೯೮

ಇದು ಶಬ್ದಸ್ಮೃತಿಯೊಳ್[5] ನಾಮಪ್ರಕರಣಂ ದ್ವಿತೀಯಂ.

ಸಮಾನ ಪ್ರಕರಣಂ

ಸೂತ್ರಂ ೪೫

ಸಂಗತಿಯಿಂದಂ ನಾಮಪ
ದಂಗಳವೇಕಾರ್ಥಗತಿಯೊಳಾಗೆ ಸಮಾನಂ ।
ಸಂಗಳಿಸುಗುಂ ವಿಭಕ್ತಿಗ
ಣಂಗಳ್ಗಂತರದೊಳಲ್ಲಿ ಲೋಪಮುದಕ್ಕುಂ ॥ ೧೯೯

ಅದೆಂತೆನೆ ॥
ಕಡುಗಾಡಿ ನಾಡೆಯುಂ [2]ಕ
ಣ್ಗೆಡಱಿ[2] ಮನಂ ಬೆರ್ಚೆ ಸುತನ ಬರ್ಪಂದುಂ ಚೆ ।
ಲ್ವೊಡರಿಸಿ [3]ಬಲ್ಪಡಿ[3]ವಿಡಿದುದು
ತೊಡರ್ದಳಿಪಿಂ ನೋಲ್ಪ ನೋಟಕರ್ಕಳ ಮನಮಂ ॥ ೨೦೦

ಕಟಿದ ಮನಃಪ್ರಿಯವಿರಹದಿ
ನಟಲ್ದು ಬಸವಟಿದು ಮೋದೆ [4]ತನ್ನುರ[4]ದೊಳ್ ಬಾ ।
ಸುಟ ತಳ್ಪ ಶೋಕಶಿಖಿಯಂ
ಕಟಲ್ಚಲೆಂದೊಟ್ಟಿದನುಗೆದ್ದಳಿರಂ ಪೊಲ್ಕುಂ ॥ ೨೦೧*

ಅಂತುಮಲ್ಲದೆಯುಂ ॥
ಬಲಿಯ ಮಾಂತದ ಬೇಟದೊಳ್[5] ಪೊಲಗೆಟ್ಟು [5]ಬಿಚ್ಚನೆ[5] ಬಿಟ್ಟ ಕ
ಣ್ಮಲರ್ಗಳಂ ಮರೆ[6]ದಿಟ್ಟಿ[6]ನೆಯ್ತರೆ ಕಾಯ್ದನುಂಗೊಳೆ ದೈತ್ಯನಂ ।

---

1 ನಿನಗೊಳನೆನ್ನಂ (ಓ.), ನೀಗೋವಳನಂ (ಮ.), ನೆಲಗೊಳಲೆನ್ನಂ (ಅ). 2 ಕಣ್ಗೆದಱಿ, ಕಣ್ಗೆಡಪೆ (ಅ). 3 ಬಲ್ಪಕೆ, ಬಲಪೀ (ಅ). * ಈ ಪದ್ಯಕ್ಕೆ ಹಿಂದೆ–ಅಲ್ಲಿ ಗಮಕತ್ವಕ್ಕೆ–ಎಂದು ಕೆಲವು ಪ್ರತಿಗಳಲ್ಲಿ ಇದೆ. 4 ತಮ್ಮುರ (ಅ). 5 ಬೆಚ್ಚನೆ (ಅ.ಇ). 6 ದಿಟ್ಟಿ (ಓ.ಮ).

ಪೊಲಸು ನಾರ್ಪಿನೆಗಂ ತ್ರಿಶೂಲದಿನೊತ್ತಿ ಕೊಂದ ಕುಮಾರಿ ಕೂ
ರ್ತಲನದಿರ್ಕೆ ಭುಜಾಸಿಧಾರೆಯೊಳಂಕಮುಳ್ಳರದೇವನಾ ॥ ೨೦೨

ಆ ಜಂಬೂದ್ವೀಪ ಮಹಾ
ರಾಜಕಿರೀಟಾನುಕಾರಿ ಚಾಮೀಕರವಿ ।
ಭ್ರಾಜಿತಕಟಕ[1]ಮಗೇಂದ್ರ[1]ಸ
ಮಾಜಚಮೂಚಕ್ರವರ್ತಿ ಮಂದರಶೈಲಂ ॥ ೨೦೩*

ಸೂತ್ರಂ ೪೬

ಉತ್ತರಪದದರ್ಥಂ ಮೆ
ಯ್ಪೆತ್ತಿರೆ ತತ್ಪುರುಷಮಂತದೇಕಾಶ್ರಯಮಾ ।
ಗುತ್ತುಮಿರೆ ಕರ್ಮಧಾರಯ
[2]ಮೆತ್ತಂ[2] ದ್ವಿಗುಸಂಜ್ಞಮದುವೆ ಸಂಖ್ಯಾದಿಪದಂ ॥ ೨೦೪

ಪ್ರಯೋಗಂ ॥

ತತ್ಪುರುಷಕ್ಕೆ ॥

ಅರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬ
ಲ್ಲರ ಬಗೆಗಲ್ತು ಪನ್ನುಕೃತಿಯಂ ಸರೆ ಪೇಳ್ವುದು ಕಲ್ತು ಪೇೞದಂ ।
ದರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬ
ಲ್ಲರ ಬಗೆಗಲ್ತದಾವೆಡೆಗಮಲ್ತದು [3]ಕಲ್ಪಿ[3] ವಲಂ ಕವೀಂದ್ರರಾ ॥ ೨೦೫

ಕರ್ಮಧಾರಯಕ್ಕೆ ॥

ಅಲರ್ಗಣ್ ಪೊಂಗಿದ [4]ಲೋಳೆ[4]ವಾಯ್ ನಗೆಮೊಗಂ ತೊಂಗಲ್ಗುರುಳ್ ಕೆಂದಳಂ
ಸುಲಿವಲ್ ನೋರ್ಮುಡಿ ತೆಳ್ವಸಿಱುಂ ಪೆಱುನೊಸಲ್ ಪೊಂಬಾಳೆ ಪಚ್ಚೊಲೆ ನೇ।
ಱಿಲ ಪಣ್ಣಂ ತಿಳಿಯೆನ್ನೆಯೊಳ್ ಬಯಸಿ ತೊಯ್ದಂತಪ್ಪ ನುಣ್ಗಪ್ಪು ಪೆ
ರ್ಮೊಲೆ ಚೆಲ್ವಾಗಿರೆ ನಿಂದ ಬೇಡಿತಿಯರಂ ಕಂಡಂ ಮಹೀವಲ್ಲಭಂ ॥ ೨೦೬

ದ್ವಿಗುವಿಂಗೆ ॥

ಇರ್ವಾಳ್ ಮೂವಾಳಿಕ್ಕಿ
ರ್ದುರ್ವರೆಯೊಳ್ [5]ಬೆಳಿಗೆ ನಾರೆ[5] ಕೊಳೆ ಪದವಡೆಗಳ್ ।
ಕರ್ವಿನ ಪುಡಲಂತೆ ಕವ
ಲ್ತುರ್ವಿದ ಕೆಯ್ವೊಲಗಳಿಸೆ[6]ಗುಮೋ[6]ರೊಂದೆಡೆಯೊಳ್ ॥ ೨೦೭

ಸೂತ್ರಂ ೪೭

ದ್ವಿಪದಂ ಮೇಣ್ ಬಹುಪದಮ
ನ್ಯಪದಾರ್ಥದೊಳೊಂದಿ ನಿಲೆ ಬಹುವ್ರೀಹಿ ಸಮ ।

---

* ಈ ಪದ್ಯವು ಕೆಲವು ಪ್ರತಿಗಳಲ್ಲಿ ಇಲ್ಲ. 1 ಮೃಗೇಂದ್ರ (ಓ.ಮ). 2 ಮತ್ತಾ (ಓ.ಮ). 3 ಕಬ್ಬು. 4 ಲಾಳೆ (ಅ.ಇ). 5 ಬೆದಗೆಸಾರೆ (ಅ). 6 ದುಪೋ. (ಅ).

[1]ನ್ತ ಪದಾರ್ಥ೦[1] ದ್ವಂದ್ವಂ ಪೂ
ರ್ವ ಪದಪ್ರಾಧಾನ್ಯಮವ್ಯಯಿಾ[2]ಭಾವಾಖ್ಯಂ[2] ॥ ೨೦೮

ಪ್ರಯೋಗಂ ॥

ಬಹುವ್ರೀಹಿಗೆ ॥

ಕುಡುವಿಲ್ಲನೆಚ್ಚ ಸರಲುಂ
ನಡದು ದಲಂದೊರ್ವನೆರ್ದೆಯನೊಳ್ಕಬ್ಬಮುಮೊ ।
ಳ್ನುಡಿಯುಂ ಗೇಯಮುಮುರ್ಚದ
ಕಡುಗರ್ಗೆರ್ದೆಯೆರ್ದೆಯನಂಬು ಮೇಣುರ್ಚುಗುಮೇ ॥ ೨೦೯

ಪಟ್ಟುಕಮೂಗಿನ [3]ಮರವುಲಿ
ಪೊಚ್ಚೆಯ[3] ಕುಸಿಗೊರಲ [4]ಕೆಂಚುದಲೆ[4]ನವಿರ [5]ಕರಂ[5] ।
ಕೆಟ್ಟೊಡೆದ [6]ನರ[6]ದವಂ [7]ಕಡೆ
ಪಟ್ಟು[7] ಮನಂಗೆಟ್ಟು ನಾಡುನಾಡಂ ತಿರಿಗುಂ ॥ ೨೧೦

ದ್ವಂದ್ವಕ್ಕೆ ॥

ಕಱುಮಱುಗಳೊಳವು ನೋಪ್ಪೊಡೆ
ಪೆಱಪೆಱರ ಕುಲಕ್ಕೆ ಕೊಂಡಕೊಟ್ಟೆಡೆಗಳೊಳಂ ।
ಕಱುಯಿಲ್ಲ ತ್ಯೆಲನಲ್ಲದೆ
ಪೆಱನಾಪೊಂ [8]ಪಿಕ್ಕಿ[8] ನೋಪ್ಪೊಡಿರ್ತಲೆ[9]ಗೋಜಂ[9] ॥ ೨೧೧

ತೊಱಗೆಲೆ ಱಟ್ಟಹಳ್ಳಿ ನೆಗಪ್ಪಾ ಜಿರಗೋಳವೆನಿಪ್ಪಗುರ್ವುವೆ
ತ್ತಱುಕೆಯ ಬೇಡವಟ್ಟುಗಳ[10]ಬೂತುಗ[10]ಬೀರುಗ[11]ಗೋಯೆ[11]ಯರ್ಕಳಂ ।
ನೆಱಯರೆನಿಪ್ಪೊಡಂ ಕಿಡಿಸಲಂಕದ ಮುನ್ನಿನ ಚಕ್ರವರ್ತಿಗಳ್
ಪೆಱರಳವಲ್ತುವಂ [12]ಕಿಡಿಸಿತೊಟ್ಟಜೆ[12] ತ್ಯೆಲಪಚಕ್ರವರ್ತಿಯಾ ॥ ೨೧೨

ಅವ್ಯಯಾಭಾವಕ್ಕೆ ॥

ಸಂತಂ ಕಿಕ್ಕೆಱಿಗಳೊಳೋ
ರಂತಿರೆ ಕೆಯ್ಗಾವವಳ್ಳಿರಂ ನೋಱ್ಪವರಂ ।
ಮಿಂತಲೆವಾಯ್ತುರೆ ಪೊಱಮು
ಯ್ಪಂ ತಾಗಿರೆ ತೆಗೆದು ಮದನನಾರ್ದಿಸುತಿರ್ಪಂ ॥ ೨೧೩

ಸೂತ್ರಂ ೪೮

ಪತ್ತಿರೆ ಕಾರಕದೊಳ್ ಮುಂ
ದೊತ್ತಿ ಸಮರ್ಥಕ್ರಿಯಾಪದಂ ಪದವಿಧಿ ತಾ ।

---

1 ಪದಪದಾರ್ಥ (ಅ). 2 ಭಾವಾರ್ಥಂ (ಅ). 3 ಮರದುಲದೊಚ್ಚೆಯ (ಅ). 4 ಕೆಂದಲೆಯ (ಅ). 5 ಕರ್ವಂ (ಅ). ಕಲಂ (ಮು). 6 ಕರೆ. 7 ಬಗೆಗೆಟ್ಟು (ಓ.ಮು). 8 ಬಕ್ಕೆರ್. 9 ಗೊಲಜಂ (ಓ.ಮು). 10 ಬೂತಗ (ಓ). 11 ಗೋಲೆ (ಓ.ಮು). 12 ಕೊಡಿಸಿದೊಟ್ಟಜೆ (ಓ). ಕೆಡಿಸಿದೊಟ್ಟಜೆ (ಅ.ಮು).

ನೊತ್ತರಿಸುಗುಮದಱೊಳ್ ತ
ೞ್ತೆತ್ತಮದಂತಕ್ಕೆ ಬಿಂದು ಸಂದಿಸಿ ನಿಲ್ಕುಂ ॥ ೨೧೪

ಪ್ರಯೋಗಂ ॥
[1]ಊರೇಱಲ್[1] ಮನೆಮಾಡ
ರ್ಕಾರಂಬಂಗೆಯ್ಯಲೆಬ್ಬುಗೊಳಲಾಳಾ[2]ೞ್[2] ।
ರ್ಕಾರಾಮಮಿಡಲ್ಕೆಂದುಂ
ದಾರುಣತಾರೆಗಳನುಟಿಯೆ ಪೆಱವಱೊಳುಚಿತಂ ॥ ೨೧೫

ಸೂತ್ರಂ ೪೯

ಉತ್ತರಪದಂ ವಿಶೇಷ್ಯದೊ
ಳೊತ್ತರಿಸಿರೆ ಪೂರ್ವಪದದುಪಾಂತ್ಯಸ್ವರದಿಂ ।
[3]ದತ್ತಿರ್ದುವರ್ಕೆ[3] ಲೋಪಂ
ಮತ್ತಮಿಕಾರಕ್ಕೆ ಬಹುಳಮಕ್ಕುಮೆಕಾರಂ ॥ ೨೧೬

ಪ್ರಯೋಗಂ ॥
ಪೆರ್ಮರನನಡರ್ದ [4]ವನಲತೆ[4]
ಕಾರ್ಮುಗಿಲಂ ತಳ್ತ ಮಿಂಚು ವಿಂಧ್ಯಾಚಲಮಂ ।
ನೆರ್ಮಿದ ನರ್ಮದೆಯೆನಿಸಿದ
ಳೊರ್ಮೆಯೆ ವನಚರನನಪ್ಪಿ ವನಚರಿಯೊರ್ವಳ್[5] ॥ ೨೧೭

ಬಹುಳಗ್ರಹಣಕ್ಕೆ ॥
ಪ[5]ಣ್ಣಾಯ ತಳ್ತ ತುಱುಗಲ[5]
[6]ಬಿಣ್ಗೊನೆ[6]ಯಿಂ ತೂಗಿ ತೊನೆವ ಕೌಂಗಂ ತನ್ನ ।
ತ್ತಣ್ಗೆ ಬರೆ ತೆಗೆವ ತೆಱದಿಂ
ಕಣ್ಗೊಳಿಸಿದುದೆಳಸಿ ನಾಗಲತೆ ದಾಂಗುಡಿಯಿಂ ॥ ೨೧೮

ಸೂತ್ರಂ ೫೦

ಸ್ವರಮಾದಿಯಪ್ಪವವು ಮುಂ
ತಿರೆ ದೀರ್ಘಂ ಮೊದಲೊಳಗುರುಗಕ್ಕುಂ ತದವಾಂ ।
ತರದೊಳ್ ಣ ಟ ಳ ನ ತಂಗಳ್
ದೊರೆಕೊಳೆ ತಳೆಗುಂ ದ್ವಿರುಕ್ತಿಯಂ ಬಹುಳತೆಯಿಂ ॥ ೨೧೯

---

1 ಊರತಱಲ್ (ಓ.ಮ). 2 ಗ (ಅ). 3 ದೆತ್ತಿರ್ದುದಕ್ಕೆ (ಓ.ಮ). 4 ನವ ಲತೆ (ಓ). 5 ಣ್ಣಾಯ್ . . . . ತುಱುಂಗಲ (ಅ.ಇ). 6 ಬಿಣ್ಗೊಲೆ.

ಪ್ರಯೋಗಂ ।।

ಪೂರ್ವಾರ್ಧಕ್ಕೆ ॥

ಕಾರೊನಡುಂ ಕರ್ಬಾಯುಂ
ಮೇರೊಡಲುಂ ತೊಳಪ ದಾಡೆಯುಂ ಪೆರ್ಬಸಿಱುಂ ।
ಕ್ರೂರೇಕ್ಷಣಮುಂ ದನುಜಾ
ಕಾರ[1]ಮನೊಡರಿಸೆ[1] ನಿಶಾಟರರ್ವಿಸಿ ತೋರ್ಪರ್ ॥ ೨೨೦

ಅಗುರುಗ್ರಹಣಕ್ಕೆ ॥

ಮೇಲುದಂ ಮಱೆದು ಮೆಯ್ಮಱೆದೊರ್ವಳೊಱಲ್ದು ಮುಂ
ಬಾರೆಯಂ ತಿರಿಪಿ ನೂಂಕಿ ಪವಿತ್ರಮನಿಟ್ಟು ಪ ।
ಚ್ಚೋರೆವಚ್ಚದೊಳೊಡಂಬಡೆ ಬಂದು ವಿದಗ್ಧೆ ಭೂ
ಪಾಲನಂದನನನಂದರುಣಾಧರೆ ನೋಡಿದಳ್ ॥ ೨೨೧

ಣಕಾರಕ್ಕೆ ॥

ಪಣ್ಣನೆ ತೊಱಲ್ದು ತೀಡುವ
ತಣ್ಣೆಲರೊಳೆಲರ್ಚಿ ವನಚರವ್ರಜಮದಱೊಳ್ ।
ತಣ್ಣನೆ ತಣಿದಿರೆ [2]ಬನದೊಳ್[2]
ಪಣ್ಣನೆ ತಿನುತಿರ್ಪುವೆಳಸಿ ತರುಚರಕುಳಮುಂ ॥ ೨೨೨*

ಟಕಾರಕ್ಕೆ ॥

ನಿಟ್ಟೆಯ್ದಿಯಾಗು [3]ಪತಿಯೊ[3]ಳ್
ತೊಟ್ಟನುವಳೆಯಾಗು ಶೀಲವತಿಯಾಗು ಚಿರಂ ।
ನಿಟ್ಟಾಯುವಾಗು ನೀನೆಂ
ದಿಟ್ಟರ್ ಸೇಸೆಯನಗಣ್ಯಪುಣ್ಯಾಂಗನೆಯರ್ ॥ ೨೨೩

ಳಕಾರಕ್ಕೆ ॥

ಅಳ್ಳಾಡೆ ನರನ ಕೂರ್ಗಣೆ
ಯಳ್ಳೇಱುಂಗಳ್ಕಿ ಬಳ್ಕಿ ಕುರುಬಲಮೆಲ್ಲಂ ।
ಬೆಳ್ಳೋಟ[4]ಮೋಡೆ[4] ನಕ್ಕಿನಿ
ಸೊಳ್ಳಾಳೆಡೆಗೋದನೊದಱು ಚಟ್ಟನೊಳೊವಜಂ ॥ ೨೨೪

---

1 ಮುಮೊಡರಿಸೆ (ಅ).

* ತೀಡುವ ತಣ್ಣೆಲರೊಳಲ
ರ್ಚಾಡುವ ವನಚರವ್ರಜಮುದಱೊಳ್ ತ ।
ಣ್ಣಾಡನೆ ದಣಿದಿರೆ ಪೀನಂ
ಪಣ್ಣಾಡನೆ ತಿಂದಿರ್ಪುವೆಳಸಿ . . . . . ॥
(ಎಂದು ತಿದ್ದಬೇಕು ಎಂದು ಮು. ಪ್ರತಿಯಲ್ಲಿ ಬರೆದಿದೆ).

2 ಪೀನಂ (ಅ). 3 ಸತಿಗೋ (ಓ.ಮು). 4 ಮಾಡೆ (ಮು).

ನಕಾರಕ್ಕೆ ॥

ಇನಿಯಳ [1]ತನಿಸೊಂಕಿನ್ನುಣ್[1]
ನೆನೆ ಮಾರ್ಯಾಧರಣಲೇಪನಂ ತಂಬುಲಮೆಂ ।
ಬಿನಿತುಂ [2]ರಾಗಮನಾಗಿನೆ
ಮನ[2]ದೊಳ್ ದಿವಿಜೇಂದ್ರವಿಭವದಿಂ ಸುಖಮಿರ್ದಂ॥ ೨೨೫

ತಕಾರಕ್ಕೆ ॥

ಮಡದೊಳೊಂದುವುದೆತ್ತ ಕಿತ್ತಡಿಗಳ್ಗೆನಿಪ್ಪ ತೊಳಪ್ಪುವಾ
ಮಡದೊಳೊಂದಿಯೆ ನಿಂದ ಕಿತ್ತಡಿಗಳ್ಗೆ ನಿತ್ಯನಿಯಾಮದಿಂ ।
ಪೊಡೆವಡಿಂ ಗಡಿಮೆಂದು ನೀಱುರನೂಱಿ [3]ಸಾಱುವ[3] ಮಾಡ್ಕೆಯಿಂ
ಪೊಡೆವ ಡಿಂಡಿಮಮೆಂಬಿನಂ ಕಳನೂಪುರಧ್ವನಿ ಪೊಣ್ಮುಗುಂ ॥ ೨೨೬

ಬಹುಳಗ್ರಹಣಕ್ಕೆ॥

ಅಂಚೆಯರಗಿಳಿಯ ಪುರುಳಿಯ
ಕೊಂಚೆಯ ಕೋಗಿಲೆಯ ನವಿಲ ಪಾರಾವತದೊಂ ।
ದಿಂಚರದಿಂದಂ ಶಬ್ದಾ
ತ್ಮಂ ಚರಮಚರಂ ಜಗಂ ದಲೆನಿಸಿದುದು ಬನಂ ॥ ೨೨೭

ಸೂತ್ರಂ ೫೧

ಕಡಿದು ನಿಡಿದೆಂಬಿವೆರಡಱ
ಕಡೆಯೊಳ್ ಟತ್ವಂ ತಕಾರಮಕ್ಕುಂ ಕಿಱಿವೆಂ ।
ಬೆಡೆಯೊಳ್ ಸ್ವರಮಿರೆ ತಾಮವು
ಪಡೆಗುಮುಕಾರಾಂತಭಾವಮಂ ವ್ಯಂಜನದೊಳ್ ॥ ೨೨೮

ಪ್ರಯೋಗಂ ॥

ಕಟ್ಟಾಯದ ಕಣಿ ಪೆಂಪಿನ
ಕಟ್ಟಳೆ [4]ಚೌಟದ ಮೇರು[4] ನನ್ನಿಯ ತವರೂರ್ ।
ನೆಟ್ಟನೆನಿಸಿದ ಜನಂ ನೇ
[5]ರ್ವ[5]ಟ್ಟಿ[6]ರೆ ನಿಟ್ಟಾಯುವಕ್ಕೆ[6] ದುಟ್ಟ[7]ತಳಕ್ಕಂ[7] ॥ ೨೨೯

ಬಾಡೆಯ ಖರ್ಜೂರದ ಕಿ
ತ್ತೀಡೆಯ ಕರ್ಮುರದ ಮಾವಿನರನೇಱಿಲ ಕಂ ।
ಚೀಡೆಯ ಪಲಸಿನ ಮರದಿಂ
ನೂಱುದುಮೆನೆದಿರ್ಕುಮದಱ ಬಹಿರುದ್ಯಾನಂ ॥ ೨೩೦

---

1 ತಳಸೊಂಕಿನ್ನುಣ (ಅ). 2 ತುಗಮನಾಗಿಸಿತಾ ಮನ್ಮನ (ಮ). 3 ನೂಱುವ (ಅ). 4 ಚೌತನದ, ಮೇಗು (ಓ.ಮ). 5 ರ್ಪಟ್ಟಿ. (ಓ.ಮ). 6 ರನಿಟ್ಟಾಯತಕ್ಕೆ (ಓ.ಮ), ರೆದಿಟ್ಟಾಯವಕ್ಕೆ (ಅ). 7 ತುಳಕ್ಕುಂ, ತಳಕ್ಕುಂ (ಅ).

ಉದಂತಕ್ಕೆ ॥

[1]ತೊಡೆಯಿಂ[1] ಕಡುಗುದುರೆಗಳಂ
ಮಡದಿಂ [2]ನಡು[2]ಪಟ್ಟ ದಂತಿಯಂ ನಿಡುದೋಳಿಂ ।
ಕಡುವಾಳಂ ಕೂರಸಿಯಿಂ
ಕಡಂಗಿ[3]ದಣ್[3]ಯಂ ಸಮಂತು ಬಸದಾಗಿಸುವಂ ॥ ೨೩೧

ಕಿಱುನೆರೆಯ ಲತಾಲಲಿತೆಗೆ
ತಿಱಿದುಕೊಳಲ್ಕಪ್ಪ ನಾರ್ಕೆಯೊಳ್ಗೊಂಬುಗಳೊಳ್ ।
ತುಱುಗಿದ ತಳಿರಿಂ ನನೆಯಿಂ
ಕಿಱುಮಿಡಿಯಿಂದೆನೆದುದನದಳಂ ಮಾಕಂದಂ ॥ ೨೩೨

ಸೂತ್ರಂ ೫೨

ಪಚ್ಚನೆಯುಂ ಕೆಚ್ಚನೆಯುಂ
ಬೆಚ್ಚನೆಯುಮೆನಿಪ್ಪ ಶಬ್ದದಂತಕ್ಕಕ್ಕುಂ।
ಬೆಚ್ಚಂತಿರೆ ಮತ್ವಂ ಕೆಲ
ರಿಚ್ಚಯಿಪರ್ ಸ್ವಂತಮುಮ[4]ನೆಕಾರೇತ್ವ[4] ಮುಮಂ ॥ ೨೩೩

ಪ್ರಯೋಗಂ॥

ಮತ್ವಕ್ಕೆ ॥

ಪಂದಳಿರ ತೋರಣಂ ತ
ಳ್ತೊಂದಿದ ಕೆಂಗುಡಿಯ ಪುದಿವು ಮುತ್ತಿನ [5]ಕಡೆ[5] ಚೆ ।
ಲ್ವಂದೆಸೆವ ಮಂಗಳಾನಕ
ದೊಂದು ರವಂ ಬಗೆಗೆ ವಂದುದಂದರಮನೆಯೊಳ್ ॥ ೨೩೪

ಎನಿತುಂ ಕಾಯ್ದುಂ ಬೆಂನೀರ್
ಮನೆಸುಡದೆಂಬಂತೆ ನಿನಗವರ್ ನಿಲೆ ಕಾಯ್ದುಂ ।
ಮನದೊಳ್ [6]ಪೊಲ್ಲದ[6]ನೆಂತುಂ
ನೆನೆಯರಿದಂ ನಂಬು ಕುರುಕುಲಾಂಬರಭಾನೂ ॥ ೨೩೫

ಸ್ವಂತಕ್ಕೆ ॥

ಪನುವ್ರೊನ್ನ ಜಗಲಿ ಪಚ್ಚೆಯ
ಪನುರ್ವಂದರ್ ಮುತ್ತಿನಕ್ಕಿ ನೀಲದ ಜಾಗಂ ।
ಕಿನುಗಲ್ಲರುಣಸರೋರುಹ
ಮೆನೆದಿರ್ದುವು ರಾತ್ರಿಮತಿಯ ಬೀಡಿನೊಳೆತ್ತಂ ॥ ೨೩೬

---

1 ಉಡೆಯಿಂ (ಓ.ಮ). 2 ನಡೆ (ಅ). 3 ದರಿ (ಮ). 4 ನೆಕಾರತ್ವ (ಅ), ನಿಕಾರೆತ್ವ (ಅ.ಇ). 5 ಕೊಡೆ. 6 ಪೊಲ್ಲಮ (ಅ).

[1]ವಾಸರ[1]ಪತಿ ಬಿಸುಗದಿರಿಂ
ಪೇಸದೆ ತವೆ ಪೀರ್ಗುಮೆಂಬ ಮಱುಕದೊಳಂಭೋ ।
ಜಾಸನನಂಬುಜವನಮಂ
ಬಾಸಣಿಸಿದನೆನಿಪು[2]ವಿಡಿದ[2] ತಾವರೆಯೆಲೆಗಳ್ ॥ ೨೩೭

* ಏತ್ಪಕ್ಕೆ ॥

ಬೇಸಱಿಸುವಂಗಜಾಗ್ನಿಯ
ಕೇಸುರಿ ಕೊಳೆ ಕಟಿದ ಪತಿಯ ವಿರಹದಿನಾಗಳ್ ।
ಕೀಸುಗಳೆ[3]ದಂತೆ[3] ಕಡಗಮ
ನಾ ಸತಿ ಕಳೆದಿತ್ತಳಾತ್ಮಕರಪಲ್ಲವದಿಂ ॥ ೨೩೮

ಸೂತ್ರಂ ೫೩

[4]ಪ್ರೊಸತು[4] ಪಟದೆಳದು ಪ್ರೊಱಗೊಳ
ಗು ಸಮ[5]ಮೆನಿಪ್ಪಿ[5]ವಱೊಳತ್ಪಮಂತಕ್ಕೆ ನಿಪಾ ।
ತಿಸೆ ಪಡೆಗುಮವಱೊಳೊಳಗಿಂ
ಗನಂಗದಿಂ ಸಮನಿಸಿರ್ಕುಮುಳ್ಳಾದೇಶಂ ॥ ೨೩೯

ಪ್ರಯೋಗಂ ॥

ಪ್ರೊಸದೇಸೆಯಂ ಬೆಡಂಗಂ
ರಸಪುಷ್ಟಿಯನರ್ಥಸೃಷ್ಟಿಯಂ ಬಗೆವರೆ ಭಾ ।
ವಿಸುವರೆ [6]ಸಾರಣಿಗೆಯಪ್ರೊಲ್[6]
ಕಸವನೆ ಪಿಡಿವರ್ ಕೆಲರ್ ಮಹಾಪುರುಷರ್ಕಳ್ ॥ ೨೪೦

ತುಟಿಕಲಡುಗೆಗಳೊಳೇಂ ಪಟ
ಗಟವೆಯ ಕೂಡ್ ತಿವುಡುಗಳೆದ ತೊವರಿಯ ತೊವೆ ಕಾ ।
ಯ್ದಿಟಿಪಿದ ತುಪ್ಪಂ ಕೋಡುವ
ಕಟಲಲ್ಲದೆ ದಿವ್ಯಭೋಜನಂ ಪೆಱತುಂಟೇ ॥ ೨೪೧

ಎಳದಳಿರ ತುಱುಗಲೊಳ್ ನೆಱೆ
ದಳದಳಿಪೆಳಮಾವಿನಳ್ಳಿಗೊಂಬಂ ತಳ್ಪೊ ।
ಯ್ದೆಳಸಿದ ವಸಂತದೂತಿಯ
ಮಿಳಿರ್ವುಯ್ಯಲನಾಡುವಬಲೆ ಪಾಡಿದಳೊರ್ವಳ್ ॥ ೨೪೨

---

1 ವಾಸವ (ಓ.ಮ). 2 ಪೆಸೆವ (ಅ). * ಯೋಗಭಾವದಿಂ–(ಯೋಗ ವಿಭಾಗದಿಂ) ಕೇವಲ ಸ್ವಂತಕ್ಕುದಾಹರಣೆ–ಎಂದು,-(ಓ.ಮ.) ಪ್ರತಿಗಳಲ್ಲುಜೆ. 3 ವಂತೆ (ಓ.ಮ). 4 ಪೊಸದು (ಅ). 5 ಮೆನಿಪ್ಪ (ಅ). 6 ಸಾರಣಿಯಂತಿರೆ (ಓ.ಮ).

ಅಳವಿಗಟಿದುರುನಿತಂಬ
ಸ್ಥಳಭಾರಮನಾಂತ ಕಾರ್ಗೆ ಪೊಱ[1]ಅಡಿ[1]ಗಳೊಳೀ ।
ಲಳಿತತುಳಾಕೋಟಿಗಳಂ
ತಳೆವುದದೇವಿರಿದೊ ಮದಗಜಾಲಸಗತಿಯಾ ॥ ೨೪೩

ಒಳಕೆಯ್ಯೊಳಿರ್ದು ಪಲ್ಲರಿ
ದೊಳವಾಲಂಗೊಂಡು ಪೊರೆವ [2]ಭಷಕನ[2] ತೆಱದಿಂ ।
ದೊಳಪೊಕ್ಕು ದುರ್ಗಮಂ [3]ಸಂ
ಚಳ[3]ಚಿತ್ತಂ ನುಡಿಗುಮೆಮಗೆ ಬಲ್ಗಂಡಿಕೆಯಂ ॥ ೨೪೪

ಸಮ[4]ಸುತಿ[4]ಯೊಳೊಂದಿದೊಳ್ಪಿನ
ರಮಣೀರಮಣೀಯಗೇಯಮಾನಾಖ್ಯಿಕೆಯೊಳ್ ।
ಸಮಸಂದಮರ್ದಿನ ಸರಿವಪೆ
ಸಮಂತು ಕಱು[5]ದಪ್ಪುದೆಂ[5]ಬಿನಂ ರಂಜಿಸುಗುಂ ॥ ೨೪೫

ಒಳಗುಳ್ಳೋವಣಮಮರ್ದಿರೆ
[6]ಚಳನಂ[6] ಪೊಱಗೆಸೆಯೆ ಬೆಳಪನೆಯ್ದುವ ಬೆಳಗಂ ।
ಪೊಳೆವ ಸುಲವಲ್ಲಿ ಮಸುಳಿಸೆ
ವಿಳಾಸದಿಂ ದರ್ಭಶಯನತಳಗತನಾದಂ ॥ ೨೪೬

ಸೂತ್ರಂ ೫೪

ತತ್ಪುರುಷಸಮಾಸದೊಳು
ದ್ಯತ್ಪೂರ್ವಪದಾಂತ್ಯಲೋಪಮಕ್ಕುಂ ಪ್ರಚುರಂ ।
ವ್ಯತ್ಪಾದಿಸಲ್ಕೆ ಪಡೆಗುಂ
ತತ್ಪರದೊಳ್ ಬಟಿಯಮುಚಿತವರ್ಣಾಗಮಮುಂ ॥ ೨೪೭

ಪ್ರಯೋಗಂ ॥
ಅರನೇಱುಲ ಪೊಂಬಾಡೆಯ
ಸುರಯಿಯ ಮಾಮರದ ಬಕ್ಕೆವಲಸಿನ ಪುದುವಿಂ ।
[7]ಪರೆ[7]ದುರ್ಬಿದ ಕಬ್ಬುಲೆ ದಿನ
ಕರಾಂಶುಗಳ್ಗಂ ವಿಭೇದಿಸಲ್ಕರಿದದಱೊಳ್ ॥ ೨೪೮

ಪ್ರಚುರಗ್ರಹಣಕ್ಕೆ ॥
ಅರನುಗುಣಂಗಳನತಿಭೀ
ಕರಕಾಂತಂಗಳನವಂ ವಿಯಚ್ಚರರಾಜಂ ।

---

1 ಮಡಿ (ಅ). 2 ಭಷಕವ (ಓ.ಮು). 3 ಚಂಚಳ (ಓ.ಮು). 4 ನ್ಯತಿ, ಶ್ರುತಿ (ಅ). 5 ದಪ್ಪುವೆಂ (ಓ.ಪು). 6 ಚಳಪ್ಪೋಂ (ಅ). 7 ಪರಿ (ಅ).

ಧರಿಯಿಸಿದಂ ಜಳನಿಧಿ ಜಳ
ಚರಚಯಮಂ ರತ್ನಚಯಮುಮಂ ಧರಿಯಿಪಪೊಲ್ ॥ ೨೪೯

ಅಪರಾರ್ಧಕ್ಕೆ ॥

ಮಾಂಗಾಯಗೊಂಚಲೊಳಗುಳಿ
ದಿಂಗೊರಲಂದುಲವ ಗಂಡುಗೋಗಿಲೆ[1]ಗಳರ ।
ಲ್ಲೊಂಗಲ[1] ನಿಱಿದಳಿರೊಳಗೆ ಜಿ
ನುಂಗುವ ಪೆಣ್ದುಂಬಿಗಳುಮಳುಂಬಂ ಬನದೊಳ್ ॥ ೨೫೦

ಸೂತ್ರಂ ೫೫

ಪ್ರಾಯಿಕಮಕ್ಕುಂ ದೀರ್ಘಾ
ಮ್ನಾಯಮದಂತೆಲ್ಲ ಶಬ್ದದೊಳ್ ವೃತ್ತಿಗತಂ ।
ಮಾಯೆಂಬುದು ಮಹಿಮಾಭಿ
ಪ್ರಾಯದೊಳೊಂದಿರ್ಕುಮೊಂದಿ [2]ಮಹತೆಂ[2]ಬುದಱೊಳ್ ॥ ೨೫೧

ಬಲ್ಲಂತೆಂತುಂ ಗುಣಮನೊಳ[3]ಕೆಯ್ದಾರ್ಪ[3]ನಾರ್ಪಂದದಿಂದಿ
ನ್ನೆಲ್ಲರ್ದುಂ ಪೊಲ್ಲಮೆಯನುಗುಗೆಂಬುಕ್ತಿಯಂ ನನ್ನಿಮಾಟ್ಪಂ ।
ತಲ್ಲಾ [4]ರತ್ನಂಗಳು[4]ಮನೊಳಕೊಂಡೊಳ್ಪನಂಭೋಧಿ ಲೋಕ
ಕ್ಕೆಲ್ಲಂ ಬೀಱರ್ ಪೊಱಗೆ ಕಸಮಂ ನಿಚ್ಚಮಾಡಾಡುತಿರ್ಕುಂ ॥ ೨೫೨

ಪ್ರಾಯೋಗ್ರಹಣಕ್ಕೆ ॥

ಎಲ್ಲಂಗಮೆಲ್ಲ ಧನಮುಮ
ನೆಲ್ಲಿಡೆಯೊಳಮೆಲ್ಲ ತೆಱದೊಳಂ ಕುಡುಗೆಮ ನಿ ।
ಲ್ಕಲ್ಲದೆ ಬವರದೊಳೀಂ ಗಳ
ಗೆಲ್ಲಂ[5]ಗುಡದಿರ್ಕೆ[5] ಪ್ರೌಢರ್ದೊಡಾಗರ್ಗಂ ಗಂಡಂ ॥ ೨೫೩

ಉತ್ತರಾರ್ಧಕ್ಕೆ ॥

ಮಾದೇವನುಮಾದೇವಿಗೆ
ನಾದರದಿಂ ಪೇೞ್ದನೀತನುತ್ತಮಸತ್ವಂ ।
ಮಾದಾನಿ [6]ಶೌರ್ಯಧನ[6]ನುದಿ
ತೋದಿತಪುಣ್ಯಂ ಹರಿಪ್ರಿಯಂ ನರನೆಂಬಂ ॥ ೨೫೪

---

1 ಯಮಲರ್ದೊಂಗಲ (ಅ). 2 ಮಹದೆಂ, ಮಹಪೆಂ (ಅ). 3 ಕೊಳ್ವಾರ್ಪ (ಅ). 4 ಲೋಕಂಗಳು (ಓ.ಮು). 5 ಕುಡದಿರ್ಕೆ (ಮು). 6 ಶೌರ್ಯಪರ (ಆ), ಶೌರಿಧನ (ಮು).

ಸೂತ್ರಂ ೫೬

ಪರಿಗದಿತಬಹುವ್ರೀಹಿಗೆ
ಚರಮದೊಳಕ್ಕುಂ ಯಥಾ[1]ಪ್ರಯೋಗ[1]ಮಕಾರಂ ।
ಪರಪದಮಿಲ್ಲೆಂ[2]ಬೊಂದಿದು[2]
ದೊರೆಕೊಂಡಿರೆ ಲಿತ್ಪಮಂತ್ಯವರ್ಣಕ್ಕಕ್ಕುಂ ॥ ೨೫೫

ಪ್ರಯೋಗಂ ॥

ಬಲ್ಪಲೆಯಂ ತೋಳ್ನೀಳ್ದನ
ಗಲ್ಪುರದಂ ಬಟ್ಟದೊಡೆಯವಂ ಕೆಂಗಣ್ಣಂ ।
ನೇಲ್ದ ಕವಿಯಾತನೆನಿಸುವ
ನೊಲ್ದೊಲಿಸುಗುಮೆಸೆವ ವೀರಸಿರಿಯಂ ಧುರದೊಳ್ ॥ ೨೫೬

ಉತ್ತರಾರ್ಧಕ್ಕೆ ॥

ಸೊಗಯಿಸುಗುಮೆ ಪಲ್ಲಿಲಿವಾ
[3]ಯಗಿಲಲಿಗಂಧಂ[3] ಸಮಂತು ಕೂರಿಲಿಕುಡುಗೋಲ್ ।
ಮಿಗೆ ನಾಣಲಿಯೆನಿಸುವ ವಧು
ನಗೆಗೆಡೆಯಕ್ಕುಂ ಸಮಸ್ತ ಜಗತೀತಳದೊಳ್ ॥ ೨೫೭

ಸೂತ್ರಂ ೫೭

ಒಂದೆಂಬುದರ್ಕೆ ರೇಫಂ
ಸಂದಿಸುಗುಂ ಕಡೆಯೊಳೆರಡೆನಿಪ್ಪುದಱೊಳ್ ತಾ ।
ನೊಂದಿ ನೆಲಸುಗುಮಿರಾದೇ
ಶಂದಲ್ ಮೇಣ್ ಮೇಣುಕಾರಲೋಪಮದಕ್ಕುಂ ॥ ೨೫೮

ಪ್ರಯೋಗಂ ॥

ಓರೆಂಜಲ್ಗೊರ್ಪಂತಿಗೆ
ವಾರದ ಖಳರೊಡನೆ ಬೆರಸಿ [4]ಮೇಳಂ[4]ಗೊಂಡಂ ।
ದಾರುಂ ಲಘುವಪ್ಪರ್ ಪ್ರ
ಸ್ತಾರದೊಳಮರ್ದಿಂಬ ಶಿಥಿಲಸಂಯೋಗದಪೊಲ್ ॥ ೨೫೯

[5]ಇರ್ಮೆಯ್ಗುಂ[5] ಹಿತಮಂ ಜಿನ
ಧರ್ಮಮನಿಂಬಾಗಿ ತಿಳಿದು [6]ನೆಗಟ್ಟಿಂ[6]ಗಕ್ಕುಂ ।

---

1 ಪ್ರಕಾರ (ಅ). 2 ದಿಂತಿವು (ಓ.ಮ). 3 ಪಗಿಲಲವರ್ಣಂ (ಅ), ಯಗಿಲಲ ವರ್ಣಂ (ಅ), ಯಗಿಲಲವರ್ಣಂ (ಮ). 4 ಪೆಳ್ತಂ (ಅ). 5 ಇರ್ಮೆಯ್ಯುಂ (ಓ.ಮ)· 6 ನೆಗಟ್ಟುಂ (ಓ.ಮ).

ಸ್ವರ್ಮೋಕ್ಷಸಿದ್ಧಿ ಬಗೆವಂ
ದಾರ್ಮಂ ಪೆಱತಿಲ್ಲ ದೇಹಿಗೀ ಸಂನ್ಯತಿಯೊಳ್ ॥ ೨೬೦

ಉಕಾರಲೋಪಕ್ಕೆ ॥

ಗೆಲವಂ ಕೊಂಡಭಿಮಾನಿಯಾದನೊಳಕೊಂಡನ್ಯಾವನೀಕಾಂತೆಯಂ
ಸಲೆ ಶೌಚವ್ರತಿಯಾದ[1]ನಿತ್ತಿಱಿದೆರಟ್ಟಾತಾಡಿ[1] ಬಿಟ್ಟುಂ ಜಗ ।
ದ್ವಲಯಕ್ಕೊರ್ಮಡಿಕಾಱನಾದ[2]ನನಯ[2]ಕ್ಕುಳ್ಳಿಳ್ಕಿ ಸಂಗ್ರಾಮದೊಳ್
ಕಲಿಯಾದಂ ವಿಪರೀತಜಾತಚರಿತಂ ಭೂಪಾಲರೊಳ್ ಕಾಮದಂ ॥ ೨೬೧

ಸೂತ್ರ ೫೮

ಅದಿದೆನ್ನದೆ ಮೂಱಿಂಬೀ
ಪದದಂತಂ ಲೋಪಮೆಯ್ದುಗುಂ ಕಪವರ್ಗಂ ।
ತುದಿಯೊ[3]ಳ್ ತಗುಳ್ದು[3] ಪುದಿದಿರೆ
ತದಾಗಮಂ ಹ್ರಸ್ವಪೂರ್ವಮಕ್ಕುಂ ಬಹುಳಂ ॥ ೨೬೨

ಪ್ರಯೋಗಂ ॥

ನೆಲಸಿರ್ದಪ್ಪುದಧಸ್ಥಳಂ[4]ಬಿಡಿದಧೋ[4]ಲೋಕಂ ಸಮಂತೆಯ್ದೆ ಸು
ತ್ತಲುಮಿರ್ದಪ್ಪುದು ಮಧ್ಯಲೋಕಮೆಸೆದಿರ್ದಾಚೂಲಿಕಾಭಾಗದಾ ।
ದಲೆಯೊಳ್[5] ನಿಂದಪುದೂರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದಗುಂ
ದಲೆಯಾಗಿರ್ದುದು ದೇವದಂಪತಿರತಶ್ರೀಸುಂದರಂ ಮಂದರಂ ॥ ೨೬೩

ಅಪರಾರ್ಧಕ್ಕೆ ॥

ಮುಕ್ಕೊಡೆ ಪುಷ್ಪವೃಷ್ಟಿ ಸುರದುಂದುಭಿ ಕೇಸರಿಪೀಠ[6]ಮೊಂದಿದಂ
ತಿಕ್ಕುವ[6] ಚಾಮರಂ ಮಿಱುಪ ಪೂಗಳ ಗೊಂಚಲಶೋಕೆ [7]ಭಾನುವಂ[7] ।
ಮಿಕ್ಕು [8]ತೊಳಪ್ಪ[8] ಭಾವಳಯವೊಪ್ಪುವ ಪನ್ನೆರಡುಂ [9]ಗುಣಾಳಿ[9] ಲೋ
ಕಕ್ಕೆ ವಿನೂತವೀರಜಿನಪಾಶ್ರಯಮೆಂ[10]ಬಿವು[10] ಸರ್ವಮಂಗಳಂ ॥ ೨೬೪

ಅನವರತದಾನದಿಂ ಮಿ
ಕ್ಕನೂನಸೂನೃತದಿನಸಮಶೌರ್ಯೋನ್ನತಿಯಿಂ ।
ವನ[11]ನಿಧಿಪರೀತ[11]ಸಕಲಾ
ವನಿಯೊಳ್ ಮುಪ್ಪರಿವೊಲಾದುದಾನ್ಯಪನ ಗುಣಂ ॥ ೨೬೫

ಬಹುಳಕ್ಕೆ ॥

ತೀವಿರ್ದತ್ತು ಮೊದಲ್ ಮೊದಲ್ಗೆ ಪಣಿಯುಂ ಮೂಗಯ್ಯಮೂಗಯ್ಯನಿ
ತಾ ತಾವಕ್ಕೆಯ್ದೆ ಕವಲ್ಕವಲ್ತು ಪಲವುಂ ಕೊಂಬಾದುವೊಳ್ಗೊಂಬುಮಂ ।

---

1 ನಿಸ್ತಱಿದೆರಟ್ಟಾತಾಗೆ (ಅ), ನಿರ್ತಱದೆ . . . (ಅ.ಇ). 2 ನಯಶ (ಅ.ಮ). 3 ಳೆಪ್ಪೊದಱ್ದು (ಅ). 4 ಬಿಡದಧೋ (ಅ). 5 ನಿಂದುದದೂ (ಅ). 6 ಮೊಂದೆ ತಂದಿಕ್ಕುವ (ಅ). 7 ಭಾಷಣಂ (ಓ.ಮ). 8 ಬೆಳಪ್ಪ (ಓ.ಮ), 9 ಗಣಾಳಿ (ಅ). 10 ದಿವು (ಓ.ಮ). 11 ವೀಧಿಪತಿತ (ಮ).

ತೀವಿರ್ದತ್ತು ತಳಿರ್ ಮೊದಲ್ ಪಣೆ ಕವಲ್ಕೊಂಬೆಂಬುವೀ ಕೆಂದಳಿರ್
ಮಾವಿಂಗಲ್ಲದೆ ಮಾವುಗಳ್ಗೆ ಪೆಱವ[1]ರ್ಕಿಂತೇಂ[1] ಬೆಡಂಗಕ್ಕುಮೇ ॥ ೨೬೬

ಸೂತ್ರಂ ೫೪

ಉಪಹತಿ ನಾಲ್ಕಯ್ದೆಂಬಿವ
ಱುಪಧೆ[2]ಯೊಳಾ[2]ಱುಂಬಿದರ್ಕೆ ಮೊದಲೊಳ್ ಹ್ರಸ್ವಂ ।
ಸ್ವಪರಸ್ವರಲೋಪಂ ವ
ರ್ತಿಪುದೇಱಱೊಳಂತ್ಯಲೋಪಮೆಂಬರ್ಕಕ್ಕುಂ ॥ ೨೬೭

ಪ್ರಯೋಗಂ ॥

ಉರಗಂ ಕೊಂಡಲ್ಲಿಂ ನಾ
ಲ್ಕೆರ[3]ಲನಿತಂ[3] ಕಳೆದು ಕಟ್ಟಿ ಮೇಗಂ ಬೇಗಂ ।
ನೆರೆವಿಡುಗೆ ನುಡುಗೆ ಕಡಿದಿರ
ದರಿದಿಕ್ಕುಗೆ [4]ನೀವಿ ಕಳೆಗೆ[4] ನಿರ್ವಿಷಮಕ್ಕುಂ ॥ ೨೬೮

ಕೀಱಿ ಪುಗಲೆನೆಯುಮೆಂತುಂ
ಮಾಱು[5]ದನಂ[5] ಪೊಕ್ಕು ಶಾಲೆಯಂ ಶಾಙ್ರ್ಗಮ[6]ನಂ।
ದೇಱಿಸಿದಪನಹಿಶಯ್ಯೆಯ[6]
ನೇಱಿದನಯ್ಯಾಯ ಶಂಖಮಂ ಪೂರಿಸಿದಂ ॥ ೨೬೯

ಅಱುದಿಂಗಳಾಯುವುಂಟೆನೆ
ಮಱುಗುವುದುಂ ನಲ್ಲರಲ್ಲಿ ತಮ್ಮಿಂ ಮುನ್ನಂ ।
ಪಱಿವಟ್ಟು ಬರೆ ಕನಲ್ವುದು
ಮಱುಪದೆ ನಾಲ್ವರ್ಗೆ ನರಕದುಃಖದ ತೆಱನಂ ॥ ೨೭೦

ಪರಿಮರ್ದಿಸುವುದು [7]ದುತ್ತೂ
ರರಸಮನಿಂಬಾಗಿ[7] ಪಿರಿದು ನೆಲದೊಳ್ ಲವಣಂ ।
ಬೆರಸೊರಸಿಕೊಂಡು ಪೂಸು[8]ಗೆ
ಕರಗುಗುಮೇಱ್ಪೊರೆಯೆನಿಪ್ಪ ಕುರುವುಂ ಕ್ಷಣದೊಳ್ ॥ ೨೭೧

ಕಣ್ಗೆದಱಿದೊಡನೆ ನಾಲ್ವ
ತ್ತೆಣ್ಗಾಪುದವರೆಗಮುಗಿದೊಡಂಬುಧಿ ಕಡಲ ।
ತ್ತಣ್ಗೆ ಹರಿ ಬಂದು[8]ದಂ ಕಡು[8]
ಜಾಣ್ಗೆಡದಱಿದಾಗಳವಧಿಬೋಧೋದಯದಿಂ ॥ ೨೭೨

---

1 ಕ್ಕೆಂತೇಂ (ಮ). 2 ಯಿನಾ (ಅ.ಮ). 3 ಲನಿವಂ (ಓ.ಮ). 4 ನಿಗಳಿಗೆ (ಓ.ಮ), ಗಿವಿಯಗಳಿಗೆ (ಅ). 5 ದಿನಂ (ಅ). 6 ನೊಲ್ದೇಱಿಸಿದನಹಿಪಶಯ್ಯೆಯ (ಮ). 7 ದುತ್ತೂರಸ್ವರಸಮನಿಂಬಾಗೆ (ಅ). 8 ಕಂಡೊಡೆ (ಓ.ಮ).

ಸೂತ್ರಂ ೬೦

ಒಂಬತ್ತು ದಶಾಹತಿ[1]ಯಿಂ[1]
ತೊಂಬತ್ತೆನೆ ಸಲ್ಗು ಮಗ್ರದೊಳ್ ನೂಱಿರೆ ಮ !
ತ್ತೊಂಬಯ್ನಾದೇಶಮನವ
ಲಂಬಿಸುಗುಮದಂತೆ ಮುಂತೆ ಸಾಸಿರಮಿರೆಯುಂ ॥ ೨೯ ೩

ಪ್ರಯೋಗಂ ॥

ಸಾಸಿರಯೋಜನಮಬ್ಬು ಸು
ರಾಸುರಸಂಸೇವ್ಯಮಾಗಿ ತೊಂಬತ್ತೊಂಬ ।
ಯ್ನಾಸಿರಯೋಜನಮಂ ನೆಗೆ
ದೀಸುರಗಿರಿ [2]ಪೆಂಪನೇಂ[2] ಪುದುಂಗೊಳಿಸಿದುದೋ ॥ ೨೭೪

ಸೂತ್ರಂ ೬೧

ಒಂದೆರಡೆಂಬಿವು ಪರದೊಳ್
ನಂದಿಸೆ ಪತ್ತರ್ಕೆ ಪನ್ನೆನಿಕ್ಕುಂ ರೂಪಂ ।
ಮುಂದೆ ಪೆಱ[3]ವೊಂದಿ[3] ನಿಲೆ ಪದಿ
ಯೆಂದಕ್ಕುಂ ಸ್ವರದೊಳಮರ್ದು ನಾಗಮಮಕ್ಕುಂ ॥ ೨೭೫

ಪ್ರಯೋಗಂ ॥

ಎನಗಿದು ಚೋದ್ಯಂ ಪನ್ನೊಂ
ದನೆಯದು ನೆರೆ ತನ್ನ ನೆಗಟ್ಟುದಂತದು ಪದಿನಾ ।
ಱನೆಯ ನೆರೆಗುಯ್ದನೆಂಬುದ
ನೆನೆ ಸುವಿಧಿನರೇಂದ್ರನಚ್ಯುತೇಂದ್ರನುಮಾದಂ ॥ ೨೭೬

ಸಾರಲ್ಸಲ್ಲದು ಪನ್ನೆರಬ್ಬರಿನಮಂ ನಾ[4]ಡಂತ[4]ಡಂಗಿರ್ಪುದು
ಗ್ಯಾರಣ್ಯಂಗಳೊಳೆತ್ತಮೊಂದು ಬರಿಸಂ ಮೆಯ್ದೋಱಲಾಗಾರ್ಗಮಂ ।
ದಾರಯ್ದಾ[5]ರ್ತಡೆಮಾಡಿದಂದು[5] ಮಗುಳ್ದತ್ತೀರಾಱುವರ್ಷಂಬರಂ
ಸಾರಲ್ಸಲ್ಲದು ನಾಡನೆಂಬ ಸಮಕಚ್ಚಿಂತಾದೊಡೆಂತಕ್ಕುಮೋ ॥ ೨೭೭

ಸೂತ್ರಂ ೬೨

ಸಾಸಿರಮಿರೆ ಮುಂದೊತ್ತಿ ಸ
ಮಾಸದೊಳಕ್ಕುಂ ಪಯಿನ್ನದರ್ಕೆ ಯಥೋಕ್ತಂ ।

---

1 ಯೊಳ್ (ಅ). 2 ಪೆಂಪುವೇಂ (ಓ.ಮು). 3 ಕೊಂದಿ (ಓ.ಮು), ತೊಂದು (ಅ).
4 ಡತ್ತ (ಅ). 5 ತಡೆದಂದು, ತಂದು (ಓ.ಮು).

ಶಾಸಿಸುವರ್ ನೂಱಿರ್ಕಂ
ಸಾಸಿರಕಂ ಪ್ರಾಂತಲೋಪಮಂ ಕೆಲವೆಡೆಯೊಳ್ ॥ ೨೭೮

ಪ್ರಯೋಗಂ ॥

ಪಿಡಿಯೆಂ ಚಕ್ರಮನೆಂಬ ಚಕ್ರಿಯನಿರಾಚಕ್ರಂ ಭಯಂಗೊಳ್ವಿನಂ
ಪಿಡಿಯಿಪ್ಪೆಂ [1]ವರ[1]ಚಕ್ರಮಂ ನರರಥಂ ತೂಳ್ದಾ ಕುರುಕ್ಷೇತ್ರದಿಂ ।
ಪಡುವೆಣ್ಗಾವುದವೋಗೆ [2]ಪೋಗಲಸುವೆಂ[2] ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆ [3]ಮಾಪ್ಪ [3]ನೋವದೆ ಪಯಿಂಜಾಸಿರ್ವರಂ ಯುದ್ಧದೊಳ್॥ ೨೭೯

ಅಪರಾರ್ಧಕ್ಕೆ ॥

ಒರ್ವಂ ಬಂದೊಂದೆ ತೇರೊಳ್ ನೆರೆದ ಕುರುಬಲವ್ಯೂಹಮಂ ಕೀಳು [4]ಬೆಂಕೊಂ
ಡುರ್ವೀಶಂ[4] ನೋಡೆ ಮಾಱಾಂತೆನಗಮರಿಯನಾಗಿರ್ದನೀ ಮಿಟ್ಟುಗೊಡ್ಡಂ ।
ಸರ್ವಗ್ರಂ ನಲ್ಲದೆಂದೆಂದೊವಜನೊದಱು ನಿಂದೊರ್ವನುಂ ನೂಱಿನೂರ್ಬ್ಬರ್
ಸಿರ್ವದ್ರೌಣಿರ್ಕಳಾ[5][ಟಂದಿಸೆ] [5] ಮೊಗಸಿ ಸರಲ್ ಪಾಯ್ದು ವಂದತ್ತ ಮಿತ್ತಂ॥

ಸಾಸಿರ್ವರ್ ವನಿತೆಯರ
ಯ್ವಾಸಿರ್ವರ್[6] ಪ್ರಿಯತನೂಜರಱುಕೆಯ ಪದಿನೆ ।
ಣ್ಪಾಸಿರ್ವರರನುಗರ್ಪೆರ
ಸಾ ಸಾಸಿಗನುಚಿತದೀಕ್ಷೆಯಂ ಕೆಯ್ಕೊಂಡಂ ॥ ೨೮೧

ಸೂತ್ರಂ ೬೩

ಬೆರಸಿ ಸಮಸಂಸ್ಕೃತಂಗಳ್
ಬರೆ ಕನ್ನಡ[6]ದೊಳಗೆ[6] ಸಮತೆಯಿಂದಂ ಸಲ್ಗುಂ ।
ನಿರವದ್ಯಮಾಗಿ ಪದವಿ
ವಿರುದ್ಧಮಕ್ಕುಂ ತದನ್ಯಥಾವೃತ್ತಿಗಳೊಳ್ ॥ ೨೮೨

ಪ್ರಯೋಗಂ ॥

ಅರಸುಗುಣಂ ಪಟಿಯನಣಂ
ಬರಲಿತ್ತುದೆ ಶೌಚದಳವು ಪರವೆಣ್ಗಳಿಪಂ ।
ತರಲಿತ್ತುದೆ ಅಟಿಜನದೊ
ಳ್ಕಿರ[7]ಸಿರಲಿತ್ತುದೆ[7] ಮಹಾನುಭಾವಂ ನೃಪನಾ ॥ ೨೮೩

ವಿರುದ್ಧಕ್ಕೆ ॥

ತರವೇಱ್ಪಾಣಿಕ್ಯಭಂಡಾರದ ಪುಡಿಕೆಗಳಂ ಪುಂಜಿಸಲ್ಬೇಟ್ಟುವರ್ಣೋ
ತ್ಕರಮಂ ತೋಱಿಲ್ಕೆವೇಟ್ಟಂತಿಗಳನಿರಿಸವೇಟ್ಟುಂದೆ ವಾಹಂಗಳಂ ಬಿ

1 ಕರ (ಓ.ಮ). 2 ಪೋಗಡಿಸುವೆಂ (ಅ). 3 ನೋಡ್ಪ (ಓ.ಮ). 4 ಮಾಱಾಂ ತುರ್ವೀಶಂ (ಓ.ಮ). 5 ದಂತಿರೆ (ಅ), ದಂತಿಸೆ. 6 ದೊಡನೆ (ಓ.ಮ). 7 ಸಲ್ಮ ತ್ತುದೆ (ಓ.ಮ).

ತ್ತರಿಸಲ್ವೇಟ್ಟಿತ್ರಚೀನಾಂಬರಪರಿಕರಮಂ ಮಾಣದೆಂದೋಳಿಯಿಂ ಲೆಂ
ಕರನಾಗಳ್ವೇಟ್ಟ[1] ನೀಯಲ್ಕೆರೆದವರ್ಗೆ[1] ಮಹಾದಾನಮಂ ವಿಕ್ರಮಾಂಕಂ॥೨೮೪

ವ॥ ಇಲ್ಲಿ ಕೆಲರ್ತುರಗಾಸಿ ಶಬ್ದಂಗಳೊಳ್ ಸಮತೆಯನಿಚ್ಛೈಸುವರವರ್ಕೆ ಲಕ್ಷ್ಯಂ ॥

ತುರಗದಬಂಗಳ್ಕವಿತರೆ
ತುರಂಗಮಾರೂಢನಾಗಿ ತನ್ನಯ ಹಯಮಂ ।
ಪರಿಯಿಸಿ ಕೊಂಗುಳಿವರ್ಮಂ
ಕರಾಸಿಯಿಂದಿಱಿದು ತವಿಸಿದಂ ಹಯಬಲಮಂ ॥ ೨೮೫

ಕೂರಿಸಿ ವೀರಶ್ರೀಯಂ
ಕೂರದರಂ ಕೊಂದು ಸಮರಜಯಮಂ ಮಾಡ ।
ಲ್ಯೂರಸಿಯೊಳ್ನಿಲಸುಗೆ ಕಂ
ಠೀರವವಾಹನೆ ಚಳುಕ್ಯಕಂಠೀರವನಾ ॥ ೨೮೬

ಸೂತ್ರಂ ೬೪

ಚಾಪಲವೀಪ್ಸಾಭೀಕ್ಷ್ಣ್ಯ ಸ
ಮ್ಮಾಪಾನುಕೃತಿ ಕ್ರಿಯಾನಮಭಿಹಾರಾದಿ ।
[2]ವ್ಯಾಪ[2]ನೆಯೊಳ್ ಪದಕಕ್ಕುಂ
ರೂಪದ್ವಿತ್ವಂ ಯಥಾಪ್ರಯೋಗಾನುಗತಂ ॥ ೨೮೭

ಪ್ರಯೋಗಂ ॥

ಚಾಪಲಕ್ಕೆ ॥

ಅದಱಿಂದಮೊಪ್ಪಿಸೊಪ್ಪಿಸು
ನುದತಿಯನಣ್ಮಣ್ಮ ನಾರ್ಚು ನಾರ್ಚೆರೆ ಎಲೆ ನೀ ।
ನದಿರದೆ ನಿಲ್ನಿಲ್ನೀನಿ
ಲ್ಲಿದಿರ್ದಿರ್ದಿನೆ ಜಟಾಯು ರಾವಣನೆಂಗುಂ ॥ ೨೮೮

ವೀಪ್ಸೆಗೆ ॥

ಮುದಮೂರೂರಬಲಾಜನಕ್ಕೆ ಪರಿನೀರೂರೂರ ತೋಂಟಕ್ಕೆ ಸಂ
ಪದಮೂರೂರ ಗೃಹಕ್ಕೆ ಪಂಕಜದ ಬೆಲ್ವೂರೂರ ಗುಯ್ಯರ್ಗೆ ಸಂ
ಮದಮೂರೂರ [3]ಮದಾಳಿ[3]ಗಂಚೆಗಳ ಚೆಲ್ವೂರೂರ ಷಂಡಕ್ಕೆ ಪಾ
ಲೊದವೂರೂರ ದನಕ್ಕತರ್ಕ್ಯಮದಱಿಂ [4]ರಮ್ಯಂ[4] ತದುರ್ವೀತಳಂ ॥ ೨೮೯

ಅಭೀಕ್ಷ್ಣ್ಯಕ್ಕೆ ॥

ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂ
ಡಳಿಯೊಡನಾಡಿಯಾಡಿ ನಡೆಗಲ್ತು ಕಳಾಪಿಗಳಾಟಮಂ ಮನಂ ।

---

1 ರ್ಕಾರವರ್ಗೆ (ಓ), ಲ್ಯವರವರ್ಗೆ (ಪು). 2 ವ್ಯಾಪನೆ (ಓ.ಮು).
3 ಬುಧಾಳಿ (ಓ.ಮು). 4 ರಯ್ಯಂ (ಅ).

ಗೊಳೆ ನಡೆ ನೋಡಿನೋಡಿ ಕುಣಿಯಲ್ಕೆಱಿ ಕಲ್ತು ಕಲಾಗುಣಂ ಪೊದ
ೞ್ದಳವಡೆ ಬಾಲಭಾವದೊಳೆ ಬಾಲಕಿಯರ್ಬಳೆವ[1]ರ್ನಿರಂತರಂ[1] ॥ ೨೯೦

ಸಮೀಪಕ್ಕೆ ॥
ಅಟಿಪು ಕೊಲೆ ಕಳವು ಪುಸಿಯುವ
ಗಟಿಯಂ ಪಟಿಯೆಂಬ ದೋಷದೊಳ್ಪೊರೆದ ನರಂ ।
ಕೆಟುಕೆಟುಗೆ ನರಕಬಿಲದೊ
ೞ್ಗಟಗಟನಿಟಿಗುಂ ರಸಾಂತಮಂ [2]ತಾಪಿನೆಗಂ[2] ॥ ೨೯೧

ಅನುಕೃತಿಗೆ ॥
ವಿನುತಕ್ರೌಂಚಾಚಳ ರಂ
ಧ್ರನಿಕಟದಿಂ [3]ಮೊಗಸಿ[3] ಬರ್ಪ ಹಂಸಾಳಿಯನಂ ।
ದನುಕರಿಸಿ ಪರಿದು ಭೋರ್ಭೋ
ರೆನೆ [4]ಪಾಯ್ದುದು[4] [5]ಹಿಮನಗಕ್ಕೆ[5] ಗಂಗಾಸ್ರೋತಂ ॥ ೨೯೨

ವ॥ ತ್ರಿಪ್ರಯೋಗವ ೞಿಲ್ಲ [6]ಸಾಧುವಕ್ಕುಂ[6] ॥
ಬೆಳಗೆಯ್ಗೊಳಿರ್ದೆತ್ತಂ
ಕಳರವದಿಂ ಕೆಯ್ಯನೆತ್ತಿ [7]ಹಯಲಲ್ಲೆನುತುಂ[7] ।
ಬಳೆಗಳ್ಪಲ್ಪಲ್ಲೆನೆ
ಗಿಳಿಸೋವಾಕೆಗಳಿನೊಪ್ಪುಗುಂ ಕೆಲವೆಡೆಯೊಳ್ ॥ ೨೯೩

ಕ್ರಿಯಾಸಮಭಿಹಾರಕ್ಕೆ ॥
ಅಡವಿ ಬಯಲಾಗೆ [8]ನದಮೊ
ಬ್ಬುಡುಗೆ[8] ತೆಮರ್ನರಿನಮಾಗೆ ಬಚ್ಚೆಯೊಳೆಲ್ಲಂ ।
ನಡೆನಡೆಯೆಂದೇಂ ನಡೆದುದೊ
ಪಡೆ ಪಡೆದಚ್ಚರಿಯನಾನುರಾಪಗೆವರೆಗಂ ॥ ೨೯೪

ಆದಿಗ್ರಹಣಕ್ಕೆ ॥
[9]ಅಂತಂತೆನೆ[9] ಪರಿಚಾರಕಿ
ಗಿಂತೆಂದಂ ಬ್ರಹ್ಮಚಾರಿ ಕಳೆಕಳೆ ಸಿತಗಂ ।
ಗಿಂತು ಕಿಡಿಸುವುದೆ ತಪಮನ
ದೆಂತು[10]ಗ[10] ಗಿರಿ [11]ಸುತೆಯ[11] ಬಯಸಲಾತಂ ದೊರೆಯೇ ॥ ೨೯೫

ಸೂತ್ರಂ ೬೫

ಪಲ್ಲಟಿಸಿ ಡಕಾರದ ನೆಲೆ
ಯಲ್ಲಿ ಟಕಾರಂ ಱಕಾರದೊಳ್ ರೇಫಂ ತಾ ।

---

1 ರ್ನಿರಾಕುಳಂ (ಓ.ಮ.) 2 ತಾಗುವಿನಂ (ಓ.ಮ). 3 ಮೆಳಸಿ (ಮ). 4 ಪಾಯ್ವುದು (ಮ). 5 ಹೇಮನಗಕೆ (ಅ). 6 ಸಾರ್ಥಕ (ಅ). 7 ಚಲಲಲೆಯೆ (ಓ.ಮ). 8 ನವೊಳ್ಕುಡಿಯ್ಯ (ಅ). 9 ಅಂತೆಗೆಯೆನೆ (ಓ ಅ). 10 [ಗೆ]. 11 ಸುತೆಯೆ (ಅ).

ನೆಲ್ಲಯುಮಕ್ಕುಂ ಪದವಿಧಿ
ಯಲ್ಲಿ ಪರಂ ವ್ಯಂಜನಾದಿಯಾಗಿರೆ ಬಹುಳಂ ॥ ೨೯೬

ಅದೆಂತೆಂದೊಡೆ ॥

ಕಾಡುಂ ಕೋಡುಂ ನಾಡುಂ
ನೀಡುಂ ನಾಮಂಗಳೊಳ್ ಕ್ರಿಯಾರ್ಥಂಗಳೊಳಂ ।
ಮಾಡುವುದುಂ ನೋಡುವುದುಂ
ಬೇಡುವುದುಂ ಬತ್ಪವಿಧಿಗೆ ಪರಿಗಣಿತಂಗಳ್ ॥ ೨೯೭

ಅನಿತರ್ಕಂ ಯಥಾಕ್ರಮದಿಂ ಪ್ರಯೋಗಂ ॥

ಕಾಟಿಕ್ಕಚ್ಚು ತಗುಳೆ ತಮ್ಮೊಳ್
ಕೋಟ್ಯುಟ್ಟಿ ವನದ್ವಿಪೇಂದ್ರಚಯಮತಿಭಯದಿಂ ।
[1]ನೀಟ್ಕರಿಸಿ[1] ನಿಲ್ಲದೆನಸುಂ
[2]ನಾಟ್ಕಡೆ[2] ಪೋಪಂತೆ ಪೋಪುದೀ ನಗತಟದಿಂ ॥ ೨೯೮

ಕಾಟ್ಯುರಮಾಗೆ ಕಾವ್ಯರಸಮರ್ಥಮುಮಕ್ಕರಮುಂ ಪ್ರತೀತಿಯಂ
ಮಾಟ್ಪಿನೆಗಂ ಜಲಕ್ಕನಿರೆ [3]ಪೇಟದೆ[3] ಕೆಮ್ಮ[4][ನೊಗಂಟು][4]ವೇಟ್ಪು ಚಿಃ ।
ನೋಟ್ಪುದೆ ಮುಯ್ಯನಾಕೃತಿಗೆ ಪಂಚಿಕೆವೇಟ್ಪುದದರ್ಕೆ ಟಿಪ್ಪಣಂ
ಬೇಟ್ಪುದು ಟೀಕುವೇಟ್ಪುದೆನೆ ಪೇಟ್ದವ[5]ನುಂ ಕವಿಯೆಂಬ ಲೆಕ್ಕಮೇ[5] ॥ ೨೯೯

ಮಾರ್ಪಿಡಿಯೆ ಮಾಣನೀ ಭಟ
ನೇರ್ಪನ[6]ವಿಗ[6]ನೀತನಿದಿರ್ಗೆ ಬರಲಾರ್ಪವರಾರ್ ।
ಮಾರ್ಪಡೆಯೊ[7]ಳೆನ್ನ ಘನದೋ[7]
ರ್ದರ್ಪಮನಾವರಿಸಿ ನೆಗಟ್ಟ ಕಲಿ ರಣವಜ್ರಂ ॥ ೩೦೦

ಬಹುಳಗ್ರಹಣಕ್ಕೆ ॥

ಪೇಱಿರ್ದಿರ್ಪ್ಪತ್ತು ತೋಳುಂ ದಶಮುಖ[8]ಮುಖರಾ[8]ಜೋಪಮುಂ ಮಿಟ್ಟು ರೂಪಂ
ತೋಱಿರ್ದಂ[9]ತಿರ್ದ[9] ರೂಪುಂ ಹರನಿದಿರೊಳಗುರ್ವಪ್ಪಿನಂ ಪೊಣ್ಮಿದಣ್ಮಂ ।
ಬೀಱುತ್ತುಂ ದೇವನಂ [10]ಪೂಜಿಸ[10]ಲವಯವದಿಂದೊಂದೆರಟ್ಟುಂ ಕುನಾಲ್ಕ
ಯ್ದಾಱೆಂದಂಜೊಂಬತೆಂದಿಂತರಿಗುಮೆ ತಲೆ[11]ಯೊಂಬತ್ತುಮಂ[11]ದೈತ್ಯರಾಜಂ॥

ಸೂತ್ರಂ ೬೬

ಕೆಲಬರುಪಾಂತ್ಯದಕಾರದ
ನೆಲೆಯೊಳೊಕಾರಂ ವಯದ್ವಯಕ್ಕೌ ದೈತ್ಯಂ ।

---

1 ಕಟ್ಕಲಿಸಿ. 2 ನಾಟ್ಕುಡಿ (ಅ.ಇ), ನಾಟ್ಕಡಿ (ಮ). 3 ಪೇಟ್ಪುದು (ಓ.ಮ). 4 ನೆಗಂಟು (ಓ.ಮ), ನೊಱಂಟು (ಅ.ಇ). 5 ನಂ ಕವಿಯೆನ್ನಬಕ್ಕುಮೆ (ಅ). 6 ದಿಗೆ (ಅ). 7 ಳೆನ್ನಪದದೋ (ಅ). 8 ಕುಹರಾ (ಓ.ಮ). 9 ತಪ್ಪ (ಓ.ಮ). 10 ಪೆಚ್ಚಿನ (ಓ.ಮ). 11 ಯುಂಪತ್ತುಮಂ (ಅ).

ನಲೆ ಕೂಡೆ ಣಕಾರಂ ಕೇ
ವಲಂ ನಕಾರಕ್ಕೆ ಣತ್ವಮಕ್ಕುಮದೆಂಬರ್ ॥ ೩೦೨

ಪ್ರಯೋಗಂ ॥
ಆವೊಂ ಕಾವೊಂ ಲೋಕಮ
ನಾವೊನಿನಮರರ್ಕಳಮರರೆನಿಸಿದರೊಲವಿಂ ।
ದಾವೊನುರಸ್ಥಳದೊಳ್ ಲ
ಕ್ಷ್ಮೀವಧು ನೆಲಸಿರ್ಪಳಾ ಮುರದ್ವಿಷನೀತಂ ॥ ೩೦೩

ವಕಾರದೌತ್ವಕ್ಕೆ ॥
ಕನವರದಾಸೆಯಿಂ [1]ಪದಪು[1]ದೋರ್ಪಟಿವೆಂಡಿರ ನಲ್ಮೆಯೆಂದು ಭಾ
ವಿಸದಿರು ನೀಂ ಮನೋನಯನವಲ್ಲಭ ಕೂರಿಸಿ ಕೂರ್ತ ನಿನ್ನ ಪೆಯ್[1]।
ಕನವರಮೆನ್ನನಿನ್ನುಸಿರ[2]ದೌದಲೆಗಾ[2]ಣ್ಬಿನಮೆಂದೆ ನಂಬು ಚಿ
ಕನವರಬೇಟಮೆಂಬುದೆರೆಕೊಳ್ವರ ಬೇಟಮದೆನ್ನ ಬೇಟಮೋ ॥ ೩೦೪

ಯಕಾರದೈತ್ವಕ್ಕೆ ॥
ಅಸಿತೇಂದೀವರಲೋಲಲೋಚನೆಯನಂದಂತಾ ನಭಾಮಧ್ಯದೊಳ್
ಪಸುವಂ ಮೋದುವವೋಲೆ ಮೋದೆಯುಮದಂ ಕಂಡಂತೆ ಪಲ್ಗರ್ಚಿ ಸ್ಯೈ।
ರಿಸಿದೆಂ ನಿನ್ನಯ ನನ್ನಿಗಿನ್ನೆವರೆಗಂ ದುಶ್ಶಾಸನೋರಃಸ್ಥಲೋ
ಚ್ಛ್ವಸಿತಾಸ್ಯೃಗ್ಜಲಪಾನಮಂ ಬಯಸಿ ಬಾಯ್[3] ತೇರ್ಕೈಸ [3]ಸ್ಯೈತಿರ್ಪೆನೇ[3] ॥ ೩೦೫

ನಕಾರಣತ್ವಕ್ಕೆ ॥
ಕಣ್ಣಾರೆ ನೋಡಿ ಮಾವಿನ
ತಣ್ಣೆಲೆಯೊಳ್ ನಲವ ಸಿದ್ಧಚಾರಣಗಣಮಂ ।
ಪಣ್ಣನೆ ಬಂದೆಳಗಾಯರೆ
ಪಣ್ಣನೆ ಪಱುಪಱುದು ತಂಬ ಬಲಮುಖಕುಲಮಂ ॥ ೩೦೬

ಸೂತ್ರ ೬೭

ಪೊಯ್ ಬಯ್ ಮತ್ತಾರಯ್ ಗೆಯ್
ನಯ್ಯೆಂದು ವಿಕಲ್ಪದಿಂ ಯಸಂಯೋಗದೊಳಾ ।
ಶ್ರಯಿಸಿರ್ಕುಂ ಗುರುಲಘು[4]ಗತಿ[4]
ನಿಯಮಮದೇದೋದ್ವ್ಯಕ್ಕಮಕ್ಕುಂ ಪ್ರಾಯಂ ॥ ೩೦೭

---

1 ಪೊಳ್ಪದಪ್ಪ (ಅ). 2 ದ್ದೌತರೆಕಾ (ಅ). 3 ಸ್ಯೆರಿಪ್ಪೆ .(ಮು).
4 ತತಿ (ಓ.ಮು).

ಪ್ರಯೋಗಂ ॥
ನಡೆ ಕೋಲ್ವರಮಂದಂಬುರ
ದೆಡೆಯಂ [1]ಪುಣ್ಗುರ್ತು[1] ಕಾಳವಟ್ಟದ [2]ಕೊಪ್ಪಂ[2] ।
ಪಿಡಿದು ನೆಲಲ್ಕರ್ಕಸುತಂ
ಗಿಡಿಗಂ ಪ್ರಾಯೆ ನೊಂದ ಭುಜಗನಿರ್ಪಂತಿರ್ದಂ ॥ ೫೦೮

ಮೆಯ್ಯ ಮಸಿ ಕೊರಲ [3]ಬಕ್ಕಳೆ[3]
ಪೊಯ್ಯೆ [4]ಪುಗಿಲ್ಗರೆವ[4] ಕೆಯ್ಯ ಕಂಕರಿಕೆ ಕರಂ ।
ರಯ್ಯಮೆನೆ ಪಾಡುತಿರ್ದಳ
ನೊಯ್ಯನೆ ಕಡೆಗಣ್ಣೊಳಡರೆ ಚಪ್ಪರಿಸುತ್ತುಂ ॥ ೫೦೯

ಪಿಡಿದು [5]ಮೆಚ್ಚದೆ[5] ನೋವದೆ ಪೆಂಡಿರಂ
[6]ಜಡಿಯೆಯುಯುಂ ಬಯೆಯುಯುಂ[6] ಬಲಗರ್ವದಿಂ ।
ಮಿಡುಕಲಣ್ಮದೆ ನೋಡಿದ ನಾಸಿಗಂ
ನುಡಿಯದಿರ್ಕುಮೆ ಬೀರಮನಾರೊಳಂ ॥ ೫೧೦

ನುಯ್ಯ ನಿಡು[7]ಪುಡು[7]ಗದಿರೆಯುಂ
[8]ಮೆಯ್ಯೆರೆ ಮಬ್ಗದೆ[8]ಯುಮಿಂತು ನಂದಂದಿನಿಬರ್[9] ।
ಬಯ್ಯಲೆ ಪ್ರಾಯ್ಯಲೆ [9]ಕುರುಳಂ[9]
ಕೊಯ್ಯಲೆ ಪ್ರೋಯ್ತುಂತು ವಿನಯವತಿಗಂ ಪತಿಗಂ ॥ ೫೧೧

ಆರಯೆ ಜಡನಾದೊಡಮಧಿ
ಕಾರಿಯ ಮಾಡಿದುದೆ ಪವಣದಂತಿಂತೆನವೇ ।
ಡೂರೂರೊಳುಱುಗನಾದೊಡ
[10]ಮೂರಡಿ[10] ಪವಣೆಂಬುದಲ್ತೆ ನಾಣ್ಣುಡಿ ಜಗದೊಳ್[11] ॥ ೫೧೨

ಆರಯ್ಯೆ ಸರ್ವಭೂತಾ
ಧಾರಂ ಮಡಿಯುಂ ನ್ಮಪೇಂದ್ರನುಂ ಮಡಿಗಾಲಂ ।
ಬಾರದೊಡಂ ನಿರ್ವಹಿಸುವ
ರಾರುಂ ನೃಪನಿಲ್ಲದಂದು ನಿರ್ವಹಿಸುವರೇ ॥ ೫೧೩

ಏಳಿದಂಗೆಯಲಮಿಾಗಡೆ ನವೊ
ಳ್ಳಾಳನೊಳ್ಗುದುರೆಯಂ ರಥ[12]ಕರ್ಟ್ಯಾ[12] ।
ವ್ಯಾಳದಂತಿಕುಲಮಂ ನಮಕಟ್ಟಿಂ
ಕಾಳೆಗಕ್ಕೆ ತಡೆ[12]ದಿರ್ಪು[12]ದಯುಕ್ತಂ ॥ ೫೧೪

---

1 ಪುಣ್ಗುರ್ತು (ಅ). 2 ಕೊಳ್ವಂ (ಓ.ಮಾ). 3 ಒಕ್ಕಂ (ಅ). 4 ಕನಲ್ಗರೆವ, ಘರಿಲ್ಗರೆವ. 5 ಪೆಚ್ಚದ (ಅ). 6 ಜಡಿಯಲುಂ ಬಯಲುಂ (ಅ). 7 ಕಡು (ಅ). 8 ಮೆಯ್ಯಡಗಡನಾಗಿಮಡ್ಗ (ಅ). 9 ತರೆಯುಂ (ಅ.ಮಾ). 10 ಮಾಱಡಿ (ಅ). 11 ಪತ್ತಿ (ಅ). 12 ದಪ್ಪು (ಓ).

ನಿಮ್ಮಿಂ ಪಿಂಬಡಿನೊಳದೇ
ಸಮ್ಮದಮೆಮಗಂ ಧರಿತ್ರಿಗಂ ರಾಜ್ಯದ ಮೋ ।
ಹಮ್ಮಱಿದುಪೊಂದದೆಮ್ಮೊಳ್
ಕೆಮ್ಮನೆ ನೀಮಿನಿತುಮಾಗ್ರಹಂಗೆಯ್ಯದಿರಿಂ ॥ ೩೧೫

ಆಯತಿ ನಿಮಿರ್ವಂತು ಗುಣಾ
ಮ್ನಾಯಮನೊಳಕೊಂಡು [1]ಬಪ್ಪೊಡದು[1] ಬಾಡೆನಿಕುಂ ।
ನ್ಯಾಯಮನೊ[2]ಕ್ಕೆಳೆ[2] ಪಟಿವಿನ
ಮಾಯಂ ಸಯೆ ಬಿಟ್ಟುದೊಂದು ಬಾಟುಂ ಬಾಡೇ ॥ ೩೧೬

ಕಾಯದೆ ಚಲಮಂ ಪಲರುಂ
ಚೀಯೆನೆ ಪತಿ ಸಾಯೆ [3]ಸಯ್ಯ[3]ಲಂಜಿದ ನಾಯಂ ।
ನಾಯೆಂಬೆ[4]ನಾಳ್ದನಂ ಕಾ
ದಾ[4]ಯತಿ ನಿಲೆ ಸತ್ತ ನಾಯನಾಂ ನಾ[5]ಯೆನ್ನೆಂ[5] ॥ ೩೧೭

ಏಕಾರಕ್ಕೆ ॥

ಕುಡಿದಂಭೋಧಿಗಳೇಟುಮಂ ತವಿಪುದೇ ಗೋತ್ರಾದ್ರಿಸಂಘಾತಮಂ
ಪಿಡಿದೇಂ ಕೀಟ್ಟುದೆ ದಿಗ್ಗಜೇಂದ್ರಚಯಮಂ [6]ಮಾರ್ಪೊ[6]ಯ್ವುದೇ ಕಟ್ಟಿ ನಿ ।
ಮ್ಮಡಿಗೊಪ್ಪಿಪ್ಪುದೆ ಲೋಕಪಾಲಕರನಾ ಬ್ರಹ್ಮಾಂಡಮಂ ಚಂಡುವಿಂ
ದೊಡೆದೀಡಾಡುವುದೇ ವಿಹಂಗಮಮಿದೆಂದೇಕಬ್ಬ ನೀಮೇಳಿಪಿರ್ ॥ ೩೧೮

ಓಕಾರಕ್ಕೆ ॥

ತಂದೆಯ ನನ್ನಿಗಿತ್ತನನುಜಂಗೆಳೆಯಂ ರಘುವಂಶನೆಂದು ಜೀ
ಯೆಂದಪುದೀ ಜಗಜ್ಜನಮಿದಂ[7]ಸಿರಿ[7]ಗೆಂಬುದೊ ಲೋಭಮೆಂಬುದೋ ।
ಪಂದೆತನಕ್ಕೆ ಮೊತ್ತಮೊದಲೆಂಬುದೊ ಮಿತ್ರನ[8]ನೆಂಬೊಡೂನ[8]ನೆಂ
ಗುಂ ದೊರೆವೆತ್ತನೆಂಗುಮೊ ಕುಲೋದ್ಧತನೆಂಗುಮೊ ತಕ್ಕನೆಂಗುಮೋ ॥ ೩೧೯

ಪ್ರಾಯೋಗ್ರಹಣಕ್ಕೆ ॥

ಎರೆವಳ್ಳಿಯ ತಳ್ಪಿಂದೇ
ದೆರೆವಾಪೆಯ ಪೆರೆಪಿನಿಂದಶೋಕೆಯ ಪೊದಱಿಂ ।
ಮರೆವಾಯ್ವ ಲತೆಯ ಪುದುವಿಂ
ತೊಲಗದು ಬನದೊಳಗೆ [9]ಬಳೆದ[9] ಕಬ್ತಿಲೆ ಪಗಲುಂ ॥ ೩೨೦

ಓಲೆಯನೋಲೆಯೊಳಿಕ್ಕಿದ
ನಾಲೀಢಮನಿಟ್ಟು ಬೇಱೆ [10]ನುಡಿ[10]ದಟ್ಟಿದನೇಂ ।

---

1 ಬಾಬ್ಪುದದು (ಅ). 2 ಕ್ಕಳೆ (ಮ). 3 ಸಾಯ (ಓ.ಮ). 4 ನಾಳ್ವನಂ ಕೊಂಡಾ (ಅ). 5 ಯೆಂಬೆಂ (ಅ.ಇ). 6 ಮಾಪರ್ಾ (ಅ). 7 ಸೆರ (ಅ). 8 ನೆಂಬು ದೂನ (ಅ). 9 ಪೊಳೆದ (ಓ.ಮ). 10 ನಡು (ಅ).

ಜೋಳನೆ ಕೇರಳಧಾತ್ರೀ
ಪಾಲಂ ನುಡಿದಂತೆ ನಾಳೆ ನಿರ್ವಾಹವದೊಳ್ ॥ ೩೨೧

ಇದು ಶಬ್ದಸ್ಮೃತಿಯೊಳ್ ಸಮಾಸಪ್ರಕರಣಂ ತೃತೀಯಂ.

ತದ್ಧಿತಪ್ರಕರಣಂ

ಸೂತ್ರಂ ೬೮

ಇವು ಪಣ್ಯಮಿವರ್ಗೆ ಮೇಣಂ
ತಿವು ಶಿಲ್ಪಂ ಮೇಣ್ ನಿಯೋಗಮಿವನಱಿವಂ ಮೇ ।
ಣಿವನಾಚರಿಸುವನೆಂದಿಂ
ತಿವಱೊಳಿಗಪ್ರತ್ಯಯಂ ಯಥೋಕ್ತಮಿನಕ್ಕುಂ ॥ ೩೨೨

ಪ್ರಯೋಗಂ ॥
ಗಂದಿಗನೆರವಣಿಗಂ ಸರ
ವಂದಿಗನಾಪಟ್ಟನಾಲಿಗಂ ಬಾಣಸಿಗಂ ।
[1]ಮಾಂದ[1]ರಿಗಂ ಜೋಯಿಸಿಗಂ
ನಂದಱಿಕೆಯ ಕಬ್ಬಿಗಂ ಸಮಂಜಸನೊಳನೇ ॥ ೩೨೩

ಸೂತ್ರಂ ೬೯

ಇದಱೊಳಿವಂ ವ್ಯಾಪೃತನೆನೆ
ತದಗ್ರದೊಳ್ ಕಾಱಿಶಬ್ದಮಕ್ಕುಂ ಕೆಯ್ಕೊಂ ।
ಡಿದನೀತಂ ನಡೆಯಿಪನೆನೆ
ತೊದಳೇಂ ವಳಮೆಂದು ವಳ್ಳಮೆಂದಿವು ನೆಗಟ್ಟುಂ ॥ ೩೨೪

ಪ್ರಯೋಗಂ ॥
ನಗೆವಡಿಕಾಱಿಂ ನೀಱಿಂ
ಬಗೆಕಾಱಿಂ ಪಾಟಕಾಱಿ[2]ನೊಳ್ನುಡಿ[2]ಕಾಱಿಂ ।
ಪಗೆಕಾಱಿನಾಗಿಯುಂ ಕೆ
ಯ್ಮಗೆ ತಕ್ಕಂ ಕೆಯ್ದುಕಾಱನೆನಿಸಲ್ಕಾಱಿಂ ॥ ೩೨೫

---

1 ಮಂದು (ಓ), 2 ನೊಳ್ಮಗೆ (ಓ.ಮ).

ಅಡಪವಳಂ ಪಡೆವಳ್ಗಂ
ಮಡಿವಳ್ಗಂ ಸೆಜ್ಜೆವಳ್ಗನಜ್ಜಂ ಬೆಜ್ಜಂ ।
[1]ಅಡ ವಳ[1]ನೆಂದಿಂತಿವರಂ
ಕಡಂಗಿ ಬಿಡೆ ಜಡಿಯದಿರ್ಕೆ ನಯಮಱುವರನಂ ॥ ೩೨೬

ಸೂತ್ರಂ ೭೦

ಇದನೀತಂ ಮಾಬ್ಪನೆನಿ
ಪ್ಪುದಱೊಳ್ ಗಾಱಿಪ್ರಯೋಗಮಕ್ಕುಮಪಭ್ರಂ ।
ಶದೊಳಮದೆ ವರ್ತಿಕುಂ ಮ
ತ್ತದರ್ಕೆ ಕರ್ಮಾದಿಯಾದೊಡಾದಿಗೆ ಲೋಪಂ ॥ ೩೨೭

ಪ್ರಯೋಗಂ ॥
ಱಣಿಯರಮೆನೆದೊಪ್ಪಿರ್ಪುಪು
ಮಣಿಗಾಱಿರ ಕಂಚಗಾಱಿರೊಱೆಗಾಱಿರ ತಿಂ ।
ತಿಣಿಯೆನಿಪ ಮಾಲೆಗಾಱಿರ
ಗಣನಾತೀತಂಗಳಾಪಣಂಗಳೆ ಪೊಬಲೊಳ್ ॥ ೩೨೮

ಅದಿವರ್ಣಲೋಪಕ್ಕೆ ॥
ಅಱಿದು ನರ[2]ನೊವಜರೆನ್ನಂ[2]
ಕುಱುಗೋಣ್ಡಱು[3]. . .[3]ನದಱುನೊಡ್ಡಿಸಿದಂ ಕ ।
ಮ್ಮಱನಂಬು ಕಮ್ಮಱಿಂಗೆಂ
ದಱಿಯದೆ ನುಡಿವಂತು ನಾಡವರ್ ಗಾವಿಲರೇ ॥ ೩೨೯

ಸೂತ್ರಂ ೭೧

ಈ[4]ಪೇಳ್ದ[4]ನಿತುಂ ಶಬ್ದಕ
ಳಾಪಂ ಸ್ತ್ರೀವಿಷಯಮಾ[5]ದೊಡಿತಿ[5]ಪರಮಕ್ಕುಂ ।
ರೂಪಾನ್ಯತ್ವದೊಳಾದಿಗೆ
ಲೋಪಂ ತತ್ಪ್ರತ್ಯಯಕ್ಕೆ ಸಂಭವಿಸಿರ್ಕುಂ ॥ ೩೩೦

ಪ್ರಯೋಗಂ ॥
ಮಡಿಯಂ ಮಡಿವಳ್ತಿಯವೋಲ್
ಬಿಡದಮ್ಯತಾನ್ನಮನೊಱಲ್ದು ಬಾಣಸಿಗಿತಿವೋಲ್ ।
ಕುಡು[6]ತಿರ್ದಳ್[6] ಪೂಮಾಲೆಯ
ನೆಡೆಯುಡುಗದೆ ಮಾಲೆಗಾರ್ತಿವೊಲ್ ಮತ್ತೊರ್ವಳ್ ॥ ೩೩೧

1 ಅಡಬಳ (ಓ.ಮು). ಅಡೆಬಳ (ಅ). 2 ನೋದಜನ್ನಂ (ಅ). 3 [ದಱುದ]. 4 ಪೇಟ್ದ (ಓ). 5 ದೊಡಂ (ಅ). 6 ತಿರ್ಪಳ್ (ಅ).

ಸೂತ್ರಂ ೭೨

ಇಂತಿದು ವಿಭಾಷೆಯಿಂ ವ
ರ್ಣಾಂತರದೊಳಮಕ್ಕುಮುಚಿತ ಗುಣವಚನಮುಕಾ ।
ರಾಂತಮ[1]ಳಂ[1]ತಂ ಸ್ತ್ರೈಣದೊ
ಳಂತವಱಿಂ ಪೆಱವು ಪುಂಸ್ತ್ವದೊಳ್ [2]ಸಮರೂಪಂ[2] ॥ ೭೨

ಪ್ರಯೋಗಂ ॥
ಒಕ್ಕಲಿತಿ ಜೋಡೆಯಾದಂ
ತಕ್ಕ[3]ಮವಳ್[3] ಸಿತಗೆ ಪತಿಗೆ ಮಿಗೆ ಕಾಯ್ವಳ್ ನೋ ।
ಟಕ್ಕೆ ಕಡುಸೊಂದಿ ನಾಣಿಲಿ
ಬಕ್ಕಂಬಯಲೊಳಮದಾರುಮಂ [4]ಬಂಚಿ[4]ಸುವಳ್ ॥ ೭೨

ಸೂತ್ರಂ ೭೩

ಅಲ್ಲಿಯೆ ಪುಟ್ಟಿದನಿಂತಿವ
ನಲ್ಲಿಯೆ ತಾಂ ಬಳೆದನೆಂದು ಪೇೞ್ವರ್ಥದೊಳಂ ।
ತೆಲ್ಲಮಿಚಪ್ರತ್ಯಯಮಿಂ
ತಲ್ಲಿ ಯಥಾಲಕ್ಷ್ಯಮಾದಿಗಕ್ಕುಂ ಹ್ರಸ್ವಂ ॥ ೭೩

ಪೊಱಲಿಂದ್ರಪುರಂ ಕಾಲೂರ್
ಪೊಱಲಿಂದ್ರರ್ ಪೊಱಲ ಮಾನನರ್ ಕಾಲುರಿಚರ್ ।
ಪೊಱಲಿಚರೆನೆ ಸೂಗಯಿಸುವುದು
ಪೊಱಲಿಂ ಕಾಲೂರ್ಗಳಿಂದಮಂತಾವಿಷಯಂ ॥ ೭೩

ಸೂತ್ರಂ ೭೪

ಅಲ್ಲಿ ಇದುಂಚೆಂಬರ್ಥದೊ
ಳೆಲ್ಲಯುಮುಳ್ಳೊಡೆಯವಂತಶಬ್ದ [5]ಮವಕ್ಕುಂ[5] ।
ಎಲ್ಲಂದದೊಳಂ ಪೋಲಿಸು
ವಲ್ಲಿ ಗುಣಾಧಿ [6]ಕರೊ[6]ಳಂತೆ [7]ವೋಲ್ ತಾನಕ್ಕುಂ[7] ॥ ೭೪

ಪ್ರಯೋಗಂ ॥
ಸಿರಿಯೊಡೆಯಂ ಸಿರಿಯುಳ್ಳಂ
[8]ನ[8]ರೂಪಿ ಗುಣವಂತನಧಿಕದಾನಿ [9]ಮಹೇಚ್ಛಂ[9] ।

---

1 ದಂ (ಅ). 2 ಸ್ತ್ರೀರೂಪಂ (ಅ). 3 ದವಳ್ (ಅ). 4 ಭಂಜಿ. 5 ಮುಮಕ್ಕುಂ (ಅ). 6 ಕದೊ (ಅ). 7 ವೋಲೆನಲಕ್ಕುಂ (ಅ). 8 ಸು (ಅ). ಸ್ವ (ಮು). 9 ಮಹಾಂತಂ (ಅ).

ನರರೊಳಿವನೆನಿಸಿ ಬಾಬ್ಪುದು
ಪುರಾತನೋದಾತ್ತಪುಣ್ಯಪರಿಪಾಕಫಲಂ ॥ ೫೩೭

ಅಪರಾರ್ಧಕ್ಕೆ ॥
ನುರಪತಿಯಂತೆ ವಿಸ್ಫುರಿತನೇತ್ರಸಹಸ್ರವಿರಾಜಿತಂ ನರೇ
ಶ್ವರಥವನಾಗ್ರದಂತೆ ದೃಢವೇತ್ರಲತಾಶತದುಷ್ಪ್ರವೇಶಮಂ ।
ಬರತಳದಂತೆ ಋಕ್ಷಮೃಗಲುಬ್ಧಕಸಂಗತಮಂಬುರಾಶಿಯಂ
ತಿರೆ ತತವಿದ್ರುಮದ್ಯುತಿ ನಿರಂತರವೊಪ್ಪುಗುಮಾ ವನಾಂತರಂ ॥ ೫೩೮

ಕರಿವೋಲ್ ಭದ್ರಗುಣಂ ಕೇ
ನರಿವೋಲ್ ನಿರ್ವ್ಯಾಜಶೌರ್ಯನಂಭೋನಿಧಿವೋಲ್ ।
ಶರಣಾಗತರಕ್ಷಣಪಟು
ಗಿರಿವೋಲ್ ನಿಷ್ಕಂಪಚಿತ್ತನಾ ನೃಪ[1]ತುಂಗಂ[1] ॥ ೫೩೯

ಸೂತ್ರಂ ೬೫

ಅವಱೊಳ್ ವ್ಯೋಲ್ಗಕ್ಕುಂ ಹ್ರ
ಸ್ವವಿಧಾನಂ ಪಾಕ್ಷಿಕಂ ಮಕಾರಾಗಮದಿಂ ।
ವ್ಯವಧಾನಮವರ್ಣಕ್ಕ
ಕ್ಕುವಲ್ಲಿ ಬಶ್ರುತಿ ವಕಾರದೊಳ್ ನೆಲೆಗೊಳ್ಗುಂ ॥ ೫೪೦

ಪ್ರಯೋಗಃ ॥
ಪೂರ್ವಾರ್ಧಕ್ಕೆ ॥
ಶ್ರೀಯ ಜವ್ವನ [ದ] ರೂಪಿನ ಗಾಡಿಯ ಪೆಂಪಿನೊಂ
[2]ದಾಯು[2] ತಾನೆ ನಡೆತರ್ಪವೊಲೊಪ್ಪಿರೆ ಬಂದಭ ।
ಪ್ರಾಯಸಿದ್ಧಿಯನೆ ಚಿಂತಿಸುತುಂ ಮನದೊಳ್ ಜಯ
ಶ್ರೀಯ ದೂದವಿವೊಲಾ ಸತಿ ಕಂಡು ಶಿಖಂಡಿಯಂ ॥ ೫೪೧

ಅಪರಾರ್ಧಕ್ಕೆ ॥
ನಿಗಳಂಬೊಲ್ ತೊಡರ್ದಿರ್ದ ಮೋಹನಿಗಳಂ ನಿರ್ವ್ಯಾಕುಳಂ ಪಿಂಗೆ ಮ
ತ್ತಗಜೇಂದ್ರಂಬೊಲಲರ್ಗಳಂ [3]ವನ[3]ಮನಂದಾನಂದದಿಂ ಹೊಕ್ಕನಾ ।
ವಗಮಾದಬ್ಕಿಯಳುರ್ಕೆಯಿಂ ಮಕುಟಬದ್ಧರ್ ನೂರ್ವರಂತಲ್ಲಿ ದೀ
ಕ್ಷೆಗೊಳರ್ ತನ್ನೊಡವೋಗೆ ನಿಶ್ಚಿತಮನಂ ಶ್ರೀಚಂದ್ರಭೂವಲ್ಲಭಂ ॥ ೫೪೨

ಸೂತ್ರಂ ೬೬

ತನಮಿಕೆಯುಮೆಂಬಿವುಂ ಚೇ
ತನಭಾವದೊಳಕ್ಕುಮುಟಿದ ಭಾವಾರ್ಥದೊಳಂ ।

---

1 ಪುತ್ರಂ (ಅ). 2 ದಾಯ (ಓ.ಮ). ; ಸರ (ಓ).

ತನಿತಱೊಳಂ ಪು ಕೆ ಯೆಂಬಿವು
ಜನಿಯಿಕುಮಂತಲ್ಲಿ ಕದ್ವಿರುಕ್ತ ವಿಕಲ್ಪಂ ॥ ೩೪೩

ಪ್ರಯೋಗಂ ॥

ಕಡುಗಲಿತನಮುಂ ಛಾಗದ
ಪೊಡವ್ರುಪೊಳ್ನುಡಿಯೊಳಾದ ಮಾನಸಿಕೆಯುಮು ।
ರ್ಕುಡುಗದ ಶೌಚಮುಮಾಯದ
[1]ಪಡೆವಾತುಂ[1] ಪೆರ್ಮೆ[2]ವಡೆದುವ[2]ನಿಂದಿಳೆಯೊಳ್ ॥ ೩೪೪

ಅಪರಾರ್ಧಕ್ಕೆ ॥

[3]ವಾರಿಧಿಯದೊಂದು[3] ಗುಣ್ಪುಂ
ಧಾರಿಣಿಯ ಪೊಗಟ್ತೆವೆತ್ತ ಪೆಂಪಿನ ತಿಣ್ಪುಂ ।
ಮೇರುವಿನ ಬಿಣ್ಪುಮಾ ನೃಪ
ಧೀರನೊಳೊಂದಾಗಿ ನಿಂದುವೆನ್ನದರೊಳರೇ ॥ ೩೪೫

ನಮಿತಾರಿಗೆ ದಮಿತಾರಿಗೆ
ಸಮಸ್ತ ಧಾತ್ರೀವಿಭಾಗದೊಳ್ ಭಾವಿಸೆ ವಿ ।
ಕ್ರಮದ ನಿಮಿರ್ಕೆಗಮಾಯತಿ
ಯಮರ್ಕೆಗಂ [4]ಪೇಱ ಪೋಲ್ಕೆ[4]ಗಾವಂ ಬರ್ಪಂ ॥ ೩೪೬

ಕಕಾರದ್ವಿತ್ವಕ್ಕೆ ॥

ದೇಸಱುದಾಸಱುದೆ ವನಾ
ವಾಸಂಗಳೊಳುನ್ನತಿಕ್ಕೆ [5]ನಿಲೆ[5] ನಮೆದವರೊಳ್ ।
[6]ನೇ[6]ಸುನ್ನಿಕೆಯಿಂ ಕುರುಪತಿ
ಬೀಸರಮಂ ನುಡಿಯದೊಳ್ಳಿತಂ ನುಡಿದಪನೇ ॥ ೩೪೭

ಸೂತ್ರಂ ೭೭

ಒಂದೆರಡು ಮೂಱು ನಾಲ್ಕ
ಯ್ದೆಂದಿನಿತರ್ಕಂ ಬಹುತ್ವವಾಚಿಗಳ್[7]ಮರ್ದಂ ॥
ತೊಂದಿ[7] ನೆಗಟ್ಟುಂ ವಿಕಲ್ಪಂ
ಸಂದಿಸಿ ನೆಲಸಿರೆ ಮೆ ಯೆಂಬುದಕ್ಕುಂ ಸೂಱೊಳ್ ॥ ೩೪೮

---

1 ಪಡೆಮಾತುಂ (ಓ.ಮು). 2 ವಡೆಗುಮು (ಅ). 3 ವಾರಿನಿಧಿಯೊಂದು, ವಾರಿಧಿಯೊಂದು (ಓ.ಮು). 4 ಪೇಱ್ವೋರ್ಕೆ (ಓ.ಮು). 5 ಗಿಡೆ (ಅ). 6 ನೀ (ಓ.ಮು). 7 ಮರ್ದತೊನ್ದಿ (ಓ.ಅ).

ಪ್ರಯೋಗಂ ॥

ಶಯುದಂಷ್ಟ್ರಾವಿಷದಂಶವೊಂದೆ ಜತುಗೇಹೋದ್ದೀಪನಂ ತಾನದೊಂ
ದೆ ಯಥೇಷ್ಟಪ್ರಕೃತಂ ದುರೋದರಜಯಂ ಮತ್ತೊಂದೆ ಕಷ್ಟಪ್ರತಿ ॥
ಕ್ರಿ[1]ಯೆಯಪ್ಪಾ[1]ವಿಷದೂಷಿತಾಶನಮದಂತೇನೊಂದೆ ಹೇಟ್ಟಾಗಳೊ
ರ್ಮೆಯೊ [2]ಮೇಣ್[2]ರ್ಮೆಯೊ ಮೂರ್ಮೆಯೋ ಕುರುಕುಳಪ್ರಾರಬ್ಧದುರ್ವೃತ್ತಕಂ ॥ ೩೪೯

ನೂರ್ಮೆ ಪಶು ಕಱುವುದಂ ತಾ
ನೊರ್ಮೆಯೆ ಕಱುವೆರ್ಮೆಯಲ್ಲದಱಿಯೆರ್ಮೆಗಳೀ ॥
ಯೆರ್ಮೆಗಳೊಳಗಿರ್ಪೆನಿಸಿ
ರ್ದೆರ್ಮೆಯ ಪಿಂಡುಗಳಿನೊಪ್ಪುಗುಂ ಕೆಲವೆಡೆಯೊಳ್ ॥ ೩೫೦

ವಿಕಲ್ಪಕ್ಕೆ ॥

ತನಗಿಂಬಪ್ಪುದನಾಯ್ದು ನೋಡಿ ಪಲವುಂ ಬಿಲ್ವಿಲ್ಗಳೊಳ್ ಬಿಲ್ಲನೊಂ
ದನೆ ಕೊಂಡೇಱಿಸಿ ನೀವಿ ಜೀವೞಡೆದಡುರ್ತೊಂದಂಬಿನಿಂದೊಂದು [3]ನೂ ॥
ಬ್ಬಿ[3]ನೆಯಂ ಪಾವಿನ ಬೆನ್ನೊಳಾದುವನತಿಪ್ರಾರಂಭದಿಂದೇಱುಮಂ
ಜನಕಾಧೀಶತನೂಜೆಯಾಣ್ಮನಿಸುವಂತೆಚ್ಚಂ ಮಹೇಂ[4]ದ್ರಾಂತಕಂ[4] ॥ ೩೫೧

ಸೂತ್ರಂ ೭೮

ಆಳಿಪ್ರತ್ಯಯಮಕ್ಕುಂ
ಶೀಳಾದ್ಯರ್ಥಂಗಳಂ ವಿವಕ್ಷಿಸೆ ಪೆಱತೊಂ ॥
ದಾಳಾಪಮಂತದೇನೊ ಯ
ಥಾಳೋಕನಿರೂಪಿತೋಕ್ತಿಗಳ್ಗನುಸಾರಂ ॥ ೩೫೨

ಮಾಱಾಳಿಯುಮೋದಾಳಿಯು
ಮೇಱಾಳಿಯುಮಪ್ಪನಾಗಿ [5]ಪಡೆ[5]ಪಾಳಿಯೆ ಕೇಳ್ ॥
ನೀಱಿಂ ಜೂದಾಳಿ ಕರಂ
ನೀಱಿಂ ಮಾತಾಳಿ ಕರೆಯೆ ಸಿಗ್ಗಾಳಿ[6]ಯಿವಳ್[6] ॥ ೩೫೩

ಸೂತ್ರಂ ೭೯

ಅದುವಿದುವುದುವೆಂಬಿಂತೀ
ವಿದಿತಾರ್ಥದ ಸರ್ವನಾಮಶಬ್ದಕ್ಕಕ್ಕುಂ ॥
ತದುಪಾಧಿವಿಹಿತ ಪರಿ[7]ಮಾ
ಣ[7]ದೊಳನಿತಿನಿತೆನಿತೆನಿಪ್ಪ ರೂಪನಿಪಾತಂ ॥ ೩೫೪

---

1 ಯಮಪ್ಪಾ (ಓ.ಮ). 2 ಪೇಟಿ (ಅ). 3 ಸೂಟಿ (ಅ). 4 ದ್ರಾತ್ಮಕಂ (ಅ).
5 ಪಡ (ಓ.ಮ). 6 ಳಿಯವಂ (ಓ), ಳಿಯಿವಂ (ಅ), ಳೆಯವಂ (ಮ). 7 ಣಾಮ (ಅ).

ಅನಿತೊಂದಣ್ಮನಿತೊಂದು ದರ್ಪಮನಿತೊಂದೌದ್ಧತ್ಯಮುಂ ಮುನ್ನ [1]ಮಾ
ದ[1]ನೊಳಿನ್ನಪ್ಪನೊಳುಂಟೆ ದಾನವರೊಳೆಂಬುದ್ಯೃತ್ತನಂ ನಾರಸಿಂ ॥
ಹನ ರೂಪಿಂ ನಖದೊಳ್ ವಿದಾರಿಸಿ ಕುನುಂಭಾರಕ್ತಮಂ ಪಟ್ಟಗಾ
ಱಿನೆ ಪಾನಂ [2]ತವೆ[2] ತೋಡುವಂತೆ ಕರುಳಂ ನೀಂ ತೋಡಿದ್ಯೆ ದೈತ್ಯನಾ ॥

ಇನಿತಱಲುಮಿನಿತು ಮಱುಕಮು
ಮಿನಿತು ಮನಃಕ್ಷತಮುಮಾವನಿಂದಾದುದವಂ ॥
ಗಿನಿತಱಲನಿನಿತು ಮಱುಕಮ
ನಿನಿತು ಮನಃಕ್ಷತಮನ[3]ಬ್ಬ[3] ಮಾಡದೆ ಮಾಣಿಂ ॥ ೩೫೬

ಜನನೀಜನಕನಹೋದರ
ವನಿತಾನುತ[4]ಪೌತ್ರಮಿತ್ರ[4]ಸಂಬಂಧಮದಂ ॥
ತೆನಿತೆನಿತು ಭವದೊಳಾಯ್ತು
ರ್ಗ್ಗೆನಿತೆನಿತಂ ನೆನೆವುದೆನಿತನವಧರಿಸುವುದೋ ॥ ೩೫೭

ವ॥ ಇವರ್ಕೆ ದ್ವಿತ್ಯಪ್ರಯೋಗವುಂ ಸೂತ್ರನಿರ್ದೇಶದೊಳ್ ಜ್ಞಾಪಕ[5]ಸ್ಥಿತ[5]ಮಕ್ಕುಂ ॥
ಕಾಯಲುಂ ಬಲಗರ್ವದಿಂ ನೆಲನೆಲ್ಲಮಂ ನೆಲಕೆಲ್ಲಮಾ
ತ್ರಿರ್ಗ್ಗೀಯಲುಂ ತನಗಾ ಚತುರ್ಭುಜಮುಂ ಭುಜದ್ವಯಮಾದನಿ ॥
ತ್ತಾತ್ತಯದಾಯತಿ ತೋಳೊಳೊಪ್ಪಿರೆ ಮಿಕ್ಕ ಪೆಂಪಿನ ಕೀರ್ತಿನಾ
ರಾಯಣಂ ದಯೆಗೆಯ್ದೆ [6]ಚಾಗ[6]ಚತುರ್ಭುಜಂ ಗರುಡಧ್ವಜಂ ॥ ೩೫೮

ಎನಿತ್ತೆನಿತ್ತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ ॥
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನಂತು [7]ಕೀಸುಗುಂ[7] ॥ ೩೫೯

ಸೂತ್ರಂ ೬೦

ಮತ್ತಮವರ್ಕ್ಕುಂ ಸಮು
ಪಾತ್ತ ನಕಾರಂ ಪ್ರಕಾರಕಾಲಾರ್ಥಂ ಮೆ ।
ಯ್ವೆತ್ತಿರೆ ತುದುವೆಂಬಿವು ವಿ
ದ್ಯೋತ್ತಮರೀ ತೆಱದಿನಱುಗೆ ಪೆಱವುಮ[8]ನಿದಱೊಳ್[8] ॥

---

1 ಮಾರ (ಓ.ಮು). 2 ತನೆ, ತಸೆ (ಅ). 3 ಬೆ (ಅ). 4 ಮಿತ್ರಪುತ್ರ (ಓ). 5 ಸಿದ್ಧ (ಅ). 6 ಭಾಗ (ಅ). 7 ಕೀಸುವಂ (ಅ.ಮು). 8 ನಿವಱೊಳ್ (ಅ).

ಪ್ರಯೋಗಂ ॥

ಪ್ರಕಾರಾರ್ಥಕ್ಕೆ ॥

ಅಂತು ಕಾಡುಗುಮೆ ಲೋಕಮನಿಂದ್ರಂ
ಗಂತು ಮಾಡುಗುಮೆ ಬನ್ನಮನೋಪ್ಪೋ ।
ಅಂತು ನೂಡುಗುಮೆ ಕೇಸುರಿಯಂ ಪೇ
ಱಂತು ಕೂಡುಗುಮೆ [1]ಬೀರಮದಾರ್ಗಂ[1] ॥ ೩೬೧

ಇಂತಿಂತೆ ಪಲಬರುಂ ತ
ತ್ಸಂತತಿಯೊಳೆ ಕಟಿದು ಪೋಗೆ ಜನಿಯಿಸಿದಂ ದು ।
ಷ್ಯಂತಂ ದುಷ್ಯಂತಂಗಮ
ನಂತಗುಣಂ ಭರತರಾಜ[2]ನಾದಂ[2] ತನಯಂ ॥ ೩೬೨

ಎಂತೆಡಱಿದಯೆಂತುರ್ಕಿದ
ಯೆಂತೊದವಿದಯೆಂತು ಮಗುಬ್ದಯೆಂತೊದಱಿದಯಾ ।
ಯ್ತೆಂತೆನಗಿದಿರ್ಚಿದಯ್[6] ಮಗು
[3]ಟ್ಟಿಂ[3] ತೊಡರದಿರೆನೆ ಸಿತಾಶ್ವನೆಂದಂ ಕರ್ಣಂ ॥ ೩೬೩

ಕಾಲಾರ್ಥಕ್ಕೆ ॥

ಮುನಿಸಿಂ ಮೇಲೆತ್ತಿ ಬರ್ಪಂದಿನ ವಿಪುಳಶಿಲಾಸ್ತಂಭಮಂ ಕೀಱಿ ಕೀಲ್ಪಂ
ದಿನ ದೆಂಕೊಂಡಟ್ಟಿ ಕೊಲ್ಪಂದಿನ ತಿರಿಪಿ ಕಪಿತಾತ್ಥವನೀಜಾತದಿಂದಂ ।
ಬನದೊಳ್ ಮೆಯ್ವೆರ್ಚಿ ಪೊಯ್ವಂದಿನ ನಿಜಭುಜವಿಕ್ರಾಂತಮೇನಾದುದಿಂತೀ
ಜನಮೆಲ್ಲಂ ನೋಡೆ ಚೌವಟ್ಟಿದ ಬಿನುಪುಡಿಯೊಳ್ ಬಿಱ್ದು ಸಾವಂತುಟಾಯ್ತ್ತೀ ॥

ಇಂದು ಪಿಂಗಿದುವೆಮ್ಮ [4]ಪೀಡೆ[4]ಗಳಿಂದು ಸಾರ್ದುವು ಸಯ್ವು ತಾ
ವಿಂದಮೋಘಫಲಂಗಳಾದುವು ಯಜ್ಞದಾನನಮಾಧಿಗಳ್ ।
ಇಂದು ನಂಬಿದೆವಾವುಮೆಮ್ಮ ನೆಗಪ್ತೆಯೊಳ್ಪನದಲ್ಲದೆ
ಮ್ಮಿಂದುವಂಶಮುಮಿಂದು ನಿರ್ಮಳಮಾದುದಿಂದುಧರೋಪಮಾ ॥ ೩೬೫

ಎಂದಮರರನಱಿಯಟ್ಟುವೆ
ನೆಂದಮರಾವತಿಯನೀಬ್ದುಕೊಳ್ವೆಂ ಶಕ್ರಂ ।
ಗೆಂದಭಿಭವಮಂ ಮಾಡುವೆ
[5]ನೆಂದಲ್ಲಿ[5] ಪಲುಂಬಿ ಚಿಂತಿಕುಂ ದನುತನಯಂ ॥ ೩೬೬

ಅಲ್ಲಿ ಪೆಱವು ಗ್ರಹಣಕ್ಕೆ ॥

ವಿರಹದೊಳಾದ ವೇದನೆಯನಾಱಿಸಲಾಮರನೊಳ್ಳಿತೆಂದು ಮಾ
ಮರದ ನೆಲರ್ಗೆ ಪ್ರೋಪೆ ಗಡ ಕಾಮನ ಡಾಮರಮಲ್ಲಿ ಕೋಕಿಲೋ ।

---

1 ಸಾಹಸಮಾರ್ಗಂ (ಓ.ಮ). 2 ನೆಂಬಂ(ಓ). 3 ಱ್ದಿಂ. 4 ಜೇಸೆ, ಸೇದೆ (ಮ). 5 ನೆಂದೆಂದು (ಮ).

ತ್ಕರ[1]ರವಮಲ್ಲಿ[1]ಚಾವಳಿಪ ರಾಜಶುಕವ್ರಜಮಲ್ಲಿ ಕಾಯ್ದು ಪ
ಲ್ಮೊರೆವ ಮದಾಳಿಯಲ್ಲಿ ಸಖಿ ಸಾರದಿರಾ ಮರನಂ ವನಂತದೊಳ್ ॥ ೩೬೨

ಸೂತ್ರಂ ೮೧

ಗಣನಾವಿಶೇಷಪರಿಪೂ
ರಣದೊಳಮನಿತಿನಿತೆನಿತ್ತು ಶಬ್ದಂಗಳ ಪೂ ।
ರಣದೊಳಮನೆಯಪ್ರತ್ಯಯ
ಮೊಣರ್ದು ಸಮಂತೊಂದಿ ತೋಱುಗುಂ ತದ್ಧಿತದೊಳ್ ॥

ಪ್ರಯೋಗಂ ॥

ಜಿನಮದನರೊಳಗೆ ಪದಿನಾ
ಱನೆಯಂ ತತ್ಸಕಲಚಕ್ರವರ್ತಿಗಳೊಳಗ ।
ಯ್ದೆನೆಯನೆನೆ ಪುಣ್ಯಪುಂಜಾ
ರ್ಜನಕ್ಕೆ ಶಾಂತೀಶನಂತು ನೋಂ[2]ತರುವೊಳರೇ[2] ॥ ೩೬೯

ಇನಿತನೆಯ ಭವದೊಳಿಂತಾ
ಯ್ತಿನಿತನೆಯ ಭವಾಂತರಂಗಳೊಳ್ ಮತ್ತಂ ಮೇ ॥
[3]ಲನಿತು[3] ಸುಖದುಃಖಫಲಮುಂ
ಜನಿಯಿಕುಮೆಂದಱಿವುದರಿದು ಸಂಸೃತಿಗತಿಯೊಳ್ ॥ ೩೭೦

ಸೂತ್ರಂ ೮೨

ಇರೆ ತದ್ಧಿತಪ್ರಯೋಗಂ
ಪರದೊಳ್ ಚರಮಸ್ವರಕ್ಕೆ ಲೋಪಮದಕ್ಕುಂ ।
ನಿರವಿಸಿ ಮುನ್ನೆ ಸಮಾಸಾಂ
ತರದೊಳ್ ಪೇೞ್ದೊಂದು ಕಾರ್ಯಮುಂ ಬಂದಿರ್ಕುಂ॥೩೭೧

ಪ್ರಯೋಗಂ ॥

ತೊಟ್ಟು ತೀವಿ ಬಳೆಯಂ ನಿಡುದೋಳ್ಗಳೊಳೊಂದುವಂ
ತುಟ್ಟು ಪೆಣ್ಣುಡೆಯ[4]ನಾಡಿಸಿ[4] ಬಾಬ್ಬ ಶಿಖಂಡಿ ಮುಂ ।
ನೆಟ್ಟನರ್ಜುನನ ಸಾರಥಿಯೆಂಬುದನೀಗಳೀ
ಘಟ್ಟವಳ್ತಿ ನುಡಿದಳ್ ತಿಳಿವಂತೆಮಗೆಲ್ಲಮಂ ॥ ೩೭೨

ಒರ್ಮೆ ಪೋಗಿ ಮೃಗಯಾನಿಮಿತ್ತದಿಂ
ಧರ್ಮಮಂ ಮಱೆದು[5]ನೋಡ[5] ಬೇಡಿದೊಂ ।

---

1 ವಳಮಾರೆ (ಅ). 2 ತವತೊಳರೇ (ಓ.ಮ). 3 ಗಿನಿತು (ಅ). 4 ನಾಟಿಸಿ (ಅ). 5 ನೋಡಿ (ಅ.ಓ).

ಪೆರ್ಮೆಗೆಟ್ಟು ಜಮದಗ್ನಿಯಂ ನೃಪಂ
ದುರ್ಮದಂ ಸುರಭಯಂ ವಿಮೋಹದಿಂ ॥ ೩೭೩

ಇದು ಶಬ್ದಸ್ತ್ರೀಯೊಳ್ ತದ್ಧಿತಪ್ರಕರಣಂ ಚತುರ್ಥಂ

ಆಖ್ಯಾತಪ್ರಕರಣಂ

ಸೂತ್ರಂ ೮೩

ಭೂತವತಿ ವರ್ತಮಾನಂ
ಖ್ಯಾತಭವಿಷ್ಯಂತಿ ಸರ್ವಸಾಧನಿ[1]ಯೆಂಬಾ[1] ।
ಖ್ಯಾತವಿಭಕ್ತಿಗಳಕ್ಕುಮ
ತೀತಭವದ್ಭಾವಿಕಾಲವಿಧ್ಯಾದಿಗಳೊಳ್ ॥ ೩೭೪

ಪ್ರಯೋಗಂ ॥

ಭೂತವತಿಗೆ ॥

ತ್ರಿಭುವನರಾಜ್ಯಪಟ್ಟದೊಡವುಟ್ಟದನಾವಿಭು ಪುಟ್ಟಿ[2]ದಂತೆ ತಾಂ[2]
ರಥನದೆ ಸಿಂಹವಿಷ್ಟರಮನೇಱಿದನೆತ್ತದೆ [3]ತಾಮೆ[3] ಮುಂದೆ ಬಂ ।
ದಭಮತಮಪ್ಪ ಬೆಳ್ಗೊಡೆಗಳುಂ ನೆಗೆದೊಪ್ಪಿದುವಿಂ[4]ತೆ[4] ದಲ್ ಜಗ
ತ್ಪ್ರಭುತೆ ಜಗತ್ತ್ರಯಂಗಳೊಳಗಗ್ಗಳಮಾದುದು ದೈತ್ಯರಾಜನಾ ॥ ೩೭೫

ವರ್ತಮಾನಕ್ಕೆ ॥

ಎನಗಿದುದೀಗಳೀಗಳಿನಿಸೊಯ್ಯನೆ ತೆಂಕಣ ಗಾಳಿ ಕೋರಕ
ಪ್ರಸರ[5]ದಿನೀ[5]ಗಳೀಗಳೆನೆ[6]ದಪ್ಪುದು[6] ಚೂತಮಹೀಜಮೆಯ್ದಿ ರಾ ।
ಗಿಸಿ ದೆಸೆಗೀಗಳೀಗಳುಲಿದಪ್ಪುದು ಕೋಗಿಲೆ ಕಂತು ಬಿಲ್ಲನೇ
ಱಿಸಿದಪನೀಗಳೀಗಳೆಲೆ ಸುಗ್ಗಿಯದೊಂದು ಪೊಡರ್ಪಿದಾಗದೇ ॥ ೩೭೬

ಭವಿಷ್ಯಂತಿಗೆ ॥

ಕಡುಕೆಯ್ದಾಂತನ್ಯಸೈನ್ಯಂಗಳನಳಱಿ ಭರಂಗೆಯ್ದು ನಿಮ್ಮೊಂದೆ ಮೆಯ್ಯೊಳ್
ಕಿಡಿನಲ್ [7]ಸಾಲ್ವರ್[7] ಸಮಾಸಾದಿತರಣರಸಿಕರ್ ನಿಮ್ಮ ಮುಂದಾದಮಣ್ಮಂ ।

---

1 ಯೆಂದಾ. 2 ದನ್ತಿರಾ (ಅ). 3 ತಾನೆ (ಮ). 4 ತು (ಓ.ಮ).
5 ದೊಳೀ (ಅ). 6 ದಿರ್ದುದು (ಅ). 7 ಸಾರ್ವಿರ್ (ಅ).

ನುಡಿವಾಗಳ್ [1]ನಾಡೆ[1] ಲಜ್ಜಾಕರಮದಱಿನದಂತಿರ್ಕೆ ಜೀಯೆಂಬಿನಂ ಮಾ
ರ್ಪಡೆಗೆನ್ನೀ ಬಾಳಕೇಳೀವಿಳ[2]ಸನ[2]ಮನದಂ ಯುದ್ಧದೊಳ್ ನಾಳೆ ತೋರ್ಪೆಂ ॥

ಏಧ್ಯಾದಿಗೆ ॥

[3]ಮರ್ಚದಿರು[3] ಬಸನಮಂ ಗಿಳಿ
ಗರ್ಚದಿರು ಖಳಸ್ಪ[4]ಭಾವಮಂ[4] ಮನೆಯತ್ತಲ್ ॥
ನಾರ್ಚು ಹಿತರಪ್ಪರಂ ನಲೆ
ವೆರ್ಚಿಸು ತಳವರ್ಗಮಂ ಮನಂಗೊಳೆ ಮಗನೇ ॥ ೩೭೮

ಸೂತ್ರಂ ೮೪

ಕವದಿನಮರಯಿರೆನೆವೆನಿ
ಪ್ಪವು ವರ್ತಿಕುಮನ್ಯಯುಷ್ಮದಸ್ಮದ್ವಿಷಯ ।
ವ್ಯವಹೃತಿಗಳ್ಗೀಕಾನೇ
ಕವಚನದಿಂ ಪ್ರತಿವಿಭಕ್ತಿ ಪುರುಷಾಖ್ಯಂಗಳ್[6] ॥ ೩೭೯

ಪ್ರಯೋಗಂ ॥

ಪ್ರಥಮಪುರುಷಕ್ಕೆ ॥

ತೊಟ್ಟಂ ಸಂಮೋಹನಮಂ
[5]ತೊಟ್ಟನೆ[5] ಭುಜವಿಜಯಶಾಲಿ ಫಲ್ಗುಣನಾಗಳ್ ॥
ಪುಟ್ಟಿದ ನಿದ್ರಾ[6]ಭರದಿಂ[6]
ದೊಟ್ಟೈಸಿ ವಿರೋಧಿಭೂಭುಜರ್ ಮೆಯ್ಮಱೆದರ್ ॥ ೩೮೦

ಮಧ್ಯಮಪುರುಷಕ್ಕೆ ॥

ನುಡಿದಯ್ [7]ಪೊಚ್ಚ[7]ಮಾತಂ
ಬಿಡದೆನ್ನೊಳ್ ಜಱುಚುತಿರ್ಪುದಾವುದು ಗಂಡು ॥
ಕೈಕೊಡೆ ಮೊನೆಗಿದಿರ್ಚಿ ಬರವೇಟ್
ತೊಡ[7]ರ್ದಾಗಳ್[7] ಕಾಣ್ಬೆರೆಮ್ಮ ನಿಮ್ಮೊಂದಳವಂ ॥ ೩೮೧

ಉತ್ತಮಪುರುಷಕ್ಕೆ ॥

ಅನುರಹರಂ ತೇರಂ ನ
ಯ್ತೆನಗುವನಾಂ ಕೀಱಿ ನಿಂದು ಬಿಲ್ಗೊಳ್ವೆನೆನಲ್ ॥
ವಿಸನನಮದಾವುದರಿದ
ರ್ಕನೂನುವಂ ಕೊಂದೆವೆಂದು ನಿಶ್ಚಿಂತಮಿರಿಂ ॥ ೩೮೨

---

1 ನೋಡೆ (ಅ). 2 ಸಿತ (ಓ.ಮ) 3 ಮಚ್ಚರಿಸು (ಮ). 4 ಭಾವ ದೊಳ್ (ಓ.ಮ). 5 ನೆಟ್ಟನೆ (ಮ). 6 ಭರಮಿರ (ಓ.ಮ). 7 ರ್ದಾಗಡೆ (ಅ)

ಸೂತ್ರಂ ೬೫

ಮಿಗದಾನ್ಯಾರ್ಥದೊಳಂತವು
ನೆಗಟ್ಟುಂ ತಂತಮ್ಮ ಸಾಧನಂಗಳೊಳನಿತುಂ ।
ಯುಗಪತ್ಪ್ರಯೋಗಮಾದಂ
ದು ಗಣನೆಯೊಳ್ ಮುಂದೆ ನಿಂದುದಾವುದದಕ್ಕುಂ ॥ ೬೬೩

ಪ್ರಯೋಗಂ ॥
ಸ್ವಾರ್ಥಕ್ಕೆ ॥
ಎಂದಿಂತಾತನನಂದು ನಂಬಿಸಿದೊಡಾ ಮತ್ಸ್ಯಾತ್ಮಜಂ ನಂಬಿ ಸಾ
ನಂದಂ ಬಂದು ಸುರೇಂದ್ರಸೂನುಗೆ ತುಟಿಲ್ಗೆಯ್ದುಂದನಾನಿನ್ನೆಗಂ ॥
[1]ಬಂದಯ್[1] ನೀಂ ದಯೆ[1]ಯಿಂದಮಾನಱಿದೆನಿಲ್ಲೀಗಳ್ ಮನಂದಂದೆನಿ
ನ್ನೊಂದುಂ ಸಂದೆಯಮಿಲ್ಲ ತೇರನೆಸಪೆಂ ನೀಂ ಕಾದಿ ಗೆಲ್ ಫಲ್ಗುನಾ ॥ ೬೬೪

ಯುಗಪತ್ಪ್ರಯೋಗಕ್ಕೆ ॥
ಆಮುಂ ದ್ರೋಣ[2]ರು[2] ಮಶ್ವ
ತ್ಥಾಮನುಮಂಗಾಧಿರಾಜನುಂ ಕೃಪನುಂ ಸಂ ॥
ಗ್ರಾಮದೊಳಾಂಪೆವರಾತಿಯ
ನೇಮಾತಡಿಯೆತ್ತು ತಡೆಯದಿರ್ ಭುವನಪತೀ ॥ ೬೬೫

ಸೂತ್ರಂ ೬೬

ದದಪವಕಾರಂಗಳ್ ಮೂ
ಲದೊಳಕ್ಕುಂ ಭೂತವರ್ತಮಾನಭವಿಷ್ಯ ।
ದ್ವಿದಿತವಿಭಕ್ತಿತ್ರಿತಯ
ಕ್ಕದೆಲ್ಲ ವಚನಂಗಳೊಳ್[3]ಮಿದಾಗಮ[3]ಮಕ್ಕುಂ ॥ ೬೬೬

ಪ್ರಯೋಗಂ ॥
ಭೂತವತಿಗೆ ॥
ಆಡಿದನಿಂದ್ರನಿಂದ್ರಗಣಿಕಾ[4]ಗಣ[4]ಮಟ್ಟಱಿಯೊಳ್ಳು ಮಂಗಳಂ
ಬಾಡಿದುದಬ್ಜಜಂ ಪರಿ ಸೇನೆಯನಿಕ್ಕಿದನದ್ರಿ ತಾನೆ ಮುಂ ॥
ಡಾಡಿ ವಿಭೂತಿಯಿಂದೊನಗೆಮಾಡಿದನಂಗಜನಂಗಲಕ್ಷ್ಮಿಯೊಳ್
ಕೂಡಿದನೆಂದೊಡೇವೊಗಟ್ಟುದೋ ಭವಶ್ಯೆಲಭವಾವಿವಾಹಮಂ ॥ ೬೬೭

---

1 ಬಂಧದೊಳಂತವುಯಿಂನಿಂದಯೆ (ಅ). 2 ನು (ಬಿ). 3 ಗಿದಾಗಮ (ಅ).
4 ಜನ (ಅ).

ವರ್ತಮಾನಕ್ಕೆ ॥

ಮಾಡಿದಪಂ ಖಳನಮಿತಿಗೆ
ಕೇಡಂ ತಕ್ಕರನುದಾತ್ತಮಹಿಮೋನ್ನತಿಯೊಳ್ ॥
ಕೂಡಿದಪಂ ನೀಡಿಲ್ಲದೆ
ನೀಡಿದಪಂ ಬೇಟ್ಟುವಂಗೆ ಬೇಟ್ಟುದನಿಂದ್ರಂ ॥ ೩೮೮

ಭವಿಷ್ಯಂತಿಗೆ ॥

ಬರ್ಪೆನಮೋಘಮಬ್ಜನಮಯಕ್ಕೆ ಪಲುಂಬದೆ ಪಾರುತಿರ್ಪುದಾಂ
ಬರ್ಪುದನೆಂದು ಪೋದನಿನಿಯಂ ಜಲದಾಳಿಗಳಿಂತಿವೀಗಳೇ ॥
ಬರ್ಪುವೆ ಬಂದನಿಲ್ಲ ತಡೆದಂ ಪರದೇಶದೊಳಾದ ಮರ್ಚಿನಿಂ
[1]ಕೂರ್ಪೊಡೆ[1] [2]ಬರ್ಪರಲ್ಲ[2]ದೊಡೆ ಬರ್ಪರೆ ಕಲ್ಲೆರ್ದೆ[3]ಯಪ್ಪ[3] ಮಾನಸರ್॥ ೩೮೯

ಸೂತ್ರಂ ೬೭

ಭಾವಿಭವತ್ಕಾಲಂಗಳೊ
ಳಾವಿಹಿತವಿಧಕ್ತಿಯಾದಿಗಳೊಳಾಗಮದಿಂ ।
ತಾವೊಲ್ವರ್ ಕೆಲಬರ್ ಭಾ
ಷಾವಿದರುದ್ಭಾದಿಯಕ್ಕಮದುವುಂ ಪ್ರಾಯಂ ॥ * ೩೯೦

ಸೂತ್ರಂ ೬೮

ಅವಱೊಳಗೆ ನಪುಂಸಕಲಿಂ
ಗವಿಷಯಮಾದಲ್ಲಿ ಮೊದಲ ಪುರುಷಂ[4]ಗುದುವೆಂ ।
ಬು[4]ವೆ ದಲ್ ಸಮನಿಸುಗುಂ ಸ್ತ್ರೀ
ವಿವಕ್ಷೆಯೊಳ್ ನೆಗಳ್ದುಮೇಕವಚನಮಳಂತಂ ॥ ೩೯೧

ಪ್ರಯೋಗಂ ॥

ಊದಿದುದು ತಣ್ಣೆಲರ್ ಕಳ
ನಾದಂ [5]ನಾದರ[5]ದೊಳೊಂದಿ ನೆಗಳ್ದುದು ಪದ್ಮಾ ।
ಮೋದ[6]ಮಿನಿಸುಂ[6] ತೊವರ್ತೊವ
ರಾದುದು ಕೂಗಿದುವು ತಾಮ್ರಚೂಡಕುಳಂಗಳ್ ॥ ೩೯೨

---

1 ಕೂರ್ಪರೆ (ಓ.ಮ). 2 ಪರ್ಬರಲ್ಲ (ಅ.ಇ). 3 ಯಾದ (ಓ.ಮ). 4 ಗದು ವೆಂದುವೆ (ಓ ಮ). 5 ಗಾಂದರ (ಓ.ಮ). 6 ಮಿನಿಸಂ (ಓ.ಮ).

* ಒಂದು ಪ್ರತಿಯಲ್ಲಿ ಈ ಸೂತ್ರವೇ ಇಲ್ಲ.

ಅಱಿವಳ್ ಪಾಂಡುತನೂಜರ
ತೆಱನೆಲ್ಲಮನೀಕೆ ನುಡಿವಳಲ್ಲಳ್ ತಪ್ಪಂ ।
ಮಱಸಿ ಪುಸಿನುಡಿವ ಜಱುಚರ
ತೆಱನಂ ಕಂಡಱಿಯದಂತು ಕುಳಿಯರುವೊಳರೇ ॥ ೬೯೩

ಸೂತ್ರಂ ೮೪

ಅರೆಬರ್ ತದೇಕವಚನಾಂ
ತರಂ ನಪುಂಸಕದೊಳಾಗೆ ತುತ್ತ್ವನ್ಯತರಂ ।
ದೊರೆಕೊಳ್ಗುಮೆಂಬರವು ಮುಂ
ತಿರೆ [1]ಪೊರ್ದುಗುಮರ್ದಿಕಾರಮಕ್ಕೆ ಯಕಾರಂ[1] ॥೬೯೪

ಪ್ರಯೋಗಂ ॥

ಮುಟ್ಟಿತು ಮುಟ್ಟಿದು ದಿವಮಂ
ಪೆಟ್ಟಿತು ಪೆಟ್ಟಿದು ರಸಾತಳಾಗ್ರಮನೆಂಬೊ ।
ಳ್ಪಿಟ್ಟಳಮಾಗಿರೆ ದಿವಿಜರ
ದಿಟ್ಟಿಗೆ ಸೊಗಯಿಸಿತು ಮುಂದೆ ಮಂದರಶೈಲಂ ॥ ೬೯೫

ಉರಗರಗಿದರ್ ದೈತ್ಯರ್ ಬೆಳ್ಕುತ್ತರಳ್ಕಿದನಿಂದ್ರನೀ
ಶ್ವರನ ಮನಮ[2]ಪ್ಯಾಡಿತ್ತೊಡಿತ್ತು[2] ಕಿನ್ನರಸ್ತ್ರೀಯಮಾ ।
[3]ನರಲ ಬರಮಂ[3] ಕಂಡಿಂ ಕೆಟ್ಟಿತ್ತು ಭಾರತಮೆಂದು ತಾ
ವರೆಯೆರೆಯ ನೀರಂತಾಯ್ತೆತ್ತಂ ಸುರಾಸುರಮಂಡಲಂ ॥ ೬೯೬

ಸೂತ್ರಂ ೮೦

ಅವಿಶಿಷ್ಟಲಿಂಗವಚನ
ವ್ಯವಸ್ಥೆಯಿಂದೊಂದಿ ಗುಂ ಕುಮಾದೇಶಂಗಳ್ ।
ಬವರಿಸುಗುಂ ಸಂಪ್ರತಿಗಂ
ಭವಿಷ್ಯದರ್ಥದೊಳಮನ್ಯವಚನೋಕ್ತಿಗಳೊಳ್ ॥ ೬೯೭

ಮಾಱುಗುಮಲ್ಲಿ ದೇವರೆಡೆವೊಕ್ಕೊಡಮಾತ್ಮಭುಜಪ್ರತಾಪಮಂ
ತೋಱುಗುಮುರ್ಕಿ[4]ದನ್ಯ[4]ನೃಪನಂದನರಂ ತವೆ ಕೊಂದು ನಾಯ್ಗುಳಂ ।
ತೀಱುಗುಮಾಗ [5]ಳಲ್ಲಿ[5] ತೊಡರ್ದಾರುಮನುಗ್ರಪತತ್ರಿಭಾರಮಂ
ಪೇಱುಗುಮಂತುಮಾಂತೊಡವರಂ ಬಡಿಯೊಳ್ ಪುಡಿಗುಟ್ಟಿ ತೂಱುಗುಂ ॥ ೬೯೮

---

1 ಪೊರ್ದುಗೆಯಮರ್ದಕಾರಮಕ್ಕುಮಿಕಾರಂ (ಅ). 2 ಳ್ಪಾಡಿತ್ತೊತ್ತಿತ್ತು (ಅ.ಡ).
3 ನರನಬಲಮಂ (ಓ). 4 ದಂದು (ಅ). 5 ಮುಲ್ಲಿ (ಅ).

ಅರ್ಕೇಂದುಗಳಂ ತವೆ ನುಂ
ಗಿರ್ಕುಂ ಕಟ್ಟರೆ ಸಿಡಿಲ್ಗಳೆಱಗುಗುಮಂತುಂ ।
ಬರ್ಕುಂ ನಿನ್ನೋಪಳ್[6] ಭಯ
ಮಿರ್ಕುಮೆ ನೀನಿರ್ಪ ಮನದೊಳುಗ್ರ[1]ತುಳಾಕರ್ಾ[1] ॥ ೩೯

ಸೂತ್ರಂ ೯೧

ಉಗೆಕೆವಿಕಲ್ಪಿತಮನ್ಯಾ
ರ್ಥಗತಿಯೊಳುತ್ಪೇತ್ಪ[2]ಯುಕ್ತಿ[2]ಯುಷ್ಮತ್ಸಂಜ್ಞೋ ।
ಕ್ತಿಗ[3]ಳೊಳಮ[3]ನ್ಮದ್ಬಹುವಚ
ನಗತಿಯೊಳಂ ನೆಗಟ್ಟಿ ಸರ್ವನಾಧನಿಗಕ್ಕುಂ ॥ ೪೦೦

ಪ್ರಯೋಗಂ ॥
ಅನ್ಯಾರ್ಥಗತಿಗೆ ॥
ಮೇದಿನಿ ಸಾಗರಾಂತಮದು ನಿನ್ನನೆ ಪತ್ತುಗೆ ನಿನ್ನ ವಕ್ಷದೊಳ್
ಶ್ರೀ ದೊರೆಕೊಂಡು ಪೆರ್ಚುವೆರಸಿರ್ಕೆ ಸಮಂತು ನವಗ್ರಹಂಗಳೇ ।
ಕಾದಶಮಕ್ಕೆ ಕೀರ್ತಿ ಪರೆದಿರ್ಕೆ ಜಯಾಂಗನೆ ಕೂರ್ಕೆ ನಿಚ್ಚಲುಂ
ವೇದದೊಳೋದಿದಾಯು ನಿನಗಕ್ಕೆ ಚಿರಂ ಕಲಿಕಾಲನೂದನಾ ॥ ೪೦೧

ಯುಷ್ಮತ್ಸಂಜ್ಞೋಕ್ತಿಗೆ ॥
ವಾಯಸದಂತೆ ನೋಡು ಬಕದಂತಿರೆ ಮೆಲ್ಲನೆ ಮೆಟ್ಟು ಕಚ್ಚಪೋ
ಪಾಯದಡಂಗಿ ನಿಲ್[5] ಭ್ರಮರಿಯೊಳ್ ಭ್ರಮಿಯಂತಿರೆ ಬೆಚ್ಚರಾಗು ಖ ।
ಪ್ಲಾಯುಧ[4]ಚಾಮರಂ[4] ಪೊಳೆವ ಮಿಂಚನೆ ಪೋಲ್ತಿರೆ ಬೀಸು ನೀಂ ಖಳ
[5]ನ್ಯಾಯದಿ[5]ನೆಲ್ಲಮಂ ನೆಱಿಯೆ ಕಲ್ತುಪದೇಶಕನಾಗು ಲೋಕದೊಳ್ ॥ ೪೦೨

ಕಂ॥ ಹರಿ ನುಡಿಯೆ ನುಡಿಯಿ[6]ಮುಲಿ[6]ಯಲ
ಮಿರಿಮುಸಿರ[7]ಲಮತ್ತ[7]ಸಾರಿವೆರೆಮಿಡುಕದಿರಿಂ ।
ಪಿರಿದುಂ [8]ಗಱಪಲಮೆಡೆ[ಗೋ
ದಿ]ರದಿರಿ[8]ಮೆನುತಿರೆ ಕಡಂಗಿ ಪಡಿಯಱಿರೆತ್ತಂ ॥ ೪೦೩

ಅನ್ಮದ್ಬಹುವಚನಗತಿಗೆ ॥
ನೆನೆಯದೆ ಕಜ್ಜದ [9]ಬಿಣ್ಪಂ[9]
ಮುನಿವಯ್ ನೀನೊರ್ವನೆಂಬ ಹರಿಗಮಸಾಧ್ಯಂ ।

---

1 ತಳಕರ್ಾ (ಓ.ಮ). 2 ಯುಕ್ತ (ಓ.ಮ). 3 ಳಿಂದ (ಓ.ಮ). 4 ಚಾಪಮಂ (ಓ.ಮ). 5 ನ್ಯಾಯಮು (ಓ.ಮ). 6 ಮಾಲ (ಓ.ಮ). 7 ಲುಮಿತ್ತ (ಓ.ಮ). 8 ಗಳಪರಿಮೆದೆಗೋದಿರದಿರಿ (ಅ); ಗಱಪಲಮೆಡೆಗೊಂಡಿರದಿರಿ (ಅ.ಇ). 9 ಬಿಣ್ಪಿ (ಓ.ಮ).

ಮನುಜಪ್ರಾಕಾರಾಂ[1]ಕನೊ[1]
ಳಿನಿಬರುಮೊಂದಾಗಿ ತಾಗುವಂ ಫಲ್ಗುಣನೊಳ್ ॥ ೪೦೪

ಸೂತ್ರಂ ೯೨

ತದುಪಗತಮಧ್ಯಮೈಕ
ತ್ವದೊಳಕ್ಕು ಪ್ರಾಯದಿಂದಿಕಾರಮುಕಾರಂ ।
ವಿದಿತಸ್ವರೂಪಲೋಪಮು
ಮದಂತೆ ಪೆಱವುಳಿಯೊಳಂ ಪ್ರಕೃತ್ಯಂ[2]ತದೊಳಂ[2] ॥ ೪೦೫

ಪ್ರಯೋಗಂ ॥

ಬಿಗಿ ಪುಗು ಬಿಟ್ಟು ಕೂಡು ಜಡಿ ಬಗ್ಗಿಸು ಪೊಯ್ವೆಲೆನೋಡು ಸಾಯೆ ಸಾ
ರ್ದುಗಿ ಕೊಳೆ ನೂಂಕು ಸಾರ್ಚು [3]ಕಡೆ[3]ದೋಱೊಡಸಂದಿಸು ಸಾರ್ದು
[4]ದಂಡೆ[4]ಗೊಳ್ ।
ಪುಗದೆಡಮಾಡು ಚಪ್ಪರಿಸು ರೂಪಿಡು[5]ಕೂಪಿಡು[5] [6]ಕೂರ್ಪು[6]ದೋಱು ಪಾ
ಱಿಗಿಯದೆ ಕೂರ್ಮೆಮಿಕ್ಕು [7]ತಗೆ[7] ತೊಂಗಲನಿಂಬೆನೆ ನೂಂಕು [8]ಯುದ್ಧಮಂ[8]॥

ಸೂತ್ರಂ ೯೩

ಕ್ರಿಯೆ ತಾಂ ಕ್ರಿಯಾರ್ಥಮಪ್ಪ
ಲ್ಲಿಯಲಕ್ಕುಂ ವರ್ತಮಾನಗತಿಗುತ್ತಮುತುಂ ।
ದ್ವಯಮಕ್ಕುಂ ಪೂರ್ವಭವ
ಕ್ರಿಯೆಯೊಳಿದುತ್ಪ್ರತ್ಯಯಂಗಳಕ್ಕುಂ ಪೀನಂ ॥ ೪೦೬

ಪ್ರಯೋಗಂ ॥

ತಿಂಗಳನಪ್ಪಿಕೊಳಲ್ [9]ಪಾ[9]
ವಿಂಗಂ [10]ಬೆಲೆಯಿಕ್ಕ[10]ಲಮರಗಿರಿಶಿಖರಕ್ಕಂ ।
ಲಂಗಿಸರೊಡರಿಸುವರ್ ಪ
ರ್ವಂಗಳ್ ಪತ್ತೆಂಟು ದಿವಸಮೆನೆ ಬೆಲೆವೆಣ್ಗಳ್ ॥ ೪೦೭

ಕೆದಱುತ್ತುಂ ಮಣಲಂ ತೆಮಳ್ದಿಕೊಳುತುಂ ಭೂರೇಣುವಂ ಸೂಸುತುಂ
ನದನದ್ಯಚ್ಛಜಲಂಗಳಂ ಮುಱುಯುತುಂ ಭೂಜಂಗಳಂ ನುರ್ಗುತುಂ ।

---

1 ತನೊ (ಅ). 2 ತರದೊಳ್ (ಅ). 3 ಕಡಿ (ಓ). 4 ಡಂಗೆ (ಓ).
5 ಕಾಪಿಡು (ಓ). 6 ನೋರ್ಪು (ಓ). 7 ನೆಗೆ (ಓ). 8 ಬರ್ದನಂ (ಓ).
9 ಹಾ (ಓ). 10 ಬೇವಿಕ್ಕ (ಅ).

ಪೊದಱಿಂ ಸೀಳುತುಮೆಯ್ದಿ ವಂಶವನಮಂ ಕಾಡಾನೆಯಂ ಪೋಲ್ತು ಪೊ
ಕ್ಕುದು ಬೀಡಂ ಲಯಕಾಲಕಾಲ[1] ಏಱಲ[1]ದ್ಭೀಮಾರುತಂ ಮಾರುತಂ ॥ ೪೦೯

ನಡುಗಿ ತಡ[2]ವರಿಸಿ[2] ಬೆಂಕೆಯ
ಕಡುಗಾಯ್ಪಿಂಗಗಿದು ಜೆಡೆಗಳಿಡುವಿನೊಳಹಿಗಳ್ ।
ತೊಡರ್ದು ನುಸುಳ್ದೊಡಿ ಗಂಗೆಯ
ಮಡುಗಳನಡಹಡಿಸಿ ಪುಗುವಿನಂ ಭಯವಶದಿಂ ॥ ೪೧೦

ಸೂತ್ರಂ ೪೪

ಪ್ರತಿಷೇಧದೊಳಂ ಕೆಲಬರ
ಮತದಿಂದಲ್ ವರ್ತಿಕುಂ ಪದಾಂತರದಿಂ ಸಂ ।
ಗತಿಯಾ[3]ಗಲ್ಲೋಪಂ[3] ಮೇಣ್
ಚತುರ್ಥಿ ಸಮಸಲ್ಗುಮೆಂಬರದಱೊಳ್ ಕೆಲಬರ್ ॥ ೪೧೧

ಪ್ರಯೋಗಂ ॥

ನಗೆಯೊಳಮಪ್ಪೊಡಮಿಂತೀ
ತಗಬು ದುರುಕ್ತಿಗಳನೆಮ್ಮೊಳಿಂ ನುಡಿಯಲ್ ನೀಂ ।
ಬಗೆಯೊಳ್ ಬೇಱೊಂದನಣಂ
ಬಗೆಯಲ್ ಗಡ ನಿನಗೆ ಸುಮತಿ ಬೇಱಾಂ ಬೇಱೇ ॥ ೪೧೨

ಅಪರಾರ್ಧಕ್ಕೆ ॥

ತರವೇಡ್ ಮದವಾರಣಮಂ
ಬರವೇಡ್ ಸನ್ನದ್ಧವಾಜಿನಾಥನಮಂ ಬಿ ।
[4] ತ್ತರಿಸಲ್ಕೆ[4]ವೇಡ್ ವರೂಥೋ
ತ್ಕರಮಂ ಬಲದೊಡ್ಡವೇಡ್ ಪದಾತಿಯನೀಗಳ್ ॥ ೪೧೩

ಸೂತ್ರಂ ೪೫

ಎಸೆಗುಂ ಭಾವದೊ[5]ಳಮರ್ದೀ
ಕಸಂಜ್ಞ[5]ವಚನಂ ಕ್ರಿಯಾಸಮಭಿಹಾರಂ ವ ।
ರ್ತಿಸುತಿರೆ ತಾನಕ್ಕುಂ ಸ
ರ್ವನಾಧನೀಮಧ್ಯಮೈಕವಚನಮದೆಂದುಂ ॥ ೪೧೪

---

1 ಏಲಸ (ಓ.ಮ). 2 ದಡಿಸಿ (ಓ.ಮ).. 3 ಗೆರೋಪಮಂ, ಗಲುರೋಪಂ (ಓ.ಮ). 4 ತ್ರದಸಿಬರ (ಓ). 5 ಳವಱೀಕ ಸಂಖ್ಯೆ (ಓ.ಮ).

ಪ್ರಯೋಗಂ ॥

ಭಾವಾರ್ಥಕ್ಕೆ ॥

ಸಿಡಿಲಂ ಪೊಸೆವುದು ಶೇಷನ
ಪೆಡೆಯೊಳ್ ಪಟ್ಟಿರ್ಪುದೆಂಟುಮಾನೆಯ ಕೋಡಂ ।
ಪಿಡಿದೊತ್ತಿ ಕೀಲ್ವುದೇಟುಂ
ಕಡಲೊಳಗೋಲಾಡುತಿರ್ಪುದವನ ವಿನೋದಂ ॥ ೪೧೫

ಕ್ರಿಯಾಸಮಭಿಹಾರಕ್ಕೆ ॥

ಕೊಳ್ಕೊಳ್ಳೆಂದೊಡನೊಡನೆಯೆ
ತುಳ್ಕುವ ಯುವತಿಯರ ಕರಪರಿಚ್ಯುತನಲಿಲಂ ।
ಗಳ್ಕೊಳೆ ಬಿಡೆ ಕೆದಱುವ ಕಿಂ
ಜಳ್ಕದಿನಾದುದು ಸರೋವರಂ ಕಪಿಶಜಳಂ ॥ ೪೧೬

ಸೂತ್ರಂ ೯೬

ಧಾತುಗನೇಕಾಕ್ಷರಕಾ
ಖ್ಯಾತವಿಭಕ್ತಿಗಳಮೊದಲೊಳಿಸು ತಾನಕ್ಕುಂ।
ಹೇತುಪ್ರಯೋಗದೊಳ್ ತ
ಜ್ಜಾತಿಯೆ ಕಣರ್ಾಟಧಾತುಗಳ್ಗ[1]ಮರ್ದಿಕರ್ುಂ[1] ॥ ೪೧೭

ಪ್ರಯೋಗಂ ॥

ಎಸೆಗುಂ ಋಜ್ವಾಗತಂ ಕಣ್ಗೊಳಿಸುಗುಮಳವಟ್ಟರ್ಧಋಜ್ವಾಗತಂ ಶೋ
ಭಿಸುಗುಂ ಪಾರ್ಶ್ವಾಗತಂ ನೋಟ್ಪರನೆಱಗಿಸುಗುಂ ಸಾಚಿ ತದ್ವಿದ್ಯರಂ ರಂ ।
ಜಿಸುಗುಂ[2]ದ್ವ್ಯರ್ಥಾ[ಕ್ಷಮೆಂ][2]ಬಂತೆವೊಲರೆ[3]ನೆಗಟ್ಟಿರ್ದಂ[3]ಗನಾಭಂಗಿಯಂ ಚಿ
ತ್ರಿಸಿ ಚಿತ್ರಕ್ಕಾಯುವೊಯ್ದಂ ಮದನನೆನೆ ಕರಂ ಕಾಂತೆ ಕಣ್ಗೊಪ್ಪಿ ತೋರ್ಕುಂ॥

ಇಲ್ಲಿ ಉಪಾಂತ್ಯಕ್ಕೆ ಲಘ್ವೇಕಾಕ್ಷರಕ್ಕಿದಂತ ಪ್ರಯೋಗಂ ॥

ಸುರರೊಸೆಯೆ [4]ಸಕಳ . . . ಮ[4]
ಸುರನಿಕರಮತರ್ಕ್ಯಮಪ್ಪ ವಿಕ್ರಮಗುಣಮಂ ।
ಧರಿಯಿಸಿ ನಂದಿರ್ದಂ ಧಾ
ಸುರತೇಜನುದಾತ್ತಕೀರ್ತಿನಿಳಯಂ ಕೃಷ್ಣಂ ॥ ೪೧೮

ಪ್ರಕೃತಿಗಳಂ ಧಾತ್ವರ್ಥದ
ವಿಕಲ್ಪದಿಂದಱಿದು ಸಮಱಿಕೊಳ್ವುದು ಬಹುರೂ ।

---

1 ಮವಕ್ಕುಂ (ಅ.ಮ). 2 ದೃಶ್ವಕ್ಷಮೆಂ, (ಮ), ವ್ಯರ್ಥಾಕ್ಷಮೆಂ (ಅ), ದ್ವ್ಯರ್ಥಾಕ್ಷಿಯೆಂ (ಅ.ಇ). 3 ಬರೆದಿರ್ದಂ (ಅ). 4 ಕಳಿಸಿಯೇಳು ಕಳಮು (ಅ).

ಪಕಮ[1]ನದಂ ಪೇೞಲ್ಕಾ[1]
ಸಕಳಂ ವಾಕ್ಪತಿಯುಮಾಱಿನುಬಿದವರಳವೇ ॥ ೪೨೦

ಪ್ರತಿಬುದ್ಧರಂ ಕುಱಿತ್ತೀ
ಸ್ಥಿತಿಯಿಂದಂ ಕಿಱಿದು ಮಾರ್ಗಸೂಚನೆಗೆಯ್ದಂ ।
ಮತಿವಂತರಱಿದು ಪೇೞ್ವುದು
ವಿತರ್ಕದಿಂ ಮತ್ತಮುಕ್ತಶೇಷಮನಿದಱೊಳ್ ॥ ೪೨೧

ಇದು ಶಬ್ದಸ್ಮೃತಿಯೊಳ್ ಆಖ್ಯಾತಪ್ರಕರಣಂ ಪಂಚಮಂ.

ಗೀತಿಕೆ ॥

ಇಂತಿರೆ ಶಬ್ದಂ ಸಂದೇಹ
ಧ್ವಾಂತೌಘಂ ಪಿಂಗಿರೆ ಜಲಕನಾಗೆ ಬುಧ ।
ಸಂತತಿಗಪ್ಪಂತು ಪೇೞ್ದನಿದಂ
ಶಾಂತಮನಂ ಕವಿತಾಗುಣೋದಯಂ ॥ ೪೨೨

ಅಭಿಮತಶಬ್ದಸಂಸ್ಮರಣದಿಂ ಜನಮಂ ತಿಳಿವಂತು ಮಾಡಿ ವಾ
ಗ್ವಿಭವಮದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯಂತನೆಯ್ದೆ ತ ।
ತ್ಪಥೆಗಳೊಳಗ್ರಪೂಜೆವಡೆದೊಂದು ಮಹಾಮಹಿಮಾನುಭಾವದಿಂ
ದಭಿನವಶರ್ವವರ್ಮನಿವನೆಂದಪುದುರ್ವರೆ ನಾಗವರ್ಮನಂ ॥ ೪೨೩

[2] ಇದು ಸಕಳನುಕವಿಜನಮನಸ್ಸರೋಜಿನೀರಾಜಹಂಸಾಯಮಾ
ನಾನೂನಕವಿತಾಗುಣೋದಯಂ[2] ಶ್ರೀನಾಗವರ್ಮ
ಪ್ರಣೀತಮಪ್ಪ ಕಾವ್ಯಾವಲೋಕನದೊಳ್
ಶಬ್ದಸ್ಮೃತಿ[3]ಯೆಂಬುದು
ಪ್ರಥಮಾಧಿಕರಣಂ[3]

---

1 ನವಕೆಂಬಿಸಲ್ಕಾ (ಅ). 2 ಇದು (ಓ.ಮ), ಪ್ರತಿಗಳಲ್ಲಿ ಇಲ್ಲ. 3 ಯೊಳ್ಪ್ರಥಮಾಧಿಕಾರಂ (ಓ.ಮ).

ಕಾವ್ಯಮಲವ್ಯಾವೃತ್ತ್ಯಧಿಕರಣಂ

ಪದಪದಾರ್ಥ ಸಂಧಿದೋಷವಿನಿಶ್ಚಯ ಪ್ರಕರಣಂ

ಪ್ರತಿ[1]ಭಾನಂ[1] ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇೞ್ವುಡಂತಾ ।
ಪ್ರತಿ[2]ಭಾನಂ[2] ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ ಶಾಸ್ತ್ರಾ
ನ್ವಿತನಪ್ಪಂ ವೃದ್ಧನಾಲಸ್ಯಮನುಟಿದೆನಪುದ್ಯೋಗಮಭ್ಯಾಸಕರ್ಮಂ ॥

ಶ್ರುತವಾರಿನಿಧಿಯ ಪಾರಮ
ನತಿಪ್ರಬಂ[3]ಧಾಭಿಯೋಗ[3]ರಾರೆಯ್ದಿದೊಡಂ ।
ಕೃತಪುಣ್ಯಂಗಲ್ಲದೆ ವಿ
ಶ್ರುತಕವಿತಾರತ್ನಮಲ್ಲಿ ಸಂಭವಿಸುಗುಮೇ ॥ ೪೨೫

ಮದಮಿಲ್ಲದಿಭಂ ಮಧುವಿ
ಲ್ಲದ ಕುಸುಮಂ ಚಂದ್ರ[4]ನಿಲ್ಲದಿರುಳಾಪ್ಯಿ[4] ।
ಲ್ಲದ ನೃಪತಿ ಕವಿತೆಯಿಲ್ಲದ
ವಿದಗ್ಧತಾಗುಣಮದೇಂ ಮನಂಗೊಳಿಸುಗುಮೇ ॥ ೪೨೬

[5]ಪರಮ[5]ಪ್ರೀತಿನಿಮಿತ್ತಂ
ನಿರತಿಶಯಯಶೋ[6]ನಿದಾನ[6]ಮಪ್ಪುದಱಿನಿಹಂ ।
ಪರಮೆಂಬೆರಡರ್ಕಂ ಬಂ
ಧುರ[7]ಕಾವ್ಯ[7]ನಿಬಂಧದಿಂ ಹಿತಂ ಪೆಱತುಂಟೇ ॥ ೪೨೭

ಕೃತಿಸತಿಯ ಮೆಯ್ಯೊಳೆಳ್ಳನಿ
ತು ತಾನದೊಂದಱಿಯೆ ದೋಷಮಾಗೆ ತದಾವ ।
ರ್ಜಿತಮಪ್ಪ ಕೀರ್ತಿಯುಂ ನಿಂ
ದಿತಮಕ್ಕುಂ ದರ್ಪಣಾರ್ಪಿತಚ್ಛಾಯೆಯವೊಲ್ ॥ ೪೨೮

1-2 ಭಾವಂ (ಓ.ಮ). 3 ಧಾನುರಾಗ (ಅ.ಮ). 4 ನಿಲ್ಲದೊಂದಿರುಳಾರ್ಪಿ (ಅ.ಮ). 5 ಪರಱಿ (ಮ). 6 ವಿಧಾನ (ಮ). 7 ವಾಕ್ಯ (ಅ.ಮ),

ಅದಱಿಂದುಪೇಕ್ಷೆಗೆಯ್ಯದೆ
ಸದಭಿಮತೋದಾತ್ತ ಕೀರ್ತಿಯಂ ಬಯಸುವವಂ ।
ಪದವಾಕ್ಯಾರ್ಥಂಗಳೊ[1]ಳೊಂ
ದದಂತು[1] ಪಿಂಗಿಸುಗೆ ದೋಷಮಂ [2]ಕೃತಿಯಿಂದಂ[2] ॥ ೪೨೯

[3]ಪ್ರಯೋಜನ[3]ನ್ಯಾಪನಂ

ಸೂತ್ರಂ ೯೭

ಇರೆ ಶಬ್ದಾರ್ಥಂಗಳ್ ತ
ತ್ಪರತೆಯಿನದುಕಾವ್ಯಮದಱೊಳುಚಿತೈಕಾರ್ಥಾಂ ।
ತರವಾಚಿ ಶಬ್ದ [4]ಮವ[4]ಭಾ
ಸರೂಪಮಾಹ್ಲಾದಕಾರಿಯಪ್ಪುದದರ್ಥಂ ॥ ೪೩೦

ಸೂತ್ರಂ ೯೮

ಪ್ರಕರಣದಿಂ ಶಬ್ದಾಂತರ
ದ ಕೂಟದಿಂದಭಿನಯಂಗಳಿಂದಿಷ್ಟಾರ್ಥ ।
ಪ್ರಕಟನಮಕ್ಕುಮನೇಕ
ಪ್ರಕಾರಮರ್ಥಂ ಪದಕ್ಕೆ ಸಂಭವಿಸುವೊಡಂ ॥ ೪೩೧

ಪ್ರಕರಣಕ್ಕೆ ॥

ಏನೇನುಂ ಮದನುಜರೆನ
ಗಾನತರಣಮಾಗದಿರ್ದರುಂಮದಮವರ್ಗಂ ।
ತೇನೇತಱೊಳಾಯ್ತು ದನಿನಿ
ಸಾನುಂ ಬೇಗದೊಳೆ ಕಳೆದು ತೋಱಿನೆ ರಣದೊಳ್ ॥ ೪೩೨

ಶಬ್ದಾಂತರ ಸಂಸರ್ಗಕ್ಕೆ ॥

ಹರಿ ಪೊಯ್ಯೆ ಬಿರಿದ ಮದವ
ತ್ಕರಿಕುಂಭದಿನಗದೊಳೊಕ್ಕ ರಕ್ತಾರಕ್ತ ।
ಸ್ಫುರಿತನವಮೌಕ್ತಿಕಂಗಳ
ನರೆ[5]ಗುಳಿ[5] ವನಚರಿಯರೆರದ ಪಣ್ಗೆತ್ತಾಯ್ದರ್ ॥ ೪೩೩

---

1 ಳ್ಪೊಂದದಂತು (ಮ). 2 ಕ್ರಮದಿಂದಂ (ಓ.ಮ.ಅ). 3 ಪ್ರಯೋಗ (ಅ). 4 ಮುದ (ಅ). 5 ಉಗಿ (ಮ).

ಅಭಿನಯಕ್ಕೆ ॥

ಇನಿವಿರಿಯವಪ್ಪ ಮೊಲೆಯವ
ಳಿನಿವಿರಿಯವೆನಿಪ್ಪ ಕಣ್ಗಳಾಕೆ ಮನಂಗೆ ।
ಟ್ಟಿನಿತು ದೆವಸಂಗಳಂ ತ
ನ್ನಿನಿಯನನಗಲ್ದಂ ಬಟಿಕ್ಕಮಿಂತಿಂತಾದಳ್ ॥ ೪೩೪

ಸೂತ್ರಂ ೯೯

ಅಸಮರ್ಥಮಪ್ರತೀತಂ
ವಿನಂಧಿ ವಿಪರೀತಕಲ್ಪನಂ ಕಷ್ಟಂ ನೀ ।
ರಸಮೆಂದು ದೋಷಮಿವು ಸಮ
ನಿಸುಗುಂ ಪದದೊಳ್ ಪದಾಗಮಜ್ಞರ ಮತದಿಂ ॥ ೪೩೫

ಸೂತ್ರಂ ೧೦೦

ತೆಱೆದಿರೆ ತದ್ವಾಚಕತೆಯ
ನಱುಪಲ್ ನೆಱೆಯದುದೆ ಕೃತಿಯೊಳಸಮರ್ಥಪದಂ ।
ಪೆಱತೇಂ ಪ್ರತೀತಿ ಬಗೆಗೇ
ತಱೊಳಂ ತೋಱಿದುದದಪ್ರತೀತಂ ಗೂಢಂ ॥ ೪೩೬

ಉದಾಹರಣೆ ॥

ಅಸಮರ್ಥಕ್ಕೆ ॥

ಉರ[1]ಗಾಳಿ[1] ನಂದನಾವಳಿ
ತರತರದಿಂದೆಱಗಿ ಜಳಧೃದಂತಿಕದೊಳ್ ಮಾ ।
ಣ್ಡಿರದೆ ಕುಡಿ[2]ದುಪ್ಪು[2]ನೀರಂ
ಧರೆಗಿನಿದಂ ಕಱುವುದಿಂ[3]ತಿದೇಂ[3] ವಿಸ್ಮಯವೋ ॥ ೪೩೭

ಅಪ್ರತೀತಕ್ಕೆ ॥

ಅಸಿ[4]ತರ್ಧಿ[4] ವಯಸ್ಯಾಧ್ವದೊ
ಳೆಸೆವ ನವಾಬ್ಜನ್ಮಶೋಭೆ ಪೇಚಕದೂಷ್ಯ ।
ಪ್ರಸರದ ಮೆಯ್ಯೊಳ್ [5]ಪರ್ವಿರೆ[5]
ಪನರಿಸಿದ ಗುಣಂಗ[6]ಳವನನೇ[6]ನಟಿಸಿದು[7]ಪೋ ॥ ೪೩೮

---

1 ಗಾದಿ (ಅ.ಮು), ಗಾದಿ (ಆ). 2 ದಿರ್ಪ (ಮು). 3 ತದೇಂ (ಮು).
4 ತರ್ತ್ರಿ (ಅ). 5 ಪರ್ಚಂ (ಅ). 6 ಳವನನೇ. 7 ದೋ (ಓ.ಮು).

ಸೂತ್ರಂ ೧೦೧

[1]ಅವಿಹಿತ[1]ಸಂಹಿತೆ ಮೇಣ್ ಸಂ
ಧಿವಿರೂಪಂ ಬಗೆಯೆ ತಾಂ ವಿಸಂಧಿಯೆನಿಕ್ಕುಂ ।
ಸ್ವವಿ[2]ಕಲ್ಪಿತ[2]ದೊಳನಿಷ್ಟಾ
ರ್ಥವಾಗೆ ವಿಪರೀತಕಲ್ಪನಂ ತಾನಕ್ಕುಂ ॥ ೪೯

ಉದಾಹರಣೆ ॥

ವಿಸಂಧಿಗೆ ॥

ಅಸಿಯ ಒಱೆ ಬೆಸದ [3]ಪಟ್ಟಿಗೆ[3]
ಮಿಸುಗುವ ಆರಂ ತೊಳಪ್ಪ ಕನ್ನಪುರಂ ಜೆ ।
ಲ್ಪೆಸೆದಿರೆ ಬಲವರ್ಪ ವಿಟರ್
ಕುಸುಮೇಷುವ ಮೇಳದವರ್ಗಳಿನಿಸಿದ[4]ರದಱೊಳ್[4] ॥ ೪೯೦

ವಿರೂಪಸಂಧಿಗೆ ॥

[5]ಪಸರಂಗುಡದೆಸಪ ಮಳೀ
ಮಸಗರ್ಗೆಂ[5]ದುದಿತೋಡುರಾಜನಂ ನಯದಿಂ ಕ ।
ಲ್ಪಿಸಿ ಜಲಧಿ ನುಡಿವ ಮಾಡ್ಕೆಯಿ
ನೆಸೆದತ್ತು ರ್ಲೋಲಬಹಲಕಲ್ಲೋಲರವಂ ॥ ೪೯೧

ವಿಪರೀತಕಲ್ಪನಕ್ಕೆ ॥

ಬಳವದರಿಭೂಪದಾವಾ
ನಳಂ ಕಳಿಂಗಾಧಿರಾಜ ನಿನ್ನುಗ್ರಶರಾ ।
ವಳಿವಿಳಸಿತೋರುಧಾರಾ
ಜಳ[6]ಸಿತಕರನಿಂ[6]ದಮೆಯ್ದಿ ಮಬ್ಬುಗೆ [7]ಧುರ[7]ದೊಳ್ ॥ ೪೯೨

ಸೂತ್ರಂ ೧೦೨

ಶ್ರುತಿವಿರಸಪದಕ್ಷೇಪ
ಸ್ಥಿತಿ ಕಷ್ಟಂ ಗ್ರಾಮ್ಯಶಬ್ದ ಸಂದರ್ಭಸಮ ।
ನ್ವಿತಮುಮನರ್ಥ್ಯಾರ್ಥಕೃತಿ
ಸ್ಮೃತಿಯುಂ ನೀರಸಮೆನಿಪ್ಪುದಕ್ಕುಂ ದೋಷಂ ॥ ೪೯೩

---

1 ಅವಿದಿತ (ಅ). 2 ಕಲ್ಪನ (ಅ). 3 ಪೆಟ್ಟಿಗೆ, ಕಟ್ಟಿಗೆ (ಅ). 4 ರವ ರೊಳ್ (ಅ). 5 ಪಸುರಂಬಿಡದೆಸಪಮಳೀಮಸರ್ಗೆಂ (ಅ.ಇ). 6 ಸೀಕರದಿಂ (ಓ.ಮ). 7 ಧರೆ (ಓ.ಮ).

ಉದಾಹರಣ ॥

ಕಪ್ಪಕ್ಕೆ ॥

ಇದಿರ್ವರ್ಪವೊಲಾಯ್ತು ಪವನ
[1]ವಿದಳತ್ತರ್ವಾದ್ವಿಪೋಢ[1]ಪುಷ್ಪರಜಸ್ಸ ।
ಕ್ತದಿನೊದವಿ ಮಾರುತಂ ಭ್ರಾ
ಮ್ಯದತ್ಯುದಗ್ರಾಳಿಝಂಕೃತೋಚ್ಚೈರ್ಧ್ವಾನಂ ॥ ೪೪೪

ನೀರಸಕ್ಕೆ ॥

ಅಂಗನೆಯೊಳ್ ಕಳ್ದಿರ್ಪುದ
ನಂಗಾಕಿಯನಱಿದು [2]ಪೇೞ್ದು ಪೊಡೆಯಂ ಕಡುಪಿ[2] ।
ನ್ನಂಗಂ ದೊರೆಕೊಂಡಿರೆ ಕೊಂ
ಡಂ ಗಡಮೆಲೆ [3]ತ್ಯೆಗ ಹುಯಿಲ[3]ದೇಂ ಚೋಜಿಗಮೋ ॥ ೪೪೫

ತಲೆಮಟ್ಟು [4]ಪಾಯ್ದು [4] [5]ವೀರ್ಯಾ
ವ[5]ಲೇಪದಿಂದಿಱಿದು ಬಿಟ್ಟು ಮೆಟ್ಟುಂ ಮತ್ತಂ ।
ಚಲ[6]ಚಲದಿಂ[6]ದೊಡನಿಕ್ಕಿದ
ನೊಲೆದಿದಿರೊಳೆ ಮಣಿಯದಾಂತ ಪರವಾಹಿನಿಯಂ ॥ ೪೪೬

ಸೂತ್ರಂ ೧೦೩

ಮಱಿಸುಂದು ನೂಱಿಸುಂದೆನೆ
[7]ಪಿಱಿತಿನಿಯೆನೆ ಪೂಱಿಯೆನೆ[7] ಪದಾಂತರದಿಂದಂ ॥
ನೆಱೆದು ನಿಲೆ ದುಷ್ಪ್ರತೀತಿಯ
ನಱಿಪುವ ಪೆಱಿಪೆಱಿವುಮಿನ್ನವೇ ಗ್ರಾಮ್ಯಂಗಳ್ ॥ ೪೪೭

ಅದಂತೆನೆ ॥

ನೆಱೆಗೊಂಡು ತೊನೆವ ಸರಲಿಂ
ನೆಱಿಲ್ದು ರಥದೊಳಗೆ ಬಿಟ್ಟು ಚಕ್ರಧರಂ ಮೆ ॥
ಯ್ಮಱೆದು ಗುಹಾಂತರದೊಳ್ ಮಿಗೆ
ಮಱಿಸುಂದಿದ ಪುಲಿಯನಾಗಳಿನಿಸಂ ಪ್ರೋಲ್ತಂ ॥ ೪೪೮

ಮಚ್ಚರದ ನೂಱ[8]ಸುಂದಿನ[8]
ಪೊಚ್ಚಱಿ[9]ನಾಂತಿರ್ದು[9] ಬಿರುದಿನೆಸಕದ ಪೆಱಿವುಂ ।

---

1 ವಿದಳತ್ತರ್ವಾದ್ವಿಪೋದ (ಅ), ದೆಳದತ್ತದ್ವಾದ್ವಿರ್ಪೋದ (ಮಾ). 2 ಪೊರ್ದು ಪೊಡೆಯುಂಕುಱುಪಿ (ಅ). 3 ತ್ಯೆಗುಹುಃಯದೇಂ (ಅ), ತ್ಯೆಗಹುಲಲದೇಂ (ಅ.ಇ). 4 ಪೊಯ್ದು (ಅ). 5 ನಿರ್ಯಾಸರೆಪ್ಪದಿಂ (ಓ.ಮ). 6 ಚಲನಿಂ (ಅ). 7 ಪೆಱಿತಿನಿ ನಿಂಪಿಱಿಯದೆನೆ (ಓ.ಮ). 8 ನುಂದಿದ (ಅ). 9 ನಾಂತಿರ್ದ (ಓ), ಕಾಂತಿರ್ದ (ಅ.ಮ).

[1]ಕಚ್ಚ[1]ಕಳಿಗಳ ತೊಡರ್ಪಿನ
ಮೆಚ್ಚವಣಿಗೆಯಂಕಮಂ ಮಹೀಶಂ ನೋಲ್ಕುಂ ॥ ೪೪

ಕೊಱಿವರ್ [2]ಬತ್ತಿದ[2] ಕಾಲ್ [3]ಪಿಂ
ಬಱು[3] ಗೇಸಂ ನೆಕ್ಕ ಕದಪು ಪೊಕ್ಕಿರ್ದ ಬಸಿಱಿ[4] ॥
ತೆಱೆದ ಮುಖಕುಹರ[4]ವರ್ಬಿನ[4]
ಪಿಱುತಿನಿಗಳ ಬಳಗವೆಯ್ದೆ [5]ತಂದುದು[5] ಮುನಿಯಂ ॥ ೪೫

[6]ಮತ್ತ[6]ರು ಡಂಗೆಗೊಂಡು ಬಡಿಯಲ್ ಚಲದಿಂದೆನಸುಂ ದುರಾಗ್ರಹಂ
ಚಿತ್ತದೊಳಾಗೆ ನಿನ್ನ ಬಟಿಯಂ ಬರಲೀ ಮುಳಿ[7]ಸೇಂ ಟ[7]ಮಾಳದಿಂ ।
ಸುತ್ತುವರ್ಗಲ್ಲದೊಲ್ಲೆ ಬಿಡು ನೀನೆನಗಿಲ್ಲಳ ಪೂಱು [8]ತೋಱು[8] ಪೇ
ಱುತ್ತಿರರಾಸೆಯಂ ಬಿಸುಟು ನೀಂ [6]ಕಳೆ[9] ಪಾಂಟಿ ಮತಕ್ಕೆ ಸ್ಯೆರಿಸೆಂ॥ ೪೬

ಇಂತೀ ಪೇಱ್ದುವುಮನಱಿದು ಪೆಱಪೆಱವುಮನಱಿದುಕೊಳ್ವುದು ॥

ಅನುಕರಣ[10]ದೊಳೊಂ[10]ದಿದ ಮಾ
ತಿನಲ್ಲಿ ನಿರ್ದೋಷಮಾಗೆ ಸಲ್ಗುಂ ಪೇೞ್ದಿಂ ।
ತಿನಿತುಂ ಸ್ವರೂಪಕಥನದೊ
ಳನುವಾದಂ ಭಿನ್ನಶಬ್ದಮಪ್ಪುದಱಿಂದಂ ॥ ೪೭

ಇದು ಕಾವ್ಯಮಲವ್ಯಾವೃತ್ತಿಯೊಳ್ ಪದಪದಾರ್ಥ ಸಂಧಿದೋಷ
ವಿನಿಶ್ಚಯ ಪ್ರಕರಣಂ ಪ್ರಥಮಂ.

ವಾಕ್ಯವಾಕ್ಯಾರ್ಥ ದೋಷಾನುಕೀರ್ತನ ಪ್ರಕರಣಂ

ಸೂತ್ರಂ ೧೦೪

ವಿದಿತಾರ್ಥಂ ಕ್ಷೋದಕ್ಷಮ
ಮುದಾತ್ತಶಬ್ದಂ ಪರಸ್ಪರಂ ಸಾಪೇಕ್ಷಂ ।
ಪದಸಮುದಾಯಂ ವಾಕ್ಯಂ
ವ್ಯೆದನ್ತಕಾಂಕ್ಷಂ ತದೇಕವಸ್ತುನಿಬದ್ಧಂ ॥ ೪೮

---

1 ನರ್ಚಿ (ಓ). 2 ಪತ್ತಿದ (ಅ). 0 ಸಿಂಪಿಱಿ (ಅ.ಮು). 4 ಮುರ್ಬಿಸೆ (ಅ). 5 ಬಂದವು (ಅ.ಮು). 6 ಪೆತ್ತ (ಅ.ಮು). 7 ಸಿಂತ (ಅ). 8 ತೋಱು (ಓ.ಮು) 9 ಕಟಿ (ಅ.ಮು). 10 ದಿನೊಂ (ಅ.ಮು).

ಲಕ್ಷ್ಯಂ ॥

ಅನವನದಿಂ ಪಟುಗೆಯ್ಯಂ
ಕನಮಂ ನೋದಿನದೆ ಬಿತ್ತಿದೊಕ್ಕಲಿಗನವೋಲ್ ।
ನಸಿಯಂ ನೋಡಿ ತಳೋದರಿ
ಬಿಸುಸುಯ್ಗುಂ ಬಯ್ಗು[1] ಮಂತೆ[1] ಮಾಡಿದ ಬದಿಯಂ ॥ ೪೫೪

ಸೂತ್ರಂ ೧೦೫

ವ್ಯವಹಿತಮೇಕಾರ್ಥಂ ವ್ಯ
ರ್ಥವಪಕ್ರಮಮಖಿಳಲೋಕಶಾಸ್ತ್ರವಿರುದ್ಧಂ ।
ಸುವಿದಿತಯತಿಭಂಗಂ ಭಿ
ನ್ನವೃತ್ತಮೆಂದಿಂತು ವಾಕ್ಯದೋಷಮಿವಕ್ಕುಂ ॥ ೪೫೫

ಸೂತ್ರಂ ೧೦೬

ವ್ಯತಿಕೀರ್ಣಪದಕ್ರಮಮನು
ಚಿತಾನ್ವಯಂ ವ್ಯವಹಿತಾನ್ವಯಂ ತಾನದು ದಲ್ ।
ಮತಿಸಮ್ಮೋಹಮನಿದಿರವ
ರ್ಗೆ ತೊಡರ್ಚಲ್ವೇಡ್ವೊಡಲ್ಲಿ[2]ಗಲ್ಲದು[2] ದೋಷಂ ॥ ೪೫೬

ಅಪಕರ್ಷ ಲಕ್ಷ್ಯಂ ॥

ಒಳಕೊಳ್ ಮುಂ ನಿನಗಿಲ್ಲದ
ಮುಳಿಸಂ ಕಾಲ್ಗೆಱಗಿದೋಪನಂ ತೊಱೆ ದಯೆಯಿಂ ।
ತಳ[3]ಮಳಗು[3]ತ್ತನುನಯದಿಂ
ತಿಳಿಪಲ್ಕೆಂದೆಱಗದನ್ನಮೆನ್ನರುಮುಟಿಗುಂ ॥ ೪೫೭

ಪತ್ರಂ ಧುಜಂಗಸಮಿತಿ ಕ
ಳತ್ರಂ ದಕ್ಷಾರಿ ವಿಧೂಷಣಾವಳಿ ಧೂಧ್ರ ।
ತ್ಪುತ್ರಿ ಗವಾಧಿಪನಜಿನಂ
ನೇತ್ರಂ ನಿವನನಮೆನಿಪ್ಪನೊಸೆಗೆಮಗಭವಂ ॥ ೪೫೮

---

1 ಮಿಂತು (ಓ.ಮ.ಅ). 2 ಗೆಲ್ಲಂ (ಅ). 3 ಮಳುಕು (ಅ).

ಸೂತ್ರಂ ೧೦೭

ಅವಧಾರಿಸದುಕ್ತಾರ್ಥಮ

ನವಿಶೇಷದೆ ಮಗುಟ್ಟು [1]ನುಡಿದೊಡೇ[1]ಕಾರ್ಥಂ ಕ್ರೋ ।
ಧವಿಷಾದಖೇದಭಯಹ
ರ್ಷವಿಸ್ಮಯಾದಿಗಳೊಳಿನ್ನವಿಪ್ಪಮದುಪ್ಪಂ ॥ ೪೫೯

ಪ್ರಯೋಗಂ ॥

ಪೂರ್ವಾರ್ಧಕ್ಕೆ ॥

ಉನ್ಮನಮೆ ಮಾಟ್ಟುಮುತ್ಕೆಯ
ನುನ್ಮದಬರ್ಹಿಣಶಿಖಂಡಿಕೇಕಾವಿರುತಂ ।
ತನ್ಮಧುರಧ್ವನಿಯುಂ ಜಳ
ಧ್ವನ್ಮೇಘನಿನಾದವೊದವೆ [2]ದೆಸೆದೆಸೆ[2]ಗೆಸಗುಂ ॥ ೪೬೦

ಅಪರಾರ್ಧಕ್ಕೆ ॥

ಗಗನಾಧ್ವರ್ ಶರಣಾಗಿಮಾಗಿಮಮರರ್ ನಿಂದಾನಿಮಾನಿಂ ದಿಶಾ
ಳಿಗಧೀಶರ್ ನೆರೆದೊಡ್ಡಿ ಪೊಡ್ಡಿ ಮುರಗರ್ ಬಂದೆಯ್ದು ಮೆಯ್ದುಂ ಮನ ।
ಸ್ವಿಗಳೀ ದೈತ್ಯನನಿಕ್ಕಿವಿಕ್ಕಿಮದಟುರ್ ಪೂರ್ಣಣ್ಮಿಮಣ್ಮಿಂ ಯಶೋ
ರ್ಥಿಗಳೆನ್ನಂ ನೆಲೆ[3]ಗುಯ್ಯಮುಯ್ಯ[3]ಮೆನುತುಂ ತನ್ವಂಗಿ ಪುಯ್ಯಲ್ಚಿದಳ್ ॥ ೪೬೧

[4]ಸೂತ್ರಂ[4] ೧೦೮

ಕರಿಕಳಭಮೆನೆ ಶರಶ್ಯೀ
ಖರಮೆನೆ ನವಪುಷ್ಪಮಾಲೆಯೆನೆ ಮೌಕ್ತಿಕಭಾ ।
ಸುರಹಾರಯಷ್ಟಿಯೆನೆ ಪೌ
ನರುಕ್ತ್ಯಮಾಗದು ವಿಶೇಷಸಂಭಾವನೆಯೊಳ್ ॥ ೪೬೨

ಪ್ರಯೋಗಂ ॥

ಆ ರಾಜಶರಶ್ರೀಖರ
ನಾರಿಂದಂ ಪಿರಿಯನಳವಿಯೊಳ್ ಬಳವದಹಂ ।
ಕಾರದೆ ಬರೆ [5]ತಗೆವಂ[5] ಸ್ತ್ರಂ
ದೀರಮಕಳಭಮ[6]ನುಪಾತ್ತವಾಲಧಿ[6]ಮೂಲಂ ॥ ೪೬೩

---

1 ಪಿಡುವುದೇ, ಬಿಡುವುದೇ (ಓ.ಮ). 2 ದಶದಿಶೆ (ಓ.ಮ). 3 ಗೊಯ್ಯು ಮೊಯ್ಯು (ಓ). 4 "ಇಲ್ಲ ವಿಶೇಷಗ್ರಹಣಕ್ಕೆ" ಎಂದು ಕೆಲವು ಮಾತೃಕೆಗಳಲ್ಲಿದೆ. 5 ತಗೆದಂ(ಓ). 6 ಉದಾತ್ತವಾರಿಧಿ (ಮ).

ನವಕುನುಮಮೂಲೆ ಮೌಕ್ತಿಕ
ವಿವಿಕ್ತಹಾರಾನುಕಾರಿ [1]ಕರ[1]ಮೊಪ್ಪಿರ್ಕುಂ ।
ನವಿರಾಸದನ್ಯುವನಿತಾ
ನಿವಹಘನನ್ತನತಟಾಂತರವ್ಯಾಲಗ್ನಂ ॥ ೪೬೪

ಸೂತ್ರಂ ೧೦೯

ವ್ಯರ್ಥಂ ಪೂರ್ವಾಪರವಿಹಿ
ತಾರ್ಥವ್ಯಾಘಾತದಿಂ ವಿರುದ್ಧಾರ್ಥಪದಂ ।
ನಾರ್ಥಕಮಕ್ಕುಮನರ್ಥಕ
ದರ್ಥಿತಜನದುಕ್ತಿವಿಷಯದೊಳ್ ಮತ್ತದುವುಂ ॥ ೪೬೫

ಆಯೆರಡರ್ಕಂ ಲಕ್ಷ್ಯಂ ॥

ಎಱಗಿಸು ಭುಜವಿಜಯದಿನಣ
ಮುಱದೆ ಬಿಗುರ್ತಿರ್ಪರಾತಿನೃಪರಂ ಧರ್ಮ ।
ಕ್ಕೆಱವೆಟ್ಟಾಗಿರ್ದಯ್ [2]ನೀಂ[2]
ಪೆಱರಾರುಂ ನಿನಗೆ ಪಗೆವರೆಂಬರುಮೊಳರೇ ॥ ೪೬೬

ಪರದಾರಗಮನಮಾರ್ಯಾ
ಚರಿತಂ[3]ಗೆನಗೆಂತು[3] ಯುಕ್ತಮಕ್ಕುಂ ತತ್ಸಂ ।
ದರರುಚಿರಮಧುರ[4]ವನಿತಾ[4]
ಧರಪಾನಂ ತಾನದೆಂತು ಪೇೞ್ [5]ಕೂ[5]ಡುಗುಮೋ ೪೬೭

ಸೂತ್ರಂ ೧೧೦

ಮೊದಲೊಳ್ ಮುಂ ಪೇೞ್ದುದ್ದೀ
ಶದಂದಮನುದೇಶಮಾಗದಂದಕ್ರಮಮಿ ।
ನ್ನದುವುಂ ಸಂಬಂಧಕ್ಕಾ
ವುದಾನು[6]ಮವ[6]ಬೋಧಹೇತುವಾ[7]ದೊಡ[7]ದೋಷಂ॥ ೪೬೮

ಉದಾಹರಣೆ ॥

ಸತ್ಪರಜನ್ತಮೋಗುಣವಿಭಾಗದಿನೀ ತ್ರಿಜಗಕ್ಕೆ ತಾನೆ ಕ
ರ್ತೃತ್ವದೊಳೊಂದಿಯುಂ [8]ನೆಱೆಯೆ[8] ಸಂಹರಿಸಲ್ [9]ನೆಱೆದುಂ[9] ಸಮಂತು ನಿ ।

---

1 ಕಳ (ಓ). 2 ನಿನಗೆಂತು (ಅ). 3 ವ್ಯತ್ತಾ (ಅ). 4 ಮೂ (ಅ).
5 ಮನು (ಅ.ಇ). 6 ದೊಡ (ಓ). 7 ಬೆಱೆಯೆ (ಅ). 8 ಮೆಱೆದುಂ (ಅ).

ತ್ಯತ್ವಮನಾಂತುವಿಶನಜನಚ್ಯುತನೆಂಬಿನೆಗಂ ವಿಭಿನ್ನಮೂ
ರ್ತಿತ್ವಮನಪ್ಪುಕೆಯ್ದು ಪರಮೇಶ್ವರನೀಗೆವುಗಾಪ್ತತತ್ವಮಂ ॥ ೪೬೯

ವಾತಂ ಪಿತ್ತಂ ಕಫಮೆಂ
ಬೀ ತೆಱದಿಂ ಮೂಱು ದೋಷಮಾದ್ಯಂತನಮಾ ।
ಖ್ಯಾತಂಗಳಪುಷ್ಣದಿನತಿ
ಶೀತದಿನುಪಶಮಿಕುಮಲ್ಲಿ ಮಧ್ಯಮದೊಂದುಂ ॥ ೪೭೦

ಸೂತ್ರಂ ೧೧೧

ಕಾಳಸ್ವಭಾವದೇಶನ
ಮಾಳಕ್ಷಿತವಸ್ತು ರೂಪವಿಪರೀತಮ[1]ದಂ ।
ತಾ[1]ಳೋಕ[2]ವಿರುದ್ಧಂ ಗುಣ
ದೋಳಿಗೆ ವಂದಿರ್ಕುಮರಮೆ[2] ಕವಿಕೌಶಲದಿಂ ॥ ೪೭೧

ಅನಿತರ್ಕಂ ಲಕ್ಷ್ಯಂ ॥

ವಿಕಚಾಂಭೋರುಹಷಂಡಮುನ್ಮದಮರಾಳಾನೀಕಮುತ್ಫುಲ್ಲ ಚಂ
ಪಕಮಾಕಂದಮಹೀಜಮುಜ್ಜ್ವಳವಿಯದ್ರಂಗಂ ಸ್ಫುಟತ್ಕೋಕಿಲ ।
ಪ್ರಕಟಾರಾವಪರಂಪರಾಪರಿಗತಾಶಾಕುಂಜಮಕ್ಷೀಬ ಕೇ
ಕಿಕದಂಬಂ ಜಗತೀಜನಕ್ಕೆ ಪಡೆದತ್ತಧ್ಯಾಗಮಂ ರಾಗಮಂ ॥ ೪೭೨
ಇದು ಕಾಲವಿರುದ್ಧಂ ॥

ಕೋಡುಳ್ಳ ತುರಂಗಂ ಖಂ
[3]ಡಾಡುವ[3] ನವಕರ್ಣಿಕಾರಮತಿಮಧುರತೆಯೊಳ್ ।
ಕೂಡಿದ ನಿಂಬಾರಾಮಂ
ನಾಡೊಳಗೊಳವೆಂದೊಡಿನ್ನದೇವರ್ಣಿಪುದೋ ॥ ೪೭೩
ಇದು ಸ್ವಭಾವವಿರುದ್ಧಂ ॥

ಕರ್ಪೂರಧೂರುಹಾರಾಮೋ
ತ್ಸರ್ಪದ್ಧೂಳೀ [ವಿ]ಧೂಸರಂ ।
ತೋರ್ಪುದಾತಿಥ್ಯಮಂ[4]ಮಾಡಲ್
ಬರ್ಪಂತೀ ಮಲಯಾನಿಲಂ[4] ॥ ೪೭೪
ಇದು ದೇಶವಿರುದ್ಧಂ ॥

---

1 ದಿನಾ (ಅ). 2 ವಿರುದ್ಧಗುಣಂಲಾಲಸದೊಳ್ಕೆಗೆ ಮಧುರ (ಓ), ವಿರುದ್ಧಂ ಗುಣಲಾಲಸದೊಳಿಸುಗೆ (ಮ). 3 ಡೋಡಿದ (ಅ.ಮ). 4 ಮೆನೆಮಾಡಲಾರ್ಪಂ ಬರ್ಪಂತಿರೆ ಬಂದುದಂದುಮಲಯಾನಿಲನಿಂ (ಓ.ಮ).

ದೇಱುಂದದ್ಯುತರಸಮಂ
ಬೀಱುತ್ತುಮನೇಕವಿವಿಧಫಲಪರಿಣತಿಯಿಂ ।
ದಾಱುಂ ಋತುಗಳುಮೊಡನೆಯೆ
ತೋಱುದುವು ತಪಃಪ್ರಭಾವದಿಂ [1]ಮುನಿಪತಿಯಾ[1] ೪೭೫

ಇದು ಕವಿಕೌಶಲಂ

ಸೂತ್ರಂ ೧೧೨

ನ್ಯಾಯಾಗಮನ್ಯಪವಿದ್ಯಾ
ಮ್ನಾಯಕಲಾಕಾಮತಂತ್ರವಿಷಯವಿರೋಧ ।
ಪ್ರಾಯಂ ಶಾಸ್ತ್ರವಿರುದ್ಧಂ
ಶ್ರೇಯಮದಂತೆಲ್ಲಯಾನುಮುಕ್ತಿಕ್ರಮದಿಂ ॥ ೪೭೬

ಉದಾಹರಣ ॥

ಅವಿನಶ್ವರಗತಿ[2]ಸಂನ್ಯಾ[2]
ರವೆಂಬ [3]ನುಗತೋಕ್ತಿ[3] ಸತ್ಯಮಂತಲ್ಲದೊಡಾ ।
ನವನೀಲನೀರಜಾಕ್ಷಿಯ
ನವಿರಾನಾರೋಕಮಿನ್ನುಮಿರ್ಕುಮೆ ಮನದೊಳ್ ॥ ೪೭೭

ಉಪನಯನಂಗೆಯ್ಯದೆಯುಂ
ಸ್ವಪೂರ್ವವಾಸನೆಯ ಬಲದಿನಿಂತೀತಂ ವೇ ।
ದಪುರಾಣವೇದಿಯಾದಂ
ವ್ಯಪೇಕ್ಷೆಗೆಯ್ಗುಮೆ ವಿಶುದ್ಧಮಣ್ [[4]ಸಂಸ್ಕೃತಿ[4]]ಯಂ ॥ ೪೭೮

ಉಟಿದುವರ್ಕುಮಾ ತೆಱದಿ[5]ನಱುದುಕೊಳ್ವುದು[5]

ಸೂತ್ರಂ ೧೧೩

ನಿಯತಸ್ಥಾನಂ ಪದವಿನ್ಯ
ತಿಯೊಳಾದ ವಿರಾಮಮಱುಗೆ ಯತಿಯಕ್ಕುಮದ ।
[6]ರ್ಕಯಥಾಗತಿ[6] ಯತಿಭಂಗಂ
ಪ್ರಯುಕ್ತಸಮಭರವಿಭಾಗದೊಳ್ [7]ನಿರ್ದೋಷಂ[7]॥ ೪೭೯

---

1 ತನ್ಮುನಿಯಾ (ಅ). 2 ಸಂನಾ (ಅ). 3 ಸಂಗೋಕ್ತಿ (ಅ.ಮ). 4 ಸಂನ್ಯತಿ (ಅ.ಇ). 5 ನಱುಪುದು (ಓ.ಮ). 6 ರ್ಕಯಥಾರ್ಥಗತಿ (ಅ). 7 ನಿರ್ದುಷ್ಟಂ (ಅ).

ಪ್ರಯೋಗಂ ॥

ಅತಿಮೃದುವನಿಟಿಸುಗುಂ ಮ
ತ್ತತಿತೀವ್ರನನಣಮೆ ಜನಮದೆಳನದದೆಂತುಂ ।
ಮತಿವಂ[1] ತನಂತಱಿಂದೀ[1]
ಕ್ಷಿತಿಯಂ [2]ಬನದಾಗಿ[2] ಮಾಡ್ಕೆ ಮಧ್ಯಮಗತಿಯಿಂ ॥ ೪೮

ಇಂತೀ ಪೇೞ್ದಾನ್ಮಪಗುಣವಿಭೇದಂಗಳಂ ತಾಳ್ದಿ ನಿಂದಾ
ತಂ[3] ತನ್ನೊಳ್[3] ತಾಳ್ದುಗುಮಖಿಳಲೋಕೈಕಸಾಮ್ರಾಜ್ಯಮಂ ವಿ ।
ಭ್ರಾಂತೇಂ ಭೂಮ್ಯಂತರರಿಪುಗಳಂ ಗೆಲ್ದು ವಿಕ್ರಾಂತದಿಂ ಕ
ರ್ಪಾಂತಸ್ಥಾಯಿಪ್ರಕಟವಿಹಟತ್ಕೀರ್ತಿಗಂ ಕಾಂತನಕ್ಕುಂ ॥ ೪೯

ಸೂತ್ರಂ ೧೧೪

ಗುರುಲಘುರಚನೆಗೆ ನಿರ್ದಿ
ಷ್ಟರೂಪಹೀನಾಧಿಕಾಕ್ಷರಂ ಛಂದದೊಳೊಂ ।
ದಿರೆ ಭಿನ್ನವೃತ್ತಮೆಂಬು[4]ದು[4]
ದುರುಕ್ತಮತ್ಯಂತದೋಷಮಕ್ಕುಂ ಕೃತಿಯೊಳ್ ॥ ೪೯

ಲಕ್ಷ್ಯಂ ॥

ಜೀಮೂತಕೇತುಗಣ್ಣಂ
ಗೆ ಮೇಘವಾಹನನದೆಂತು ಮುಂ ಬೆಸಕೆಯ್ದುಂ ।
ನಿಮ್ಮಣ್ಣಂಗೆ ಮತಂಗಂ
ಗಾ ಮಾಡ್ಕೆಯೆ ವಿನಯದಿಂದೆ ನೀಂ ಬೆಸಕೆಯ್ಯಿಂ ॥ ೪೯

ಪಣಮು[5]ನೀಯನಂ[5] ಪ್ರಿಯಂ ನುಡಿದೆಂತುಂ
ಮಾಣೆ ಮತ್ತವನ ಪಂಬಲನೆಂತುಂ ।
ಕೇಣಕಾಱನನದೇ[6]ಕೆಗ ಕಾವ್ಯೆ[6]
ನಾಣಪುತ್ತ ನಗೆಯಂ ನೀಂ ಬಗೆಯ್ಯೆ ॥ ೪೯

ಸೂತ್ರಂ ೧೧೫

ಮಿಗೆ ದಲ್ ವಲಂ ವೆಱಿಂ ಮ
ತ್ತೆ ಗಡಂ ಗಳ ಕೆನ್ನಮೆಂಬನರ್ಥಕಪದಮಂ ।

---

1 ತರದಱಿವುದಿಂತೀ (ಓ), ತರದಱಿನಿಂತೀ (ಅ), ತರಱಿವರಿಂತೀ (ಮು). 2 ವಶ ಮಾಗಿ (ಅ). 3 ತಮ್ಮೊಳ್ (ಅ.ಓ). 4 ದಾ (ಓ). 5 ನೀಯಿನೆಂ (ಓ.ಮು). 6 ಗಣ್ ಕೆವ್ಯೆ (ಓ).

ಸೊಗಯಿಸೆ [1]ವಾಕ್ಯಾ[1]ಲಂಕೃತಿ
ನೆಗಪ್ಪೆಡೆಯೊಳ್ ಪೇೞ್ದ ಪೇೞದಿರ್ಪುಟಿದೆಡೆಯೊಳ್ ॥ ೪೮೫

ವಿರಹಿ ಮೃಗಂ ದಲಂ[2]ಜಿನುವವಂ ಮಧು ದರ್[2] ಬಲೆಗಳ್ ಲತಾಳಿ ದರ್
ಕರಿಕು ಕನಲ್ದು ಕಾಯ್ದು ವಿರಹಾಗ್ನಿ ದಲೊಪ್ಪುವ ಕೆಯ್ಯೊಳಂ ದಲಾ ।
ಗುರಿ ಪವನಂ ದಲೆಂಬಿನಮನಂಗನ ಬೇಂಟೆಯು [3]ಬಿಂದದಂತೆ ಬಂ
ದಿರೆ[3] ಪೊಸಸುಗ್ಗಿ ಕೆಯ್ಗಟಿಯೆ ಕಣ್ಗೆಸೆದಿರ್ದುವು ನಂದನಾಳಿಗಳ್ ॥ ೪೮೬

ಮಾವಿನ ಕೊನೆ ಮಾವಿನ ನನೆ
ಮಾವಿನ ಪೂ ಮಾವಿನೆಳೆಯ ಮಿಡಿ ಮಾವಿನ ಕಾಯ್[4] ।
ಮಾವಿನ ಪಣ್ಣಿಂದು ಜನಂ
ಭಾವಿಸೆ ಸರ್ವಾಂಗಸುಂದರಂ ಮಾವೆ ವಲಂ ॥ ೪೮೭

ವಿಕ್ರಮವಹ್ನಿ ಮುನ್ನಳುರ್ದುಕೊಂಡುದು ತನ್ಮಿನಿಯಂ ಗಡಶ್ವಮೇ
ಧಕ್ರತು ಧೂಮವಾದುದು ಗಡಂ ಬಟಿಯಂ ಶಿಖಿ ಧೂಮಯೋನಿಯೆಂ ।
ಬೀ ಕ್ರಮಮೆಂತು ಪೇೞಮೆನೆ ವಿಕ್ರಮಯಜ್ಞವಿಧಾನಮಂ ಧರಾ
ಚಕ್ರಮೆ ಮೆಚ್ಚಿ ಬಣ್ಣಿಸೆ ಜಸಂಬಡೆದಂ ಪ್ರೌಲಕೇಶವಲ್ಲಭಂ ॥ ೪೮೮

ತೊಳಗೆ ಪೊನ್ನರಥಂ ರಥವಾಜಿ[4]ಗಳ್[4]
ಕಿಳಿಱು ವೀರರಸಂ ಕರೆಗಣ್ಮೆ ಕಂ ।
ಟಳಿಸೆ ಮೆಯ್ಯವಿರಗ್ಗಳವೊಪ್ಪಿದಂ
ಗಳ ನರಿತ್ಸುತನಾಹವಲಂಪಟಂ ॥ ೪೮೯

ಅಂಕುರದಿಂ ಪ್ರವಾಳಚಯದಿಂ ನವಕುಟ್ಮಲಶೋಭೆಯಿಂ ಬೆಡಂ
ಗಂ ಕುಡುಶಿರ್ಪ ಪುಷ್ಪರುಚಿಯಿಂ ವಿಳಸತ್ಪಳನಂಕುಳಂಗಳಿಂ ।
ಪಂಕರುಹಾಸನಂ ಬರೆದು ಬರ್ಚಿಸಿದಂತಿರೆ ನೋಡ್ಪೊಡೆತ್ತಲುಂ
ತಾಂ ಕರವೊಪ್ಪಿ ತೋಱು[5]ವುದು[5] ಬಂದ [6]ಬಸಂತದೊಳೊಂದು ಮಾಮರಂ[6] ॥

ಪಗರೊಪ್ಪದು ಶಶಿ ನಿಶೆಯೊಳ್
ಸೊಗಯಿಸದರವಿಂದಮದಱಿನಂತೆರಡುಮನೆಂ ।
ತು ಗಡ ಸಮನೆಂದೆನಾ ಶಿಶು
ಮೃಗನಯನೆಯ ಪಗಲುಮಿರುಳುಮೊಪ್ಪುವ ಮೊಗಮಂ ॥ ೪೯೧

---

1 ಕಾವ್ಯಾ (ಅ.ಮ). 2 ಲಾಡಿನುವವಂ ಮದನಂ (ಓ). 3 ಬೀಜದಂದದಿಂ ಬರೆ (ಓ.ಮ). 4 ಪೊಳ್ (ಓ.ಮ). 5 ವುವು (ಓ.ಮ). 6 ಬಸಂತದ ನಂದನಾಳಿಗಳ್ (ಓ.ಮ)

ಕೀಱು ಪೌರುಷಮನಾತ್ಮ ಪುಣ್ಯದಿಂ
ಬೇಱೆ ಮಾಡ[1]ದೆಸೞ್ಪೊಂ[1] ವಿರೋಧಿಯಂ ।
ಮಾಱುಗುಂ ವೆಱಪೆಱುಂಕೆಯೊಂದಱುಂ
ಪಾಱಿರಾರ್ಕುಮೆ ಪತತ್ರಿರಾಜನುಂ ॥ ೪೯

ಆ ಕಥೆ ಮತ್ತೆಂತೆಂದೊಡೆ

ಭೀಕರಕರಿಮಕರನಿಕರಭಿನ್ನತರಂಗಾ ।
ನೀಕಲವರ್ಣಾಂಬುರಾಶಿವ್ಯ
ತಾಕೃತಿ ಕಮನೀಯಮುಂಟು ಜಂಬೂದ್ವೀಪಂ ॥ ೪೯

ಬಿಚ್ಚತಮಿರ್ದು ಕಣ್ಣ ಪಸವೋಡುವಿನಂ ನರೆ ನೀನೆ ನೋಡ ಪೆ
ರ್ಮಚ್ಚರನಿಕ್ಕರೆನ್ನ ಭುಜದಂಡಮೆ ಸಾಲದೆ ಕೆನ್ನಮೆಲ್ಲಿಯುಂ ।
[2]ಮಚ್ಚದೊನಿಲ್ಲ[2] ನಿನ್ನಳವನಿನ್ನದಱುಂ ಗಳ ನೀನೆ[3]ಯಾನಕ
ವ್ಯಚ್ಚಿತನಯ[4][3] ತ್ರಿಶಕ್ತಿಯುತನಯ[5] ವಿಜಿಗೀಷುವಯಸ್ತವ್ಯೆರಿಯಯ್ ॥ ೪೯
ಮತ್ತಮುಟಿವುವರ್ಕ್ಕಮಿಾ ತೆಱದಿಂ ನೋಡಿಕೊಳ್ಳುದು ॥

ಇದು ಕಾವ್ಯಮಲವ್ಯಾವೃತ್ತಿಯೊಳ್ ವಾಕ್ಯವಾಕ್ಯಾರ್ಥದೋಷಾನು
ಕೀರ್ತನಪ್ರಕರಣಂ ದ್ವಿತೀಯಂ

———————

ಗೀತಿಕೆ ॥

ಈ ಪೇೞ್ದ ಮಾಡ್ಕೆಯಿಂ ದೋಷಾ
ಲೇಪಂ ಪೊರ್ದದಂತಿರೆ ಸನ್ನಿಬಂಧ ।
ವ್ಯಾಪೃತನಕ್ಕೆ ಗುಣವದರ್ಥಂ
ವ್ಯಾಪಕಮಾಗೆ ಕವಿತ್ವ ತತ್ವದೊಳ್ ॥ ೪೯

[4]ಸಮುಚಿತ[4]ಕೃತಿದೋಷದೂಷ್ಯಮಾರ್ಗ
ಕ್ರಮಪರಿಭಾವಿತ ಚಿತ್ತವೃತ್ತಿಯಪ್ಪೊಂ ।
ಗಮಿಸಿನ ಕವಿತಾಗುಣೋದಯಶ್ರೀ
ಸಮನಿಸುಗುಂ ಸತತಾಭಿಯೋಗದಿಂದಂ ॥ ೪೯

ಸಾರವಿಚಾರ [5]ಬಂಧುರ[5]ಮತಿಪ್ರಸರಂ ಪರಿಪಕ್ವಶಾಸ್ತ್ರಸಂ
ಸ್ಕಾರನುಪೇತಕೌತುಕರಸಂ ವಿದಿತಾಗಮಲೋಕವೃತ್ತನು ।

---

1 ದೆಸೆಪಂ (ಓ). 2 ಮೆಚ್ಚದೊನಲ್ಲ (ಅ). 3 ಯಾನೆಕಾಬ್ಯುಚ್ಯತನಯ್ (ಅ)
4 ಸಮುದಿತ (ಅ.ಓ). 5 ಚಂಚುರ (ಮ).

ತ್ಸಾರಿತಮತ್ಸರಂ ಸುಜನವತ್ಸಲನೆಲ್ಲಯುಮಿತನೆಂದು ಕೆ
ಯ್ಪಾರದೆ ಬಣ್ಣಿಕುಂ ವಿಬುಧಮಂಡಳಿ ಪಂಡಿತನಾಗವರ್ಮನಂ ॥ ೪೭

ಇದು ಸಕಳಸುಕವಿಜನಮನಸ್ಸರೋಜನೀರಾಜಹಂಸಾಯಮಾನಾನೂನ
ಕವಿತಾಗುಣೋದಯಂ ಶ್ರೀನಾಗವರ್ಮಪ್ರಣೀತಮಪ್ಪ
ಕಾವ್ಯಾವಲೋಕನದೊಳ್ ಕಾವ್ಯಮಲವ್ಯಾವೃತ್ತಿ
ಯೆಂಬುದು ದ್ವಿತೀಯಾಧಿಕರಣಂ

ಗುಣವಿವೇಕಾಧಿಕರಣಂ

ಮಾರ್ಗವಿಭಾಗದರ್ಶನಪ್ರಕರಣಂ

ಇದು ಸೌಂದರ್ಯಗುಣಪ್ರಕಾಶಮಿದು ತಾನಗ್ರಾಮ್ಯತಾಧಾನಮಿಂ
ತಿದು ಭಾಸ್ವತ್ಪರಭಾಗರಮ್ಯಮಿದು ಬಂಧಾಶ್ಲೇಷವಿಚ್ಛಿತ್ತಿಗಾ ।
ಸ್ಪದಮೆಂ[1]ದಿಂತು[1] ಚಿತಪ್ರಯೋಗ[2]ವಿಧಿಯಿಂ ಸಯ್ತಪ್ಪಿನಂ[2] ತಿರ್ದಿ ಪೇ ।
ಟ್ಟುದು ಪೂಮಾಲೆಯನಿಂಬಿನಿಂ ಸವೆವವೊಲ್ ಸತ್ಕಾವ್ಯಮಂ [3]ಕಬ್ಬಿಗಂ[3] ॥೪೮

ಸೂತ್ರಂ ೧೧೬

ನಿರತಿಶಯಕಾವ್ಯಶೋಭಾ
ಕರಂಗಳಾಗಿರ್ಪ ಧರ್ಮಮವು ಗುಣಮಕ್ಕುಂ ।
ಪರಮಪುರಾಣಕವೀಶ್ವರ
ನಿರೂಪಿತಂಗಳ್ ವಿಚಿತ್ರಮಾರ್ಗಯುತಂಗಳ್ ॥ ೪೯

ಸೂತ್ರಂ ೧೧೭

ಸಮಸಂಶ್ಲಿಷ್ಟಾರ್ಥವ್ಯ
ಕ್ತಿಮಧುರಕಾಂತಪ್ರಸನ್ನಸುಕುಮಾರೋಜ ।
ಸ್ಸಮಭಿಮತೋದಾರಾಹ್ವಯ
ಸಮಾಧಿಗಳ್ ಕೃತಿಗುಣಂಗಳೀರಯ್ದಕ್ಕುಂ ॥ ೫೦

ಸೂತ್ರಂ ೧೧೮

ಅದೆಂತೆನೆ ॥

ಸಮಮೆಂಬುದು ಬಂಧದೊಳವಿ
ಷಮಂ ಮೃದುಸ್ಫುಟವಿಮಿಶ್ರ[4]ವಿನ್ಯಾಸಪದ[4] ।
ಕ್ರಮದಿಂ ಮೂಱು ತೆಱಿಂ ಬಂ
ಧಮುಂ ಯಥಾರ್ಹಾನುವೃತ್ತಿಯಿಂ ವರ್ತಿಸುಗುಂ ॥ ೫೦೧

---

1 ದೆಂದು (ಓ.ಮ). 2 ವಿಧಿಯಂಸ್ಥೈತಿರ್ಪಿನಂ (ಅ). 3 ಕಪ್ಪಿಗಂ (ಮ).
4 ವರ್ಣೋದಾತ್ತ (ಓ.ಮ).

ಉದಾಹರಣ್ ॥

ಮೃದುಬಂಧಕ್ಕೆ ॥

ಶರದದೊಳೊನಲ್ದು [1]ಬಿಡುತುಂ[1]
[2]ಧರೇಂದ್ರಗಿ[2]ರಿಕರಿಗಳುಡಿಯೆ ಪಾಯ್ದುವು ಕಾಯ್ಪಿಂ ।
ಕರಟತಟಗಳಿತಮದಜಳ
ಪರಿಮಳನಮವಿದಳದಳಿಕುಳಂ ನಗಕುಳಮಂ ॥ ೫೦೨

ಸ್ಫುಟಬಂಧಕ್ಕೆ ॥

ಅಂಭೋನಿಧಿಗಂಭೀರಂ
ಶುಂಧದ್ಭುಜಗೇಂದ್ರಭೋಗನಿಭಭುಜಪರಿಘಂ ।
ಜಂಭಾರಿವೈಭವಂ ವಿ
ಶ್ವಂಧರೆಗಧಿನಾಥನಶ್ವಕಂಠಂ ಖಚರಂ ॥ ೫೦೩

ಮಿಶ್ರಬಂಧಕ್ಕೆ ॥

[3]ಹಸ್ತಾವಚಯದಿ ನುರು[3] ಪು
ಷ್ಪಸ್ತಬಕಮನುನ್ಮದಭ್ರಮದ್ಭ್ರಮರಪರಿ ।
ತ್ರಸ್ತಮತಿ ಮೆಲ್ಲನೆಱಗಿ ಘ
ನಸ್ತನವತಿ ಕೊಯ್ದಳಾಮ್ರಶಾಖೆಯೊಳೊರ್ವಳ್ ॥ ೫೦೪

ಸೂತ್ರಂ ೧೧೪

ಅಶಿಥಿಲಪದಚಯರಚನಾ
ತಿಶಯಂ ಸಂಶ್ಲಿಷ್ಟಮೆಂಬುದಕ್ಕುಮನೇಯಂ ।
ವಿಶದಾರ್ಥಂ ಶಬ್ದಾನ್ವಯ
[4]ವಶ[4]ಮರ್ಥವ್ಯಕ್ತಿಯೆಂದು ಪೇೞಲ್ವಡೆಗುಂ ॥ ೫೦೫

ಉದಾಹರಣ್ ॥

ಸಂಶ್ಲಿಷ್ಟಕ್ಕೆ ॥

ಅದಿರದಿದಿರಿದಿರನೆಯ್ತಂ
ದೊದಱುತ್ತುಂ ಹೊಕ್ಕು ಪಟುಪವಿಪ್ರತಿಮಭುಜಂ ॥
ಕೆದಱು ಮೆಱೆದೋವದೆಚ್ಚಂ
ಕದನದೆ ವಿದ್ವಿಡ್ಬಳಪ್ರಧಾನರನಿಂದ್ರಂ ॥ ೫೦೬

---

1 ಬಿರ್ದುತಂ (ಓ.ಮ). 2 ದುರಗಿಂಚರ (ಓ). 3 ಹಸ್ತಾವನಿಚಯಮಂ (ಓ.ಮ) 4 ಮಸ (ಓ.ಮ).

ಅರ್ಥವ್ಯಕ್ತಿಗೆ ॥
ಓರಂತೆ ಪರೆದ ನವಸಂ
ಧ್ಯಾರುಚಿಯಿಂದಪರದಿಗ್ವಿಭಾಗದೊಳಿನಿಸೊಂ ।
ದಾರಕ್ತಮಾಗಿ ನೇಱುಲ
ದ್ದೋರೆಯನನುಕರಿಪುದಾದುದಾಗನಮಾಗಳ್ ॥ ೫೦೭

ನೇಯಕ್ಕೆ ॥
ಅರಕ್ತಮಾಗಿ ನೇಱುಲ
ದ್ದೋರೆಯನನುಕರಿಪುದಾದುದಾಗನಮೆನೆ ಸಂ ।
ಧ್ಯಾರುಚಿಯಿನಕ್ಕುಮೆಂದವ
ಧಾರಿಸಿ ನೆಱೆಯಱಿದುಕೊಳ್ವು[1] ದಿದು[1] ನೇಯಾರ್ಥಂ ॥ ೫೦೮

ಸೂತ್ರಂ ೧೨೦

ಆಗ್ರಾಮ್ಯವಚನವೃತ್ತಿ ಸ
ಮಗ್ರರಸಾಪೂರ್ಣಮಪ್ಪುದದು ಮಧುರಂ ನಿ ।
ರ್ವ್ಯಗ್ರ[2]ಪದವಿನ್ಯತಿ ಪರಚಿ
ತ್ತಗ್ರಹಣ[2]ಸಮರ್ಥಮಪ್ಪುದಂತದು ಕಾಂತಂ ॥ ೫೦೯

ಉದಾಹರಣ ॥
ಮಧುರಕ್ಕೆ ॥
ಅಳಿಕುಳರುತಿಗಳಿನವನತ
ಫಳತರುಗಳಿನುಚಿತಕುನುಮಗಂಧದಿನಬಳಾ ।
ವಿಳಸನದಿಂದೀಪುದು ಗಂ
ದಿಳವಿಷಯಂ ಸಕಳವಿಷಯರಸರಸಿಕತೆಯಂ ॥ ೫೧೦

ಕಾಂತಕ್ಕೆ ॥
ಅರಸಾಳ್ತನಮೆನ್ನದೆ ಕೇಳ್
ಪರಮಾರ್ಥಮನೀಗ[3]ಳೆನಗೆ[3] ಸಾಮ್ರಾಜ್ಯಪದಂ ।
ದೊರೆಕೊಂಡಂತಾದುದು ಪ್ರೋ
ಲ್ತರೆ ದೇವರ ಬರವೆ ದೇವದೇವರ ಬರವಂ ॥ ೫೧೧

ಸೂತ್ರಂ ೧೨೧

ಅತಿರೂಢಾರ್ಥಮಗೂಢಂ
[4]ಪ್ರತೀತಿ[4]ಸುಭಗಂ ಪ್ರಸನ್ನಮೆನೆಪಡೆಗುಮಪಾ ।

1 ದದು (ಅ.ಮು). 2 ಪದಸ್ಥಿತಿರಚಿತೋಪಗ್ರಹಣ. 3 ಳೆಮ್ಮ (ಅ).
4 ಪ್ರತೀತ (ಅ.ಮು).

ಕೃತನಿಷ್ಠುರಾಕ್ಷರಂ ಲಾ
ಲಿತಲಲಿತಪದಪ್ರಕಾರಮದು ಸುಕುಮಾರಂ ॥ ೫೧೨

ಅವಕ್ರಮನುಕ್ರಮಪ್ರಯೋಗಂ ॥

ಮಡುಗಳೊಳಗಲರ್ದ [1]ನೆಯ್ದಿಲ[1]
ಕಡುಗಂಪುಮನಿವಱ [2]ಕಂಪೆ[2] ಗೆಲ್ದುವು ನಾನಿ ।
ರ್ಮಡಿಯೆನೆ ಪೊಂಬಣ್ಣದ ಕೆಂ
ಪಿಡಿದಿರೆ ಸೊಗಯಿಪುವು ಗಂಧಶಾಲಿವನಂಗಳ್ ॥ ೫೧೩

ಮಣಿಭವನಂಗಳ ರುಚಿಗಳ್[೪]
ಪೆಣೆದು ನಭೋಂಗಣದೊಳಮರಚಾಪವಿಳಾಸ ।
ಕ್ಕೆಣೆಯಾಗಿರೆ ಬಹುವಿಧದಿಂ
ಕುಣಿವುವು ಕಾಗೆರ್ತ್ತು ಕೇಗಿ ಸೋಗೆನವಿಲ್ಗಳ್ ॥ ೫೧೪

ಸೂತ್ರಂ ೧೨೨

ಪಿರಿದುಂ ಸಮಾಸಮಾಗಿರೆ
ವಿರಚಿಸುವುದು ತಾನದೋಜಮಕ್ಕುಂ ಲೋಕೋ ।
ತ್ತರವರ್ಣನಂ ವಿಶೇಷಣ
ಪರಪ್ರಕರ್ಷೋಕ್ತಿಯುಕ್ತಮಪ್ಪುದುದಾರಂ ॥ ೫೧೫

ಉದಾಹರಣೆ ॥

ಓಜಕ್ಕೆ ॥

ಬಕಕುರರಪಕ್ಷ[3]ವಿಕ್ಷಿ[3]
ಪ್ತಕಂಜಕಿಂಜಲ್ಕಪುಂಜಪಿಂಜರಿತಾಶ್ಯೋ ।
ದಕಪರಿಪೂರ್ಣತಟಾಕ
ಪ್ರಕರನರೋನಿಕರರಂಜಿತಾಶಾವಲಯಂ ॥ ೫೧೬

ಉದಾರಕ್ಕೆ ॥

ಬಹು[4]ಪೋಷಣದಿಂ[4] ಮಾವಿನ
ನಹಕಾರದ ನೊನೆಯ ನೋನೆ ಬೆಳೆಯಿನ ಬೆಳೆಗುಂ ।
ಮಹಿಯೆನೆ ಬಣ್ಣಿಸುವ ಪಿತಾ
ಮಹಂಗಮರ್ದೆಗ್ಗ ಮೊಗ್ಗೆ ನಿನಗಮದೆನಗಂ ॥ ೫೧೭

---

1 ನೆಯ್ದಿಲ. 2 ಕಂಪೆ (ಅ). 3 ನಿಕ್ಷಿ (ಓ.ಮ). 4 ದೋಷಮನಿಂ (ಓ), ಪೋಷಮನಿಂ, ವರ್ಷಮನಿಂ (ಅ).

ಮತ್ತಮಲ್ಲಿ ಶ್ಲಾಘ್ಯವಿಶೇಷಣಕ್ಕೆ ॥

ಮನಮನೆದಪ್ಪದೆಯುಂ ಪಳು
ಕಿನ ಕೇರ್ಗಳ್ ಪವಳದೆಸವ ಕಂಬುಂ ಕರ್ಕೇ ।
ತನದ ತೊರೆ ಪೊನ್ನ ಪೊಸಜಂ
[1]ತ[1] [2]ನೀಲದಡಿಗಲ್ಗಳೆಂ[2]ದೊಡೇವಣ್ಣಿಪುದೋ ॥ ೫೧೮

ಸೂತ್ರಂ ೧೨೩

ಪೆಱವಱಿ ಧರ್ಮಂಗಳನೇ
ತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕ ।
ಣ್ಣೆಱೆಯೆ ಚತುರೋಕ್ತಿ ಕೃತಿಯೊಳ್
ನೆಱೆದಿರೆ ಪೇಳ್ವುದು ಸಮಾಧಿಯೆನೆ ಪೆಸರ್ವಡೆಗುಂ॥ ೫೧೯

ಉದಾಹರಣ ॥

ವಿನಿಮಿಲಿತನೀಲಾಂಬುಜ
ವನಮುನ್ಮೀಲಿತನವೀನಕಮಲವನಂ ತ ।
ದ್ವಿನಮುಖದೊಳ್ ಮಧುಪಾಳಿಗೆ
ಜನಿಯಿಸಿದುವು ಪಡೆಯ ನುಸಿಲ ಪೊಸ ನುಸಿಲಿಂಪಂ ॥ ೫೨೦

ಸೂತ್ರಂ ೧೨೪

ಇವು ನಿಯತಂ ದಕ್ಷಿಣದೇ
ಶವರ್ತಿಕವಿರಾಜಮಾರ್ಗದೊಳ್ ನೆಗಱ್ದುಂ ಮ ।
ತ್ತವಱಿ ವಿಪರ್ಯಯವೃತ್ತಿಯೆ
ಬವರಿಸುಗುಮುದೀಚ್ಯಮಾರ್ಗದೊಳ್ ಪ್ರಚುರತೆಯಿಂ॥೫೨೧

ಸೂತ್ರಂ ೧೨೫

ವೈದರ್ಭಗೌಡಮಾರ್ಗವಿ
ಭೇದಂ ಬಗೆವೊಡೆ ಗತಾನುಗತಿಕಮಿದೆಂದೊ ।
ಲ್ಲಾದರಿಪರ್ ಕೆಲಬರ್ ಸಂ
ವಾದದೊಳೆರಡುಂ ಸಮರ್ಥಮಪ್ಪುದಱಿಂದಂ ॥ ೫೨೨

ಇದು ಗುಣವಿವೇಕದೊಳ್ ಮಾರ್ಗವಿಭಾಗದರ್ಶನ ಪ್ರಕರಣಂ ಪ್ರಥಮಂ.

---

1 ತಿ (ಓ.ಮ). 2 ನಿಂದಡಱಲ್ಗಳೆಂ (ಮ).

ಶಬ್ದಾಲಂಕಾರನಿರ್ಣಯಪ್ರಕರಣಂ

ಸೂತ್ರಂ ೧೨೬

ನಿಜದಿಂದಂ ಚೆಲ್ವೆಗೆ ವಿಬು
ಧಜನಪ್ರಿಯೆಗ[1]ಖಿಳಲೋಕವಿನುತ[1]ಪ್ರಮದಾ ।
ಗ್ರಜೆಗೆ ಕೃತಿ[2]ಸತಿಗೆ[2] ಶಬ್ದಾ
ರ್ಥಜಾತಮಂತೆರಡು ತೆಱದಲಂಕೃತಿಯಕ್ಕುಂ॥ ೫೨೩

ಸೂತ್ರಂ ೧೨೭

ಅವಱೊಳ್[3] ಶಬ್ದಾಲಂಕಾ
ರವಿಭಾಗಂ ಯಮಕಮೆಸೆವನುಪ್ರಾಸಂ ಚಿ ।
ತ್ರವಿಚಿತ್ರಭಿತ್ತಿ ವಕ್ರೋ
ಕ್ತಿ ವಿಶೇಷಮುಮೆನೆ ಚತುರ್ವಿಧಂ ತಾನಕ್ಕುಂ ॥ ೫೨೪

ಸೂತ್ರಂ ೧೨೮

ಅವಱೊಳಗೆ ॥

ಪದವರ್ಣ *ವ್ಯಾವೃತ್ತಿ ದ
[3]ಲದು[3] ಯಮಕಂ ವ್ಯವಹಿ[4]ತಾವ್ಯ[4]ಪೇತಾತ್ಮಂ ಮು।
ತ್ತದು ಪಾದದಾದಿಮಧ್ಯಾಂ
ತದೊಳಕ್ಕುಮನೇಕಭೇದನಿಯತಸ್ಥಿತಿಯಿಂ ॥ ೫೨೫

ಉದಾಹರಣೆ ॥
ವ್ಯವಹಿತಕ್ಕೆ ॥
ಮಾಣಿಕದಂತೊಪ್ಪಿದನೀ
ಮಾಣಿ ಕರಂ [5]ಕಟಿಯೆ[5] ಚೆಲ್ವುವಡೆದೆಂಬಿನೆಗಂ ।

---

1 ಗಭಿವಿನೂತಕೀರ್ತಿ (ಪು). 2 ನಮಗೆ (ಓ.ಮ).

* ಇಲ್ಲಿ ವ್ಯಾವೃತ್ತಿಯೆಂಬ ಪದವನ್ನು ಆವೃತ್ತಿಯೆಂಬರ್ಥದಲ್ಲಿ ಉಪಯೋಗಿಸಿದೆ. ದಂಡಿಯ ಕಾವ್ಯಾದರ್ಶ III. 1ನ್ನು ನೋಡಿ.

3 ಲದೆ (ಅ). 4 ತವ್ಯ (ಅ). 5 ಕಳೆಯೆ (ಅ).

ಕ್ಷೋಣಿಯನಳೆಯರ್ ಮುನ್ನಂ
[1]ಕ್ಷೋಣಿಮನಂ[1] [2]ವಿಷ್ಣು ತಾನೆ[2] ವಾಮನನಾದಂ ॥ ೫೨೬

ತಿಂದುಕಪೀನಫಲಂಗಳ
[3]ನೊಂದೊಂದೆಡೆಗಳೊಳಲಂಪು[3] ಪೋಪನ್ನೆವರಂ ।
ತಿಂದು ಕಪೀನಕುಳಂ ವ್ರತಿ
ಯಂದದಿನಿರ್ಪುದು ನಿಯುಕ್ತವನ್ಯಾಶನದಿಂ ॥ ೫೨೭

ಫಲಸಾರಸನಮವಂತೆ
ತ್ತಲುಮೊದವಿರೆ ಕುಳಿರ್ವ ಪುಟಿರೊಳೆರ್ದೆಗೊಳ್ವಿನೆಗಂ ।
ಕಲರುತಿಯಂ ಪಾಡಿದುದು
ತ್ಪಲಸಾರಸನಂ ಪುಳಿಂದಲಲನಾನಿಕರಂ ॥ ೫೨೮

ಆರೋಚಂ ಸಾಲದೆ ಶಿಶು
ಪಾಲನನುಜಿದಿಕ್ಕಿ ಮಿಕ್ಕ ಭುವನಸ್ಥಿತಿಯಂ ।
ಪಾಲಿಸು ನೀಂ ನಿನಗೆ ಜಗ
ತ್ಪಾಲನವಿಜ್ಞಾನಮಂ ಪೆಱರ್ ಪ್ರಕಟಿಪರೇ ॥ ೫೨೯

ನರಥನದೆ ಕಾಲ[4]ಯಮನಾ
ಲ್ವರುಕ್ಕಿ ಬಾಣ[4]ದ್ರುಮಾದಿಗಳ್ವೆರಸುಬಿಲಾ ।
ಸುರಚಕ್ರಂ ನಿನ್ನ ವಿಭಾ
ಸುರಚಕ್ರದ ಬಾಯ್ಗೆ ಬಾರದಿರದು ಮುರಾರೀ॥ ೫೩೦

ತಱುಸಂದಿನೆ ಕರಿಘಟೆಯಂ
[5]ತುಱು[5]ಗಿರೆ ಪಾಯ್ದುವು ಶಿಲೀಮುಖಂ ಪುಷ್ಕರದೊಳ್ ।
[6]ಗಱು[6]ನಂದಿನೆ ಪೊರೆದೊರ್ವೊದ
ರೆಱಗುವ ತೆಱದಿಂ ಶಿಲೀಮುಖಂ ಪುಷ್ಕರದೊಳ್ ॥ ೫೩೧

ನೆಯ್ದಲೆಸಟವಱ ಪೋಲ್ವೆಯ
ನೆಯ್ದಲೆ ದಲ್ ಪಡೆದುವಿಲ್ಲ ಲೋಕಮನಲೆಯ ।
ಲ್ಕಯ್ದು ಮಲರ್ಗಣೆಗಳಿಕ್ಕೆ ಮ
ಕೆಯ್ದು ಮನೋಜಂಗೆನಿಪ್ಪುವಾಕೆಯ ಕಣ್ಗಳ್ ॥ ೫೩೨

ಮಲರೆ ತಮದೊಡ್ಡು ಪಂಕಜ
ಮಲರೆ ವಿನೀಲೋತ್ಪಲಾಳಿ ಮುಗಿಯೆ ಖಲರ್ ನಂ ।

---

1 ಕ್ಷೋಣವನಂ (ಓ), ಕ್ಷೋಣಿವರಂ (ಅ). 2 ತಾನೇವಿಷ್ಣು (ಓ). 3 ನೊಂದೆಡೆಗಳೊಳಲರ್ಗಂಪು (ಓ). 4 ಯಮನಂ ಸುರಾಚಿರರುಗ್ಮಿ (ಓ), ಯಮನಂಸುರಚಿರ ಬಾಣ (ಅ). 5 ಮಱು (ಅ). 6 ತಱು, ಕಱು (ಅ).

ಚಲಿಸುತ್ತುಮಿಗಿಯೆ ಜಗತೀ
ವಿಲೋಚನಂ ಮೂಡಿದಂ ವಿಲೋಚನನಾಗಳ್ ॥ ೫೩೩

ಅಮಳ್ಗಳ್ [1]ನಯವಿಕ್ರಮಗುಣ[1]
ದಮಳ್ಗಳ್ [6]ನೃಪಶಾಸ್ತ್ರಶಸ್ತ್ರಪರಿಣತ[2]ರವರಂ[2] ।
ಸಮರದೊಳುದಗ್ರಶೌರ್ಯಂ
[3]ಸಮರಸ[3]ಸಂಪನ್ನನಾವನುರ್ವೀಪಾಂಪನ್ನಂ ॥ ೫೩೪

ಮಂತಣಕಂ ಚದುರರ್ ಗಡ
ಮಂತಣಕಂ ನೆಗಪೆ ಬಂದರೆನಿಸಿರ್ದುಂ [4]ತಾಂ[4] ।
ಮಂತಣಮುಸಿರದೆ [5]ಕೆಲರಾ[5]
ಮಂತಣಮುಂಡಂತೆ ಪೆಱರ ನಯದೊಳೆ ತಣ್ಪವರ್ ॥ ೫೩೫

ಈಧರೆಯ ಪೆಂಡಿರುದ್ಭವ
ಯೋಧರೆಯ ಮನೋಜರಾಗರಸಪೂರಿತಬಿಂ ।
ಬಾಧರೆಯ ಕಂಬುಕಮ್ಯಶ
ರೋಧರೆಯ ಬೆಡಂಗನಾರುಮೇನೆಯ್ದುವರೇ ॥ ೫೩೬

ಪನ್ನಗಕನ್ಯೆಯೊರ್ವಳುಪದೇಶಮನಿತ್ತಳೊ ನಾಗ[6]ಬಂಧಮಂ[6]
ಪನ್ನಗಕನ್ಯೆಯೋ ಜಿತೆಯೊ ಮೆಯ್ಯೆರಡಿಲ್ಲೆನಿಪಪ್ಪುಗಳ್ಗೆ ತ ।
ತ್ಪನ್ನಗಕನ್ಯೆಯಪ್ಪುಗಳೆ ಮುಪ್ಪುರಿಗೂಡಿದುವೆಂಬ ಮಾತು ಮೆ
ಲ್ಪನ್ನಗಕನ್ಯೆ[7]ಗಳ್ಪುಗು[7]ವಿವರ್ಕೊವಜರ್ ನಿನಗಾರೊ ನಲ್ಲಳೇ ॥ ೫೩೭

ಪಾದಾದಿಯಮಕಕ್ಕೆ ॥

ಉಪದಾತ್ತನುತೋನ್ನತಮಂ
ದ್ವಿಪಮದಪರಿಪೂರ್ಣಗಿರಿಸರಿತ್ಸಂತತಿಯಂ ।
ಉಪದಾತ್ತನುತೋನ್ನತಮಂ
ತಪನಕರೋತ್ತಪನತಪ್ತತಪನೋಪಲಮಂ ॥ ೫೩೮

ಮಧ್ಯಾಂತಯಮಕಕ್ಕೆ ॥

ನಾನಾಶಶಮೃಗ[8]ಧರಮಂ
ಸಾನುಜತರುಶಿಖರಲಗ್ನಶಶಮೃಗ[9]ಧರಮಂ[9] ।
ಪೀನಸರೋಜಾಲಯಮಂ
ವಾನೇಚರಯುವತಿಜಿತಸರೋಜಾಲಯಮಂ ॥ ೫೩೯

---

1 ನಯಗುಣವಿಕ್ರಮ (ಅ). 2 ರವರುಂ (ಓ.ಅ). 3 ಸಮರದ (ಅ)
4 ತಾ (ಅ). 5 ಕೆಲರುಂ (ಓ.ಅ.) 6 ಬಂಧದಾ (ಓ.ಮ). 7 ಪೆಱ್ಪುಗು (ಅ)·
8, 9 ಧರನುಂ (ಓ.ಮ).

ಅಂತ್ಯಯಮಕಕ್ಕೆ ॥

[1]ನಂದ ನರ್ವಗತಂ[1] ಧರ್ಮ
ನಂದನಾಧ್ವರತೋಷಿತಂ ।
[2]ನಿಂದು ಯಾತ್ರೇಚ್ಛೆ[2]ಯೊಳ್ ಧರ್ಮ
ನಂದನಾಧ್ವರತೋಷಿತಂ ॥ ೫೪೦

ಅವ್ಯಪೇತಕ್ಕೆ ॥

ನರಂ ನರಂ ಕಂತುವ ಮನ್ಮಥಾಂಬುಜಾ
ಕರಂ ಕರಂ ನೋಡೆ ಮೊಗಂ ವಳಿತ್ರಯಾಂ ।
ತರಂ ತರಂಗಂ ಸ್ಮರಸಿಂಧುಗಾಲತಾಂ
ಕುರಂ ಕುರಂಗಾಕ್ಷಿಯ [3]ಕಣ್[3] ಮನೋಜನಾ ॥ ೫೪೧

ನುರರಮಣೀರಮಣೀಯ
ಸ್ವರೂಪಮತಿತರಳತರಳವಿಲಸದ್ವಿದ್ಯುತ್ [4] ।
ಸ್ಫುರಿತಮೆನೆ ಪೋಲ್ತು ಕರಗಿದು
ದರಗಿದು ದಹನೋಪತಪ್ತಮೆನೆ ತತ್‌ಕ್ಷಣದೊಳ್ ॥ ೫೪೨

ನಿನ್ನ ವಾಕ್ಯಾರ್ಥಮೆಂಬೊಂದು
ರನ್ನಕಂ ಬೆಗಡಂ ಗಡಂ ।
ತನ್ನುಕ್ತಿಯಾಗೆ ತ[4]ದ್ವಿದ್ಯ[4]
ನನ್ನನಾದಂ ಬಲಂ ಬಲಂ ॥ ೫೪೩

ವ್ಯಪೇತಾವ್ಯಪೇತಕ್ಕೆ ॥

ಸಬಳಿಕೆಯಿಂ [5]ಪಾಟಿ[5]ಯನೊ
ಕ್ಕು ಬೇರ[6]ನಂತಾ[6]ಕುಬೇರನಾಯಕನತಿವಿ ।
ಕ್ಲ ಬಚಿತ್ತಂ ತೊಟ್ಟಗೆ ತಾ
ಗಿ ಬಾಗಿದಂ ತಾಗಿ ಬಾಗಿದಂ ನರನಡಿಯೊಳ್ ॥ ೫೪೪

ವರ್ಣಾವೃತ್ತಿಯಮಕಕ್ಕೆ ॥

ಚಾರೂರೂ[7]ರೂದ್ಧರೂರೂ[7]ರುರು ಭುಜಶಿಖರೋದ್ಭಾಸಮಾನಾವಲೋಕಂ
ಕ್ರೂರಾರಾ[8]ರಾತಿ[1][8]ರಾ[9]ರಾಚಮಪಡಿ[9]ನುಡಿಯುತ್ತುಂ ಮುರಧ್ವಂಸಿಯೊಳ್ ಸ ।
ದ್ಧಾರಾರಾರಾಜಿರಾರಾಜಿತಭುಜನೊಳವಪ್ಪಂಧದಿಂ ಚೆಲ್ವು ಕೆಯ್ಮಿ
ಕ್ಕಾರಾರಾಗಾಧ್ಯರಾರಾರವರವರವರ್ಗಂತೊಪ್ಪಿದಂ ನೀಲಕಂಠಂ ॥ ೫೪೫

---

1 ಸಂದನಗರ್ವಗತ (ಓ), ನಂದಸರ್ವರತಂ (ಅ). 2 ನಿಂದುಯದ್ಯಕ್ರಚ್ಛೆ (ಅ). 3 ಮೆಯ್ (ಓ.ಮ). 4 ದ್ವಿದ್ಯಾ (ಅ). 5 ಶಾಳಿ (ಓ.ಮ). 6 ದಂತಾ (ಓ.ಮ). 7 ರುದ್ಯರೋರೂ (ಅ). 8 ರಾತ್ರಿ (ಅ). 9 ರೇರೇಡಮಪಡಿ (ಅ), ಮೈಚಾನನ ಪಟು (ಓ.ಮ).

ಸೂತ್ರಂ ೧೨೯

* ಪರಿವೃತ್ತಂ ಸಂದಷ್ಟಂ
ನಿರಂತರಾವಳಿ ಸಮುದ್ಗಮೆಂಬಿವು ಮೊದಲಾ ।
ಗಿರೆ ಯಮಕಭೇದಮನಿತುಂ
ಪರಿಭಾವಿಸೆ ತತ್ಪ್ರಪಂಚದೊಳ್ ಪೊಕ್ಕಿರ್ಪಂ ॥ ೫೪೬

ಉದಾಹರಣೆ ॥

ಪರಿವೃತ್ತಕ್ಕೆ ॥

ತಾರಾತಾರಾಮಳಿನಗುಳಿಕಾಹಾರನೀಹಾರನೀಕಾ
ಶೋರುಸ್ಫೂರ್ಜತ್ಪ್ರ[1]ವಿತತ[1]ಯಶೋರಂಜಿತಾಶೇಷ ಲೋಕಂ ।
ಸಾರಾಸಾರಾದ್ಯನುಗತವಿಚಾರೋಚಿತಾತ್ಮೀಯಚಿತ್ತೋ
ದಾರಪ್ರಜ್ಞಂ ನೆಗಳ್ದನವನೀಭಾಗದೊಳ್[1] ನಾಗವರ್ಮಂ ॥ ೫೪೭

ಸಂದಷ್ಟಕ್ಕೆ ॥

ಓರೊರ್ವರ್ ಸೆಣಸಿ ತಗುಳ್ದನೇಕವಾರಂ
ವಾರಸ್ತ್ರೀಜನವಿದಿರೊಳ್ ತುಳುಂಕೆ ನೀರಂ ।
ನೀರಂಧ್ರಸ್ತನತಟದೊಳ್ ಕೃತೋಪಹಾರಂ
ಹಾರಶ್ರೀಗೆಣೆಯೆನಿಸಿತ್ತು ವಾಃಕಣ್ಠಿಘಂ ॥ ೫೪೮

ಆವಳಿಗೆ ॥

ಶ್ರೇಯಂ ಶ್ರೇಯಂ [2]ದ್ವಿಪದ[2]ವ
ಸಾಯಕಸಾಯಕಪರಂಪರಂ ಲಲಿತಯುವ ।
ತ್ಯಾಯತನತತ್ಯಾಯತನಂ
ಗೇಯೋದ್ಗಾಯತ್ಸಕಳಕಳಂ ಸಕಳಕಳಂ ॥ ೫೪೯

ಸಮುದ್ಗಕ್ಕೆ ॥

[3]ಹರಿದಾಂತಂ[3] ಬಲಂ ಬೆರ್ಚಿ
ಸುರಾಸುರಸಭಾಜನಂ ।
[3]ಹರಿದಾಂತಂ[3] ಬಲಂ ಬೆರ್ಚಿ
ಸುರಾಸುರಸಭಾಜನಂ ॥ ೫೫೦

---

* ಭಾಮಹ—II, 10; ರುದ್ರಟ—III, 13 ರಿಂದ 16 ಪದ್ಯಗಳನ್ನು ನೋಡಿ. ದಂಡಿ—III, 51ನ್ನು ನೋಡಿ. 1 ಕಟಿತ (ಅ). 2 ದ್ವಿಪದ (ಅ). 3 ಹರಿದಾಂತ (ಅ).

ಸೂತ್ರಂ ೧೩೦

ಬವಕಾರಂಗಳ್ ಪಹವ
ರ್ಣವೆರಡುಮವಿಭೇದದಿಂದೆ ಸಲ್ಗುಂ ಸಂಯೋ ।
ಗವಿಶಿಷ್ಟಮುಂ ಸ್ವರೂಪ[1]ಮು
ಮವಿಕಲ್ಪ[1]ದೊಳೊಂದಿ [2]ನೆಗೞ್ದುಮವು[2] ದುಷ್ಕರದೊಳ್ ॥

* ಲಕ್ಷ್ಯಂ ॥

ನವ[3]ಲಕ್ಕಂ[3] ಕಟಕದೊಳ
ನ್ನವ[3]ಲಕ್ಕಂ[3] [4]ನಿಜಮೆ[4] [5]ಪಿರಿದು[5] ವಿಬುಧನಿಕಾಯ ।
[6]ಕ್ಕವಳಂಬನಮಪ್ಪ . .
ಕ್ಕವಳಂ ಬಚ[6]ನ್ಯೈಕಸಾರಮೆಂಬೀ ನುಡಿಯಂ ॥ ೩೩೨

ಪಿಂಗಿದುದಿಲ್ಲನ್ನುಂ ಮನ
ದಿಂ ಗೋವರ ಗಡಣದೊಳ್ ದನಂಗಾಹಿತನಂ ।
ನೀಂಗಳದೆತ್ತ ಱಿವಿರ್ ಬ
ರ್ಮಂಗಂ ಬಗೆದಱಿವುದರಿದನಂಗಾಹಿತನಂ ॥ ೩೩೩

ಆ ಗಿರಿಯ ನಿತಂಬಂ ಶೋ
ಭಾಗುಣಮಂ ತಳೆದುದಪ್ಸರಃಕುಲಲಲಿತಂ ।
ಮೇಗಣ ಶಿಖರಾಗ್ರ[7]ಮುಮಿಂ[7]
ಬಾಗಿ ಮನಕ್ಕೆಸೆವುದಪ್ಸರಃಕುಲಲಲಿತಂ ॥ ೩೩೪

ಸೂತ್ರಂ ೧೩೧

† ಸದೃಶಾಕ್ಷರವಿನ್ಯಾಸಂ
ಪದದೊಳ್ ಪಾದಂಗಳೊಳ್ ಪೊದಳ್ದೆಸೆದಿರೆ ಪೇ ।
ಬ್ಬುದನುಪ್ರಾಸಂ ನಿಯಮದಿ
ನದನಾದ್ಯಂತಂ ವಿಭಾಷೆಯಿಂ ವಿರಚಿಸು[8]ವೆಂ[8] ॥ ೩೩೫

---

1 ಸ್ವಪಿಕಲ್ಪ (ಓ.ಅ). 2 ನೆಗಬ್ಬುವು (ಓ.ಮ). * ಲಕ್ಷ್ಯಂ ಎಂಬುದಕ್ಕೆ ಹಿಂದೆ "ಈ ಕಾರಾರ್ಥವ್ಯಾವೃತ್ತಿಗ್ರಹಣಮದರ್ಕಂ" ಎಂದು ಓಲೆಪ್ರತಿಯಲ್ಲಿದೆ. ಕೆಲವು ಪ್ರತಿಗಳಲ್ಲಿ "ಈ ಕಾರಿಕಾರ್ಥತ್ವವ್ಯಾವೃತ್ತಿಗ್ರಹಣಮದರ್ಕೆ" ಎಂದಿದೆ. 3 ಲಕ್ಷ್ಯಂ (ಓ.ಅ). 4 ಜನಪೆ (ಓ.ಅ). 5 ಹರಿದು (ಅ). 6 ಕ್ಕವಳಮ್ಯಮನರ್ಕವಳಂಬವಚ (ಓ), ಕ್ಕವಳಂಬನಮಪ್ಪದರಿತ್ತವಳಂವಚ (ಅ). 7 ಮುಸಂ (ಓ.ಮ). † ಭಾಮಹ—II, 5; ದಂಡಿ—I 55 ನೋಡಿ. 8 ವರ್ (ಅ.೫).

ಪ್ರಯೋಗಂ ॥

ಚರ್ಚರ್[ಶಶಿಶಿಶುವಂ ಕಱಿ
ಗರ್ಚರ್[ಘನಘಟೆಯನುರ್ಚಲಮರದ್ರುಮಮಂ ।
ಸಾರ್ಚಲನನೆಂಬ ಸೊಡರನೊ
ಡರ್ಚಿದುವೆನೆ [1]ನೀಳ್ದುವಿದಱಿ[1] ಶಿಖರಕರಂಗಳ್ ॥ ೫೫೬

ಸೋಡಂಬಾಡಂ ಕರಿಯ ಮುಗಿಲಂ ದಂತಿಗಳ್ಕೆತ್ತು ಮಿಂಡಂ
ನೋಡರ್ ನೀಡುಂ ಪೊಳೆವ ನಿಶಿತಾಸ್ತ್ರಾಳಿಗೆತ್ತೆತ್ತ[2]ವೆತ್ತಂ[2] ।
ಕಾಡುಂ ಕೋಡುಂ ಹಯಮಯಮೆಗೆತ್ತುದ್ಧ[3]ಗೇಹಂ[3]ಗಳೊಳ್ ನಂ
ವ್ರೀಡಾಪೀಡಂ ವಿರಹಿಜನಮಂದಳ್ಕಿ ಬೆಳ್ಕುತ್ತುದೆತ್ತಂ ॥ ೫೫೭

ಕೆಳರೆ ವಿರಹಿವ್ಯಂದಂ ಪುಷ್ಪಿತಾಶೋಕದಿಂದಂ
[4]ತಳರೆ[4] ಕುನುಮಜಾಳಂ ಬಾಳಚೂತಪ್ರವಾಳಂ ।
ಪೊಳೆಯೆ ಪುಟಿಲ ತಣ್ಪಂ ನೋಳ್ಪಿ ತಪ್ಕೈಸಿ ಬಿಣ್ಪಂ
ಬಳೆಯೆ ಮದನದಾಹಂ ಬೀಸುಗುಂ ಗಂಧವಾಹಂ ॥ ೫೫೮

ಖಗ[5]ತತಿ[5] ಸಾರೆ [6]ಶಾಕಿನಿ[6]ಯರಾರೆ ನಿಶಾಚರಕೋಟಿ ಪಾರೆ ಬ
ಳ್ಳುಗಳೆಡೆಯಾಡೆ ಭೂತಗಣ[7]ಮಾಡೆ[7] ಮರುಳ್ವಡೆ ಪಾಡೆ ಸಾಹಸಂ ।
ನೆಗಟ್ಟು ಮುಕುಂದನಸ್ತ್ರರಿಪುವ್ಯಂದ [8]ನಗು[8] ರ್ವಿಸೆ ಕೊಂದನಾಜಿಗ
ಟ್ಟಿಗನೆನೆ ಚಕ್ರವರ್ತಿಯನನಿಂದಿತಕೀರ್ತ್ಯಿಯನಿಂದ್ರಮೂರ್ತಿಯಂ ॥ ೫೫೯

ಸೂತ್ರಂ ೧೩೨

* ಬೆರಸಿರೆ [9]ಶಷಸಹವರ್ಣಂ[9]
ಸರೇಫಸಂಯೋಗಮೊಂದಿ ಕೂಡಿ[10]ದ ವರ್ಗಾ[10] ।
ಕ್ಷರಮಲ್ಲಿಗಲ್ಲಗೆಡೆಗೊಂ
ಡಿರೆ [11]ಪರುಷಾ[11]ನಾಮವೃತ್ತಿ ವರ್ತಿಕುಮದಱೊಳ್॥

ಲಕ್ಷ್ಯಂ ॥

ಶಖಬರ್ಹಂ ಸರ್ಷಪಮಾ
ಜಖುರಂ ರಾಮಠಮಹೀಂದ್ರನಿರ್ಮೋಕಂ ಶ್ವೇ ।
ತಖರಾಂಗರೋಮಮಿವು ದು
ರ್ಮುಖದುಷ್ಪಗ್ರಹವಿನಾಶನಂ ಕಟುಧೂಪಂ ॥ ೫೬೧

---

1 ನೀಳ್ದವದಱಿ (ಓ.ಅ). 2 ಲತ್ತಂ (ಅ). 3 ವಾಹಂ. 4 ಕಳಲೆ (ಅ). 5 ರುತಿ (ಓ.ಮ). 6 ಡಾಕಿನಿ (ಅ). 7 ಕೂಡೆ (ಓ) 8 ಮಗು (ಅ). * ಮುಂದಿನ ಪುಟವನ್ನು ನೋಡಿ. 9 ಶಷವರ್ಣಂಗಳ್ (ಓ.ಮ) 10 ಯವರ್ಗಾ (ಓ.ಮ). 11 ಪುರುಷಾ (ಅ.ಮ).

ಸೂತ್ರಂ ೧೩೩

* ತಂತಮ್ಮ ವರ್ಗದಂತ್ಯದೊ
ಳಂತಾ ವರ್ಗಂಗಳಮಳ್ಗಳಾಗಿರೆ ಮೇಣ ।
ತ್ಯಂ[1]ತಂ ಸರೇಫ[1]ಸಂಯೋ
ಗಾಂತರಮಮದೊರ್ದವೆ ಮಧುರೆಯೆಂಬುದದಕ್ಕುಂ ॥

ಉದಾಹರಣೆ ॥

† ಒನಗೆ ಮರುಳ್ಗೊಂಡಾಡುವ
ವನಿತಾಧಿಪನಂತಪುರದ ಕಾಂತೆಯರ ಸಮು ।
ಲ್ಲಸಿತಪದಕಮಲದೊಳ್ ರಂ
ಜಿಸಿ[2]ದುದು[2] ಸಿಂಜಾನಮಂಜುಮಂಜೀರರವಂ ॥ ೩೬೩

ಉಪನಾಗರಿಕೆಯೆಂದೊಡಮಿದುವೆ ॥

ಸೂತ್ರಂ ೧೩೪

ಅವಿಶೇಷವರ್ಣರಚನಾ
ವಿವಿಕ್ತಗತಿ ಮುಕ್ತಭೂರಿಸಂಯೋಗಂ ಸೌ ।
ಷ್ಮವಗುಣಸಮನ್ವಿತಂ ಲಲಿ
ತವೃತ್ತಿಯಿಂ[3]ಲಲಿತೆಯೆಂಬ ವೃತ್ತಿಯದಕ್ಕುಂ[3] ॥ ೩೬೪

ಪ್ರಯೋಗಂ ॥

ಮದನನೃಪಾದೇಶದಿನ
ಲ್ಲದೆ ಬಿರಯಿಗಳುಂತೆ ಪೋ ಪುಗರ್ ಪುಗಲೆಂಬಂ ।
ತೊದವಿದುದು ಬನದೊಳೆತ್ತಂ
ಮದಕಳಕಳಕಂಠಕಳಕಳಪ್ರಧ್ವಾನಂ ॥ ೩೬೫

ಗ್ರಾಮ್ಯೆಯೆಂಬುದುಮಿದುವೆ ॥

---

* ರುದ್ರಟ—II, 26 : ಅನುಪ್ರಾಸದಲ್ಲಿ ಐದು ಭೇದಗಳುಂಟೆಂದು ರುದ್ರಟನ ಮತ. ಕೆಲವರು ಗ್ರಾಮ್ಯ, ಉಪನಾಗರಿಕೆ ಎಂಬ ಬೇರೆ ವೃತ್ತಿಗಳೂ ಉಂಟೆಂದು ಹೇಳುತ್ತಾರೆ. ಕಾವ್ಯಾಲಂಕಾರ—II, 19, ನಮಿಸಾಧುವಿನ ಟಿಪ್ಪಣಿಯನ್ನೂ ನೋಡಿ. ನಾಗವರ್ಮನು ರುದ್ರಟನ ಮತವನ್ನೇ ಒಪ್ಪಿರುತ್ತಾನೆ. 1 ತಸ್ವರೂಪ (ಅ.ಇ). † ರುದ್ರಟ—II, 20, 23. 2 ದುದೊ (ಅ). 3 ಲಲಿತವೃತ್ತಿಯೆಂಬುದದಕ್ಕುಂ (ಓ).

ಸೂತ್ರಂ ೧೩೫

[1]ಸ್ಥಾನಂ[1] ಕ್ರಿಯೆಯೆಂಬಿವಱೊಳ
ನೂನಸಮಾನಾಕ್ಷರಾದಿಪದಸಾನ್ನಿಧ್ಯಂ ।
ತಾನಕ್ಕುಂ ಮಾದುರ್ಯಾ
ಧೀನಮನುಪ್ರಾಸಮೆಂದು ಪೇೞ್ವರ್ ಕೆಲಬರ್ ॥ ೫೬೬

ಲಕ್ಷ್ಯಂ ॥

ಎಳಲತೆಯ ಜೊಂಪ[2]ದೊಳ್ ತ
ಳ್ತೆಳಸಿ[2] ತಗುಳ್ದಿರ್ಪ ವಿರಹಕಾತರದಿಂ ಕ ।
ಣ್ಗೊಳಿಸುಗು[3]ಮಾ ಪುರವರಮಂ[3]
ಬಳಸಿದ ನಂದನವನಂಗಳೆನಿತೊಳವನಿತುಂ ॥ ೫೬೭

ಸೂತ್ರಂ ೧೩೬

* ಏನಾನುಮನೊಂದಂ ಸಂ
ಸ್ಥಾನದಿನನುಕರಿಸುವಂತು ಭಂಗ್ಯಂತರದಿಂ ।
ಪೀನಮೊಡಂಬಡೆ ವಿರಚಿಸೆ
ನಾನಾವಿಚ್ಛಿತ್ತಿ ಚಿತ್ರಮೆನಿಕುಂ ಪೆಸರಿಂ ॥ ೫೬೮

ಸೂತ್ರಂ ೧೩೭

ಶರಶೂಲಚಾಪಚಕ್ರಾ
ಸಿರೂಪಮಿಭರಥತುರಂಗಪದಗತಪಾಠಂ ।
ಮುರಜಂ ಗೋಮೂತ್ರಿಕೆ ಪು
ಷ್ಕರಮರ್ದಭ್ರಮಣಸರ್ವತೋಭದ್ರಂಗಳ್ ॥ ೫೬೯

ಸೂತ್ರಂ ೧೩೮

ಅಕ್ಷರಬಿಂದುಚ್ಯುತ[4]ಕಂ
ದ್ವ್ಯಕ್ಷರಿಯೇಕಾಕ್ಷರಂ[4] ನಿರೋಷ್ಠ್ಯಮತಾಲ ।

---

1 ಸ್ಥಾನ (ಅ). 2 ದೊಳಗುಳ್ಕೆಳಸಿ (ಓ.ಅ). 3 ನೂಪುರರವಮಂ (ಓ).
* ರುದ್ರಟ—V, 1. 4 ಸಂಧ್ಯಕ್ಷರಮೇಕಾಕ್ಷರಂ (ಓ.ಅ).

ವ್ಯಾಕ್ಷರಮೆನೆ ನಿಜನಾಮಸ
ದೃಕ್ಷಂ ಲಕ್ಷಣಮೆದಾಗೆ ನೆಗಳ್ದುಂ ಪಲವುಂ ॥ ೫೭೦

ಅವರ್ಣಾನುಕ್ರಮಪ್ರಯೋಗಂ ॥

ಶರಂ ॥

ಸುಂದರಾಕಾರಸಂಪನ್ನ
ನೆಂದುಮಾನ್ಯಪನಂದನಂ ।
ನಂದನಂ ಬುಧಕೀರಾಳಿ
ವೃಂದಕ್ಕೆ ಸಕಲರ್ತುಕಂ ॥ ೫೭೧

ಶೂಲಂ ॥

ವೀರಶ್ರೀಕಾಂತೆಯಂ [1]ತಾಳೆ[1]
ಚರಾಚರಜನಸ್ತುತಾ ।
ತಾರತಾತಾರತಾರೇಶ
[2]ಶರೇತಾರಾಜಿತಾಜಿರಾ[2] ॥ ೫೭೨

ಪಾಸಂ ॥

ಸಂಸಾರವಿಷಮವಾರಿಧಿ
[3]ಸಂಸರ್ಪಣದುಃಖವೀಚಿಯೊ[ಂದು] ಲ್ಲಾಸಂ[3] ।
ಸಂಸಕ್ತಮಾಗದಂತು ಜಿ
ನಂ ಸುವ್ರತ[4]ನಾಮ[4]ನೆಮಗೆ ಕರುಣಿಸು[5]ಗಿನಿಸಂ[5] ॥ ೫೭೩

ಚಕ್ರಂ ॥

ತನ್ನ ಸಂತತಿ ಮುನ್ನೀತಂ
[6]ತನ್ನೀತಂ[6] ಮುನಿಸನ್ನುತಂ ।
ತನ್ನನುರ್ಕಿನೊಳಿನ್ನಾತಂ
ತನ್ನೊಳಿಂದಿನಿ[7]ಸನ್ನತಂ[7] ॥ ೫೭೪

ಖಡ್ಗಂ ॥

ಕಂಸಾಸುರಹರಂ ದೈತ್ಯ
ಧ್ವಂಸಿ ಬಾಣಮದಾಪಹಂ ।
ಹಂಸಾಸನನಸಮಾರಬ್ಧಾ
ಶಂಸನಂ ನರಕಾಂತಕಂ ॥ ೫೭೫

---

1 ನಾಳೆ (ಓ.ಅ). 2 ಶರೀರಾಜಿತರಾಜಿತಾ (ಓ), ಶರತಾರಾಜಿರಾಜಿತ (ಅ). 3 ಸಂಸರ್ವದುಷ್ಪನಿಭಂನಿಭಂ ಎಲ್ಲಾ (ಓ). 4 ನಾಥ (ಅ.ಓ). 5 ಗೆನಸುಂ (ಅ). 6 ಮುನ್ನೀತಂ (ಅ). 7 ಸನ್ನುತಂ (ಅ).

ಕಂಜನಾಥಂ ಸುರದ್ರೋಹಿ
ಭಂಜನಂ ಲೋಕಪಾಲಕಂ ।
ಕಂಜಾಕ್ಷಂ ಕಂಟಕಾಕಂಪಂ
ಮುಂಜಕೇಶಿ ಧರಾಧರಂ ॥ ೫೭೬

ವ॥ ಗ ರಥತುರಂಗಪದಗತಪಾಠಂಗಳ್ಗಂ ಲಕ್ಷ್ಯಮಂ ನೋಡಿಕೊಳ್ಳುದು ॥

ಮುರಜಂ ॥

ಅಜಾತಶಂಖಂ ತಾನಾಪ್ತ
ನಜಂಗಮನನೂಯನಂ ।
ಗಜಾಂಕುಶಂ ಗತಾಪ್ಯಾಪ್ತ
ವಿಜಯಂ ಮಧುಸೂದನಂ ॥ ೫೭೭

ವ॥ ಮುರಜಂ ಅರ್ಧಪ್ರಸ್ತಾರದಿಂ ಗೋಮೂತ್ರಿಕೆಯಕ್ಕುಂ ॥

ಗೋಮೂತ್ರಿಕೆ ॥

ಉರುತರಸಿತಕೀರ್ತಿಗುಣ್ಣಾ
ಕರಂ ಪದಾನತವಿರೋಧಿವರ್ಗಂ ನೆಗಟ್ಟಿಂ ।
ಸುರುಚಿರ[1]ನುತ[1]ಮೂರ್ತಿಘ್ನಾ
ಪರಂ ಸದಾ ಹಿತಕರೋಕ್ತಿ ದುರ್ಗಂ ಜಗದೊಳ್ ॥ ೫೭೮

ಪದ್ಮಂ ॥

ಮಂದರಾಗಂ[2] ಗುಣೋದ್ದಾಮಂ
ವಂದಿತಂ[3]ಸದಯಾದಮಂ[3] ।
ಮಂದರಾದ್ರಿನಿಭಂ ಭೀಮಂ
[4]ಮಂದಿ[4]ಯೊಳ್ ಪೇಳ್ಗುಮಾಯಮಂ ॥ ೫೭೯

ಅರ್ಧಭ್ರಮಣಂ ॥

ಶ್ರೀರಾಮಾಧಾಮನಾಮಂ [5]ತಾ[5]
ರಾರಾರಾರಾನಮಾಸಮಂ ।
ಮಾರಾರಿ ನಿನ್ನೊಳ್ ಸಮಾನಾ
ಧಾರಾ [6]ನಿನ್ನೊತ[6]ನೊಳ್ ಸಮಂ ॥ ೫೮೦

* ಸರ್ವತೋಭದ್ರಕಂ ಲಕ್ಷ್ಯಮನಱಿದುಕೊಳ್ಳುದು ॥

---

1 ತನು (ಓ.ಮು). 2 ಮಂದಾರಾಗಂ, ಮಂದಾರಾಂಗಂ, ಮಂದಾರಗಂ (ಅ). 3 ಸ್ಕಂದಯಾರಮಂ, ಸ್ಕಂದಯಾಪರಂ, ಸಂದಯಾದಮಂ (ಅ). 4 ಮುಂದೆ (ಅ). 5 ತಾಂ (ಅ). 6 ನಿನ್ನೋತ (ಅ). * ಇದಕ್ಕೆ ಹಿಂದೆ ಕುಸುಮಮನೋಹರಂ । ಕುಸುಮಮನೋಹರಂ । ಕುಸುಮಮನೋಹರಂ । ಕುಸುಮಮನೋಹರಂ ॥—ಎಂದು ಕೆಲವು ಪ್ರತಿಗಳಲ್ಲಿ ಬರೆದಿದೆ.

ಅಕ್ಷರ[1]ಚ್ಯುತಕಂ ॥

ಕುಲಜನಭಿಮಾನಿ ತಕ್ಕಂ
ಚಲಮಱುವಂ ನೆಗಱನಾತನಿಂತಿದನೆಂತುಂ ।
ಜಲಜಾಯತಾಕ್ಷಿ ಕೆಲನುಂ
ನೆಲನುಂ ನಗುವಂತು ಪೊಲ್ಲ[2]ಕೆಯ್ಗುಮೆ ಚಾರಂ[2] ॥ ೫೮೧

ಬಿಂದುಚ್ಯುತಕಂ ॥

ಇಂದು ನೋಡಿದು ಬೇಱಿಂದ
ಮೆಂದಿನಂದಮದಲ್ತಣಂ ।
ಮಂದಮಂದಂ ಕರಸ್ಪರ್ಶಂ
ತಂದಪ್ಪುದುಪತಾಪಮಂ ॥ ೫೮೨

ದ್ವ್ಯಕ್ಷರಿ ॥

ನಿಂದಾನಂದದದೊಂದೂನಂ
ನಿಂದಂದೇನಿಂದಿನಂದದಿಂ ।
ನಂದನನಂದನ ನಿನ್ನಿಂದಂ
[3]ನಗದನುಂ[3] ದನುನಂದನಂ ॥ ೫೮೩

ಏಕಾಕ್ಷರಂ ॥

* ನಿನ್ನಿನೇನಿನ್ನನಾನನ್ನ
ನಿನ್ನನೆನ್ನನನೂನನಂ ।
ನುನ್ನನ್ನೆನನ್ನನ್ನೆನೇನೇ
[4]ನೆನ್ನಿನ್ನಂ[4]ನಿನ್ನೆನಾನುನಂ ॥ ೫೮೪

ನಿರೋಷ್ಠ್ಯಂ ॥

ನೆಗಪ[5]ಯುತಿ[5]ಸ್ಥಿತಿ ಚಿತ್ತದಿ
ನಗರೆ ಕರಂ ನಿಜದೆ ತನ್ನ [6]ತರಳತೆ[6] ಕೆಲದಿಂ ।
ದಗಲದೆ ನಾಳೀಜಂಘಂ
ನಗಿಸಿತ್ತಾನಗದ ನಗೆದ ಋಷಿ[7]ನಂಹತಿಯಂ[7] ॥ ೫೮೫

---

1 ಚ್ಯುತಕಾದಿಗಳ್ಗೆ (ಓ). 2 ಕೆಯ್ದುಮೆಚ್ಚೋರಂ (ಅ.ಇ), ಕೆಯ್ಗಂಚಾರಂ (ಅ). 3 ನಂದನಂ, ನಂದನೆಂ (ಅ). * ಇದಕ್ಕೆ ಹಿಂದೆ ಒಂದು ಪ್ರತಿಯಲ್ಲಿ ಮಾತ್ರ " ನೀನಾನು ನಿನ್ನನಾನೆಂ । ನಾನಿಂನನ್ನಿನ್ನ ನಿನ್ನನಾನಾನೂನಂ । ನೂನಂನನ್ನೆನನೋನ್ನೆ । ನೀನೇನ್ನೆನಾನುನೀನುನೀನೇನೋನ್ನೆ " ಎಂದು ಇದೆ. 4 ನೇನಿನ್ನಂ (ಅ). 5 ಯತಿ (ಅ). 6 ಸರಳತೆ (ಅ), 7 ಸಂತತಿಯಂ (ಅ).

ಅತಾಲವ್ಯಂ ॥

ರೂಪುಂ ಸೊಬಗುಮಣ್ಮಂ ನಾ
ಣ್ಗಾಪುಮಾರ್ಪುಂ ಪ್ರಧುತ್ವಮುಂ ।
[1]ಕೋಪಮಂ[1] ಮಾಟ್ಟುದುಂ ತನ್ನೊಳ್
ಧೂಪಂ ತಾಂ ಕೊಲ್ಗುಮಾತನಂ ॥ ೫೮೬

ಸೂತ್ರಂ ೧೩೯

ಚ್ಯುತದತ್ತಾಕ್ಷರಮುಂ ಗೋ
ಪಿತಕ್ರಿಯಾಕಾರಕಂ ನಿಗೂಢಚತುರ್ಥಂ ।
ಪ್ರತಿನಿಯತಗತಪ್ರತ್ಯಾ
ಗತಂ ದಲೆಂದಿಂತು ಪೆಱವುಮಕ್ಕುಂ ಚಿತ್ರಂ ॥ ೫೮೭

ಪ್ರಯೋಗಂ ॥

ಚ್ಯುತದತ್ತಾಕ್ಷರಂ ॥

ಸೀತಾರಾಮನಮಾಪನ್ನಂ
ಧೌತ[2]ಶೀಲ[2]ಸಿತಪ್ರಭಂ ।
ವೀತತಾಸಂ ಮನಂಗೊಳ್ಗುಂ
ಪ್ರೀತಿಯಿಂದೊಂದಿ [3]ಲಕ್ಷ್ಮಣಂ[3] ॥ ೫೮೮

ಕ್ರಿಯಾಕಾರಕಗೋಪಂಗಳ್ ॥

ಪರಿವರ್ಜಿತದೋಷನನಾ
ದರದಿಂ ದೇವಾದಿದೇವ[4]ನೆಂದಿರ[4]ದರೆಬರ್ ।
ದುರಘಾವಿಲಪ್ರರಂ ದೇ
ವರೆಂದು ಬಗೆ ಬೆದಱೆ ದೆಸೆಗೆ ದಿಙ್ಮೂಢತೆಯಿಂ ॥ ೫೮೯

ಏನನೇನಂ ಮಹಾಘೋರಂ
ನಾನಾಜನ್ಮಾಂತರಂಗಳೊಳ್ ।
ತಾನಾಗಿಸದು ಸಂಸಾರಿ
ಗಾ ನಿರ್ವಾಣಪದಂ ಬರಂ ॥ ೫೯೦

ಗೂಢಚತುರ್ಥಂ ॥

ಆತನಲ್ಲದನಂ ಪೆಚ್ಚಿಂ
ಮಾತೇಂ ತಾಂ ಮಾರನಾದೊಡಂ ।
ಕೇತನಂ ರತಿರಾಗಕ್ಕೆ
ಕೇತನಂ ತಾರ [5]ನಲ್ಲನಂ[5] ॥ ೫೯೧

---

1 ಕೋಪಮುಂ. 2 ಶೀಲಂ (ಅ). 3 ಲಕ್ಷ್ಮಣಂ (ಓ.ಆ). 4 ನೆಂದಿಂ (ಅ). 5 ನಲ್ಲಳಂ (ಓ).

ಗತಪ್ರತ್ಯಾಗತಂ ॥

* ತಾರವೀವೀರತಾನಾರ
ನೀರನಾಕಾರನಾರಕಾ ।
ತಾರನಾನಾರತಾಕಾರ
ಕಾರಕಾತಾರಕಾರತಾ ॥ ೫೯೨

ಸೂತ್ರಂ ೧೪೦

† ನುಕವಿಪ್ರಕರಕ್ಕೆ ವಿನೋ
ದಕೇಳಿಗುಪಯೋಗಹೇತುಗಳ್ ಪ್ರಚ್ಛನ್ನ ।
ಪ್ರಕಟಾರ್ಥಂಗಳನೇಕ
ಪ್ರಕಾರದಿಂದೊಂದಿ ವರ್ತಿಕುಂ ಪೇಳಿಕೆಗಳ್ ॥ ೫೯೩

ಸೂತ್ರಂ ೧೪೧

ನುನುಳೊರ್ನುಡಿ [1]ಭಾಮೆ ಮನ[1]
ಕ್ಕೆಸೆವಸ್ಪಷ್ಟಾರ್ಥಮುಟಿವು ನಾಮಾಂತರಿತಂ ।
ಕುಸುರಿಯ ನುಡಿಯೆಂಬಿವು ಭಾ
ವಿಸೆ ಪೇಳಿಕೆಗಳೊಳೆ ಪೇಟ್ಪು ಭೇದಮವಕ್ಕುಂ ॥ ೫೯೪

ಲಕ್ಷ್ಯಂ ॥

ನುನುಳ್ಗೆ ॥

ತಿರಿವುದು ಬೈಕಂಗೊಳ್ಳದು
ಮೊರೆವುದು ಮ ಖಿದುಂಬಿಯಲ್ತು ಕತ್ತರಿ[2]ಗಾಳಂ[2] ।
[3]ಬೆರಸಿ[3] [4]ತನುಗೊಂದಿ[4] ದೊರೆಕೊಂ
ಡಿರೆಯುಂ ಕೆನಱಂಕಮಲ್ಲಿದಾವುದೊ ಪೇಟಂ ॥ ೫೯೫

ಒನ್ನುಡಿಗೆ ॥

[5]ಒಂದು[5] ಗಟಿಗೆಯೊಳೆ ಸಂಪುಟ
ದಂದದೆ ಮಡಿದಿರ್ಪರಹಿತರೆರೆದ ನರರ್ಕೊಂ ।
ಡೊಂದಱೊಳೆ ಮೆಱೆದು ಗಣಪತಿ
ಯಂದದಿನೊಸೆದಿರ್ಪರಿದಿರ್ಗೆ [6]ವಂದಿಂದಿರನಾ[6] ॥ ೫೯೬

---

* ಈ ಶ್ಲೋಕವಲ್ಲಿ ತಪ್ಪುಬಿದ್ದಿರುವಹಾಗಿದೆ. ಓರೆಯು ಪ್ರತಿಯಲ್ಲಿ ಈ ಶ್ಲೋಕವೇ ಇಲ್ಲ. † ದಂಡಿ–III, 97. 1 ಭಾವ್ಯಮನ (ಅ). 2 ಘಾಯಂ (ಅ,ಓ). 3 ಬೆರಸು (ಅ), 4 ತನಗೊಂದಿ, ತಮುಗೊಂದಿ (ಅ). 5 ಒಂಡೆ (ಅ). 6 ವಂದಿಂದಿರನೊಳ್ (ಅ),

ಭೌಮೆಗೆ ॥

ಈನವೀನ[1]ಸಿತಾಂ[1]ಭೋಜಾ
ನೂನಪೀತಾವತಂಸಕಂ ।
ತಾನದೇವುದೊ [2]ಕರ್ಣಾಂತ
ವ್ಯಾನತಾ[2]ಯತಲೋಚನೇ ॥ ೫೯೭

ಅನ್ಯಪಷ್ಟಾರ್ಥಕ್ಕೆ ॥

ದಂಡಿತಾರಾತಿಭೂಧೃ
ತ್ಕಾಂಡಂ ಪೆಚ್ಚಿದಂ [3]ಕರಂ[3] ।
ಗಾಂಡೀವ[4]ಧನ್ವಂ[4] ಮುಂದೆ
ಕಂಡಂ ಭಯಾಕರಮಂ ॥ ೫೯೮

ಉಟಿವಿಂಗೆ ॥

ಉಮೆಗೆ ಮಹೀಜೆಗೆ [5]ಸುಮನೋ[5]
ರಮಣೀ[ಮಣಿ]ನಚ್ಚಿನಾತಿಳೋತ್ಪಮೆಗೊಳ್ಪಿಂ ।
ಸಮನೆನಿಸುವ ಮಂದಾಕಿನಿ
ಯಮುನಾನದಿಸಿಂಧುಸಂಕರಂ ಕಣ್ಗೆಸೆಗುಂ ॥ ೫೯೯

ನಾಮಾಂತರಿತಕ್ಕೆ ॥

ಮೊದಲೊಳೆ ವಿಕಾರಿ ನಾಕಾ
ರದರ್ಶನೀಯಂ ವಿರಾಮದೊಳ್ ಸಾಯಕಮಂ ।
ತದು ತಾಂ ವಿನಿಂದ್ಯಮಲ್ತಾ
ದಿದೇವಪುತ್ರಂ ಸದಾನವಾರಿಪ್ರಮುಖಂ ॥ ೬೦೦

* ಕುಸುರಿಮೊದಲಾದ ಪ್ರಶ್ನೋತ್ತರಪ್ರಕಾರಂಗಳ್ಗಮಿಲ್ಲಿ ಪ್ರಯೋಗಮಂ ಕಂಡು ಕೊಳ್ವುದು.

ಸೂತ್ರಂ ೧೪೨

* [6]ನುಡಿದುದದೆ[6] [7]ಪದವಿಭಂಗತೆ
ಗೊಡಂಬಡಂ[7] ಪಡೆಯೆ ಮಗುಟ್ಟು ಮರ್ಥಾಂತರದೊಳ್ ।
ತೊಡರ್ದು ನಿಲೆ ನುಡಿವ ನುಡಿ ಚೆ
ಲ್ವೊಡರಿಪ ವಕ್ರೋಕ್ತಿ ನಿಯತಕಾಕುಶ್ಲೇಷಂ ॥ ೬೦೧

---

1 ರಸಾಂ (ಬ). 2 ಕರ್ಣಾನದ್ಯಾನತಾ (ಅ). 3 ನರಂ (ಅ). 4 ಧನ್ವನಂ, ಧನ್ವತಂ, ಧನ್ವಂತಾ, ಧನ್ವಂತ (ಅ). 5 ಮಣಿಯಿಗೆ (ಬ), ಮಣಿಯಿಗೆರಮಣಿನಚ್ಚಿನಾ (ಅ), * ದಂಡಿ—III, 125 ; ರುದ್ರಟ—II, 13. 6 ನುಡಿದುದನೆ (ಬ), ನುಡಿದುದೆನೆ (ಅ) 7 ಏಭಂಗದಿನೊಡಂಬಡಂ (ಅ).

ಪ್ರಯೋಗಂ ॥

[1]ಮುತ ಯ್ಯ ಚದುರಿದೇನೆನೆ[1]
ಮುತ್ತಲ್ಲದುದುಂಟೆ ವಸ್ತು ಪೆಱತೆನೆ ಸತಿ [2]ನೀ ।
ಮಿತ್ತರಿಪೆನೆ[2] ಕರಮೊಳ್ಳಿ
ತ್ತಿತ್ತಾಗಡೆ ನಿಮ್ಮೊಳಿರ್ಪೆವೆನೆ ವೃದ್ಧವಿಟಂ ॥ ೬೦೨

ಮುನ್ನಿನ ಕಡನಂ ನೀಂ ಕುಡು
ಮುನ್ನಿಲ್ಲದ ಕಡನನೆಂತು ಪಿಡಿಯೆಂದೀವೆಂ ।
[3]ನಿನ್ನೀ[3]ಪಿಡಿಯೆನೆ ಕುಡು ಕಡ
ನೆನ್ನಂ ಪಿಡಿಯುಳ್ಳೊಡಾನೆಯಾಯೆನೆ ಕೆನ್ನಂ ॥ ೬೦೩

ಕಾಕುವಕ್ರೋಕ್ತಿಗೆ ॥

* ದಾರುಣಮುಂ ಶರಶಲ್ಯಮು
ನೋರಂತಿರೆ ಪುಣ್ಣೊ[4]ಳುಡಿದು[4] ಬಿಡದುಳ್ಕು[5]ವುದುಂ[5] ।
ಸ್ಮೈರಿಸುವರುಮೊಳರೆ ಕೆಲರ್
ಸ್ಮೈರಿಸುವರುಮೊಳರೆ ಖಳರ ಕಟುಕೋಕ್ತಿಗಳಂ ॥ ೬೦೪

ಇದು ಗುಣವಿವೇಕದೊಳ್ ಶಬ್ದಾಲಂಕಾರನಿರ್ಣಯ ಪ್ರಕರಣಂ ದ್ವಿತೀಯಂ.

ಅರ್ಥಾಲಂಕಾರ ಪ್ರಕರಣಂ

ಸೂತ್ರಂ ೧೪೩

† ಪ್ರವರಾರ್ಥಾಲಂಕಾರಂ

ಅರ್ಥಾಲಂಕಾರ ಭಾಗಂಗಳ್ ॥ ವಿವಿಧವಿಕಲ್ಪಪ್ರಪಂಚಿತಂ ಕ್ರಮದಿಂ ವಾ ।
ಸ್ತವಮುಪಮೆಯತಿಶಯಂ [6]ಶ್ಲೇ
ಷ[6]ವೆಂದು ನಾಲ್ಕುಂ ಪ್ರಕಾರದಿಂ ನೆಱೆದಿರ್ಕುಂ ॥ ೬೦೫
ಮತ್ತಮಲ್ಲ ॥

---

1 ಮುತ್ತೈ ದೇವುದುಚದುರಿಗೇ (ಅ), ಮುತ್ತೊಂದೇವುದು ಚದುರಿಗೇ (ಬ). 2 ಕೂರ್ತಿತ್ತರಿಯೆನೆ (ಬ). 3 ನಿನ್ನಿಂ (ಅ). * ರುದ್ರಟ—II, 17. 4 ಳಿಡಿದು (ಅ). 5 ವುದುಂ (ಅ). † ರುದ್ರಟ—VII, 9. 6 ಶ್ಲಿಷ್ಟ (ಬ).

ಸೂತ್ರಂ ೧೪೪

* ವಸ್ತು ಸ್ವಭಾವಕಥನಂ
ವಾಸ್ತವಮುಪಮಾದ್ಯಶೇಷವಕ್ರೋಕ್ತಿವಿಪ ।
ವಾಸ್ತವಂ ಯ್ಯರ್ಹಸ್ತಂ ನಮಸ್ತಲೋಕಮ
ನಸ್ತೋಭನಕಾರಿ ಚಾರುತರ ಪುರುಷಾರ್ಥಂ ॥ ೬೦೬

ಸೂತ್ರಂ ೧೪೫

† ಜಾತಿಸಹೋಕ್ತಿಭಾವಪರಿವೃತ್ತಿ ಯಥಾಕ್ರಮಪರ್ಯ್ಯಯಾವಳೀ
ಹೇತುಸಮುಚ್ಚಯಾನುಮಿತಿಸೂಕ್ಷ್ಮಲವವ್ಯತಿರೇಕದೀಪಕಾ ।
ವಾಸ್ತವ ಭೇದಂ ಖ್ಯಾತಿಸಮಾಹಿತಾವೃತಿಪರಸ್ಪರನಾರನಿಮಿಲನಂಗಳೆಂ
ಗಳ್ ॥ [1]ದೀತೆಱ[1]ದಿಂದ[2]ಮೊಂದಿ[2] ನೆಗಟ್ಟುಂ [3]ನೆಱೆ[3] ವಾಸ್ತವಭೇದವೃತ್ತಿ
[4]ಗಳ್[4] ॥ ೬೦೭

ಸೂತ್ರಂ ೧೪೬

ಜಾತಿಯೆನಿಕುಂ ಸ್ವಭಾವಾ
ಜಾತಿ ಖ್ಯಾತಿ ಯಥಾವಸ್ಥಿತಾರ್ಥವಿಷಯಾರ್ಥಕೃತೋ ।
ದ್ಯೋತನಮವ್ಯೆಪರೀತ್ಯಂ
ಜಾತಿದ್ರವ್ಯಕ್ರಿಯಾಗುಣಪ್ರತಿ[5]ಬದ್ಧಂ[5] ॥ ೬೦೮

ಲಕ್ಷ್ಯಂ ॥

ಜಾತಿಸ್ವಭಾವಾಖ್ಯಾನಕ್ಕೆ ॥

ಸೊಗಯಿಸಿ ತೋರ್ಪ ಸೋಗೆ ಕೊರಲೊಳ್ ಪೊಗರ್ವಟ್ಟೆಸೆದಿರ್ಪ ಕಪ್ಪು ಕೆ
ಯ್ಮೊಗ ಕಡೆಗಣ್ಗಳೊಳ್ ಪೊಳೆವ ಬೆಳ್ಪು ಶಿಖಾಗ್ರದೊಳೊಂದಿದೊಳ್ಪು ಮೆ ।
ಲ್ಪೊಗೆದಿರೆ ಕೇಗುವಿಂಚರದ ನುಣ್ಪು ಮನಂಗೊಳೆ ಚೆಲ್ವನಾಳ್ದು ದೀ
ನಗವನರಾಜಿಯೊಳ್ [6]ಸುಟಿಯು[6]ತಿರ್ಪ ವಿಚಿತ್ರಶಿಖಂಡಿಮಂಡಲಂ ॥ ೬೦೯

ದ್ರವ್ಯಸ್ವಭಾವಾಖ್ಯಾನಕ್ಕೆ ॥

‡ ಕಱೆ ಕೊರಲೊಳ್ ಕಣ್ ನೊಸಲೊಳ್
ಪೆಱೆ ಮಕುಟದೊಳಹಿ[7]ವಿಭೂಷಣಾವಳಿ[7] ತೋಳೊಳ್ ।
ನೆಱೆದಿರೆ ಕರವೆಸೆದಂ ಪಲ
ತೆಱದ ಮರುಳ್ವಡೆಯ ನಡುವುಮಾಪತಿರುದ್ರಂ ॥ ೬೧೦

---

* ರುದ್ರಟ—VII, 10. † ರುದ್ರಟ—VII, 11, 12. 1 ಬೀತೆಱೆ (ಅ). 2 ಮುಂತು (ಓ). 3 ನರೆ (ಅ). 4 ಯೊಳ್ (ಅ). 5 ಬಂಧಂ (ಅ). 6 ಸುಟಿವು (ಓ)
‡ ದಂಡಿ—II, 11, 12. 7 ವಿಭೂಷಣಂನಳಿ (ಅ).

ಕ್ರಿಯಾಸ್ವಭಾವಾಖ್ಯಾನಕ್ಕೆ ॥

ವಳಿಗಳಟಿಯೆ ಬಿಂಕಂಬೆತ್ತ ವೃತ್ತಸ್ತನಂ ಕ
ಣ್ಗೊಳಿಸೆ ತೊಳಗೆ ಬಾಹಾಮೂಲಮೂರುದ್ವಯಂ ನಂ ।
ಚಳಿಸೆ ನಿಜಪದಾಂಗುಷ್ಠಾಗ್ರದಿಂ ನಿಂದು ಕಣ್ಗಳ್
ಪೊಳೆಯೆ ಮಿಳಿರ್ವ ಕೊಂಬಂ ನಿಳ್ಕಿ ಪೂಗೊಯ್ದೊಳರ್ವಳ್ ॥ ೬೧೧

ಗುಣಸ್ವಭಾವಾಖ್ಯಾನಕ್ಕೆ ॥

* ಮನದೊಳ್ ಮುದಮಂ ಕೋಮಳ
ತನುವಿನೊ[1]ಳತ್ಯಂತ[1]ರೋಮಹರ್ಷಣಮಂ ಕ ।
ಣ್ಗಿನಿಸಿನಿ[2]ಸಾಮೊಳನ[2]ಮಂ
ಜನಿಯಿಸುತುಂ [3]ಪ್ರಿಯೆಯ[3] ಸೋಂಕು ಪಡೆದುದಲಂಪಂ ॥ ೬೧೨

ಸೂತ್ರಂ ೧೪೭

ಸಹೋಕ್ತಿ ಭಾವಂ

† ಸಮಕಾಲಮಪ್ಪು ವೆರಡ
ರ್ಥಮನೊಡನೆಯೆ [4]ಪೇಳ್ವುದದು[4] ಸಹೋಕ್ತಿ ವಿತರ್ಕ ।
ಕ್ರಮದಿಂದರ್ಥಾಂತರಮಂ
ಸಮನಿಸುವೊಂದುಕ್ತಿ ಭಾವಮೆನೆ ಪೆಸರ್ವಡೆಗುಂ ॥ ೬೧೩

ಲಕ್ಷ್ಯಂ ॥

ಸಹೋಕ್ತಿಗೆ ॥

ಅಲರ್ದುಪೊಡನೊಡನೆ ಕುವಲಯ
ಕುಲಮುಂ ಕುಲಟಾಮುಖಂಗಳುಂ ಮುಗಿದುವು ನಿ ।
ಶ್ಚಲಯೋಗನಿರತನಂಧ್ಯಾಂ
ಜಲಯುಂ ನರಸಿರುಹವನಮುಮೊಡನೊಡನಾಗಳ್ ॥ ೬೧೪

ಬಿರಯಿಗಳ ಸುಯ್ಗಳೊಡನೆಯೆ
ಪಿರಿಯವು ದೆವನಂಗಳಾದುವವಱವಱ ಪರಿ ।
ಸ್ಫುರಿತಂಗಳೊಡನೆ ಕುಂದಿದು
ವಿರುಳ್ಗಳುಂ [5]ಮುಂಚಿ[5] ಬಂದ ಜಳದಾಗಮದೊಳ್ ॥ ೬೧೫

---

* ದಂಡಿ—II, 12, 11. 1 ಳಂತಂತೆ (ಅ). 2 ಸುನ್ಮೀಳನ. 3 ಪ್ರಿಯುನ (ಅ.ಓ). † ರುದ್ರಟ—VII, 17, 40. 4 ಪೇಡ್ವೊಡದು. 5 ಮುಂಚೆ (ಅ.ಓ).

ಭಾವಕ್ಕೆ ॥

* ಪಡುವಳ್ ಕೀಟಲೊಳೆಮ್ಮ ತೊಟ್ಟು ಪಡುವಳ್ ಮುತ್ತಡ್ಡಿಯಾಕೋಣೆಯೊಳ್
ಪಡುವಂ ಶಕ್ತಿವಿಹೀನನಂಧಬಧಿರಂ ಕೇಳಜ್ಜನೀಬಾಗಿಲೊಳ್ ।
ಪಡುವೆಂ [1]ಬಾಲೆಯೆನೊರ್ವ[1]ಳಿಲ್ಲಿ ಮನೆಯಾಣ್ಮಂ ಪೋದನಿಂದೂರ್ಗೆ ನೀಂ
ಪಡಲೆಂದೆಂತೆಡೆವೇಡುವಯ್ ಪಥಿಕ ಮತ್ತೀ ಪೊಟ್ಟುಱೊಳ್ [2]ಗಾಂಪನೇ[2] ॥

ಸೂತ್ರಂ ೧೪೮

† ಒಂದಂ ಕೊಟ್ಟೊಂದಂ ಕೊ
ಪರಿವೃತ್ತಿ ಯಥಾಕ್ರಮಂ [3]ಳ್ವಂದಂ[3] ಪರಿವೃತ್ತಿಯೆಂಬುದಕ್ಕುಂ ತರದಿಂ ।
ದೊಂದಿರೆ ನಿರ್ದೇಶಸ್ಥಿತಿ
ಯಿಂದಂ ಪೇೞ್ವುದು ಯಥಾಕ್ರಮಂ ಮುನಿಮತದಿಂ॥ ೬೧೭

ಲಕ್ಷ್ಯಂ ॥

ಪರಿವೃತ್ತಿಗೆ ॥

ಬಿಳಿಯಲರ್ಗಣ್ಗಳ್ ಬೆಳ್ಪಂ
ಲಲನಾಜನದಧರ[4]ಮಣಿಗೆ[4] ಕೊಟ್ಟದಱ ಪುದುಂ ।
ಗೊಳಿಸಿದ ಕೆಂಪಂ ನೀರ್ವೊರ್ವೀ
ಕುಳಿಯೊಳ್ ಮಾಱುಮಾಡಿ ಕೊಂಡ ತೆಱದಿಂ ತೋರ್ಕುಂ ॥ ೬೧೮

ಯಥಾಕ್ರಮಕ್ಕೆ ॥

ಇದು [5]ನಿನ್ನರ್ಚಿಸಿದ[5]ಕ್ಷುಚಾಪಮಿದು ನಿನ್ನೀಲೋಕಮಂ ಕೆಯ್ಗೆ ಮಾ
ಡಿದ ಪುಷ್ಪಾಸ್ತ್ರಮಿದಲ್ತೆ ನಿನ್ನ ವಿಜಯಪ್ರಾರಂಭದೊಳ್ ತೋರ್ಕೆಗೆ ।
ತ್ತಿದ [6]ಜ್ಯೈತ್ರ[6]ಧ್ವಜಮೆಂದು ತೋರ್ಪ ತೆಱದಿಂ ಭ್ರೂರಾನ್ಯಮಂ ನೀಳ್ದಪಾಂ
ಗದ ಬೆಳ್ದಿಂಗಳನೆಡ್ಡಮಪ್ಪ ಕಬರೀವಿನ್ಯಾಸಮಂ ತೋಱುದೆಳ್ ॥ ೬೧೯

‡ ಅವಿಹಿತ[7]ವೇಗ[7]ಮೇದ್ಗಯ ಜವಂ ವ್ರಣಮಕ್ಷತಕಾಯಮೆತ್ತಿ ಕ
ಟ್ಟುವ ಮದಮುಣ್ಮಿ ನೋರ್ವ ನೊನೆ ಬೀೞ್ವ ಗಜಧ್ವಜಮಂಬರಕ್ಕೆ ನಿ ।
ಳ್ಕುವ ಜಯಕೇತು ನಂದೆಯದ ದಂದುಗಮಂ [8]ಕಿಡಿಸಿತ್ತು[8] ಮುಂದಣೋ
ಡುವ ರಿಪುದಂತಿಗಂ ಪೆಱಿಗಣಟ್ಟುವ [9]ಱುಟ್ಟರ[9]ಮೇರುದಂತಿಗಂ ॥ ೬೨೦

---

* ರುದ್ರಟ—VII, 41. 1 ಬಾಲಕಿಯೊರ್ವ (ಅ). 2 ಗಾಂಪಿನಿಂ (ಓ).
† ದಂಡಿ—II, 351; ಯಥಾನಂಖ್ಯವೇ ಯಥಾಕ್ರಮಂ II, 273; ರುದ್ರಟ—VII, 34. 3 ಳ್ವಂದದು (ಓ). 4 ರುಚಿಗೆ (ಅ). 5 ನೀನರ್ಚಿಸುವಿ. 6 ಮಾನ (ಅ).
‡ ಈ ಪದ್ಯಕ್ಕೆ ಹಿಂದೆ "ಎರಡಱೊಳ್ ಬಹುಳ ನಿಶ್ಚಯಶಬ್ದಮದಕ್ಕೆ ಲಕ್ಷ್ಯಂ" ಎಂದು ಓಲೆ ಪ್ರತಿಯಲ್ಲಿದೆ. 7 ಸೇಕ, ಶೀತ (ಅ). 8 ಬಿಡಿಸಿತ್ತು (ಅ). 9 ರಟ್ಟದ (ಅ).

ವ॥ ಇಲ್ಲಿ ಕೆಲರ್ ವ್ಯುತ್ಕ್ರಮಗಣನೆಯಿಂದೆ ನಿಂದಿತಕ್ರಮವೆಂದು ಪೇಳ್ವರ್.

ಸೂತ್ರಂ ೧೪೪

* ನುಡಿಯದೆ ಮನದರ್ಥಮನದು

ಪರ್ಯಾಯಂ ಆವಳಿ

[1]ನುಡಿದಂ[1]ತಿರೆ [2]ನುಡಿದ[2] ನುಡಿಯೆ ಪರ್ಯಾಯಂ ಮ ।
ತ್ತ ಡಕಿಲ್ಲೊಳೆ ಪಲವುಮನೊಂ
ದೆಡೆಯೊಳ್ ಸಮಗೊಳಿಸಿ ಪೇಳ್ವುದಾವಳಿ ಪೆಸರಿಂ ॥ ೬೨೧

ಲಕ್ಷ್ಯಂ ॥

ಪರ್ಯಾಯಕ್ಕೆ ॥

ಬನದೊಳಗೆ [3]ನೋಡಿ[3] ಪೊಸ[4]ವೂ
ವಿನ[4] ಗೊಂಚಲನಕ್ಕ ನಿನಗೆ ತಂದಪ್ಪೆಂ ನೀ ।
ನಿನಿತೊಂದು [5]ಬೇಗಮಂ[5] ನಿ
ನ್ನಿನಿಯನ ಪಕ್ಕದೊಳಿರೆಂದು ಸಖಿ ತೊಲಗುವುದುಂ ॥ ೨೨

ಆವಳಿಗೆ ॥

† ಕೊಳಗಳ್ ದಳಿತಾಬ್ಜಂಗಳ್
ದಳಿತಾಬ್ಜಂಗಳ್ ಸಮೃದ್ಧಮಧುಗಳ್ ಮಧುಗಳ್ ।
ಚಳದಳಿಕುಳಾಕುಳಂಗಳ್
ವಿಳಸದಳಿಪ್ರಕರಮಧುರವಿರುತಿಯೆ ಬನದೊಳ್ ॥ ೬೨೩

‡ ಆವಳ್ಯಪೋಹಕ್ಕೆ ॥

ಕಳರುತಿಯಿಲ್ಲದ ಮಧುಪಾ
ವಳಿ ಮಧುಕರನಿಕರಮಿಲ್ಲದಂಬುರುಹವನಂ ।
ಜಳರುಹಮಿಲ್ಲದ ತಿಳಿಗೊಳ
ನಲರ್ದ ಸರಃ[6]ಪ್ರಸರ[6]ಮಿಲ್ಲದೂರಿಲ್ಲದಱೊಳ್ ॥ ೬೨೪

ಸೂತ್ರಂ ೧೫೦

§ ಹೇತುಮದಾಖ್ಯಾನಂ ಸಹ

ಹೇತು ಸಮುಚ್ಚಯಂ

ಹೇತುಕಮದು ಹೇತುವೆಂಬಲಂಕೃತಿಯಕ್ಕುಂ ।
ಮಾತೇಂ ಬಹುಸಂಕಥನಂ
ಜಾತಿದ್ರವ್ಯಾದಿಕಂ ಸಮುಚ್ಚಯ[7]ಮಕ್ಕುಂ[7] ॥ ೬೨೫

---

* ದಂಡಿ—II, 295; ರುದ್ರಟ—VII, 42, 109. ಆವಳಿಗೆ ಏಕಾವಳಿಯೆಂಬ ಹೆಸರುಂಟು. 1 ನುಡಿವಂ (ಅ). 2 ನುಡಿವ (ಅ). 3 ಪೋಗಿ (ಅ). 4 ಮಾವಿನ (ಅ). 5 ಬೇಗದಿಂ (ಅ). † ರುದ್ರಟ—VII, 110, 111. ‡ ಆವಳಿಗೆ ಉದಾಹರಣೆಯನ್ನು ಕೊಡುವಾಗ ಪೊದಲು ' ಎದಿಗೆ " ಎಂದಿದ್ದು, ಮುಂದೆ " ಅಪೋಹಕ್ಕೆ " ಎಂದಿದ್ದರೆ ಸ್ಪಷ್ಟವಾಗುತ್ತಿತ್ತು. 6 ಪ್ರತತಿ (ಅ). § ರುದ್ರಟ—VII, 82. 7 ಮೆನಿಕುಂ (ಅ).

ಲಕ್ಷ್ಯಂ ॥

ಜ್ಞಾಪಕಹೇತುಗೆ ॥

ತಿವಳಿಯೊಳ್ ಮಿಡುಕಾಱಿದ ಮಣ್ಣಿಂದಿಕ್ಕಿದ ಲಂಡದ ಬೆಂಕೆಯಿಂ
ಕವಿವ ಕಿಟ್ಮದದೊಳ್ಪೊನಲೊಳ್ ನುಯ್ಯಾಱಿದ [1]ಪೆರ್ನೊರೆ[1]ಯಿಂ ತಗು ।
ಳ್ದವಿಹತಾಂಬುವ ಬಲ್ಪೊನಲಿಂದಿರ್ಪಾಱಿದ ಬಚ್ಚೆಯೊಳೊಕ್ಕ ಪ
ಲ್ಲವನಿಕಾಯದಿನಂದಱಿದಂ ಕಾಡಾನೆಗಳಾಗಡೆ ಪೋದುದಂ ॥ ೬೨೬

ಕಾರಕಹೇತುಗೆ ॥

ಪಂದಿಯಿಂ ಕೆದಱಿದುತ್ಪಳಮುಂ ವನದಂತಿಯಿಂ
ನೊಂದು ನೂಸಿದ ನರೋಜಮುಮೊಯ್ಯನೆ ನೀರುಣರ್ ।
ಬಂದು ಪೋದ ಮೃಗದಗ್ರ್ಯಖುರಚ್ಯುತವಾರಿಯಿಂ
ನಾಂದೆರಬ್ಬುಡಿಯುಮಿಂಬು ತದಗ್ರಿಮಭಾಗದೊಳ್ ॥ ೬೨೭

ಪರಂಪರಿತಹೇತುಗೆ ॥

* ವಿನಯಮನಿತ್ತು ದಿಂದ್ರಿಯಜಯಂ ವಿನಯಂ ಗುಣಸಂಪದಂಗಳಂ
ಜನಿಯಿಸಿದತ್ತು ಸದ್ಗುಣಗಣಂ ಪಡೆದತ್ತು ಜನಾನುರಾಗಮಂ ॥
ಜನದನುರಾಗಮಾಗಿಸಿದುದಾ [2]ವಗಮಿದ್ಧವಿ[2]ಶುದ್ಧಕೀರ್ತಿಯಂ
ತನಗೆನೆ ರಾಜ್ಯಲಕ್ಷ್ಮಿಯನನುಷ್ಠಿಸಿದಂ ನಯದಿಂ ಯುಧಿಷ್ಠಿರಂ॥ ೬೨೮

ಅಭಾವಹೇತುಗೆ ॥

† ಅವಿನಯದಿನನಿಂದ್ರಿಯವ
ರ್ಗವಿಜಯದಿನ [3]ಬುಧವಿಶಿಷ್ಟ [3]ಸಂಭಾವನೆಯಿಂ ।
ವಿವಿಧವ್ಯಸನಂಗಳ್ ಸಂ
ಭವಿಸುಗುಮಾರ್ಗಂ ವಿಶಿಷ್ಟವಿದ್ವಿಷ್ಟಂಗಳ್ ॥ ೬೨೯

ಸಮುಚ್ಚಯಕ್ಕೆ ॥

ನೃಪನ ದಯೆಯುಂ ನಚ್ಚುಂ ತನ್ನಣ್ಮ [4]ಮಾರ್ಪದು[4]ಮಾಂತ ಭೂ
ಪಿಪನ ಮನದೊಂದುರ್ಕುಂ ಸೊರ್ಕುಂ ಬಿಗುರ್ತಿರವುಂ ನಿಜ ।
ದ್ವಿಪಹಯರಥಾನೀಕಾನೇಕಪ್ರಧಾನರ ನಾವುಮಾ
ತಪನತನಯಂಗಾಗಳ್ ಕಾಯ್ಪುಂ ನಿಮಿರ್ದುವಾಜಿಯೊಳ್ ॥ ೬೩೦

ಕೃತಮಣಿವಿಭೂಷಣಂಗಳ
ನತಿಶಯಿಸಿದುವವರ ಕೊರಲೊಳಂ ತೋಳೊಳ[5]ಮು ।
ತ್ಥಿತ[5]ಮಾಗಿ ಭೂಷಣಂಗಳ್
ನಿತಂಬಮಂಡಳದೊಳಂ ಕುಚಾಭೋಗದೊಳಂ ॥ ೬೩೧

---

1 ಪೊನ್ನೊರೆ (ಅ). * ರುದ್ರಟ—VII, 85. 2 ಮಿಂತು (ಓ). † ದಂಡಿ—II, 247. 3 ಬುಧವಿತರ್ಕ (ಓ). 4 ಮಾರ್ಪುದು (ಅ), ಮಾಳ್ಪುದು (ಓ). 5 ಮುದ್ಧತ (ಅ).

ಕೊಡೆ ಗುಡಿ ತೋರಣಂ [1]ದಧಿ[1] ಮಧುದ್ರವಮಚ್ಚಗಱುಂಕೆ ರಾಜೆ ನಂ
ಗಡಮಲರಕ್ಷತಂ ಬಿಳಿಯ ನಾನವೆ ಪೊಂಗೊಡನಪ್ಪೆ ಶೋಭೆ ಕ ।
ನ್ನಡಿ ಕಡೆ ವರ್ಧಮಾನಪಟಹಂ ತಿಱೆ ಮಂಗಳಗೀತನಾದಮೆ
ರ್ದೆಡೆಗಳೊಳಲ್ಲಿಗಲ್ಲಿಗಧಿಕಂ ಪಡೆದತ್ತು ಜನಾನುರಾಗಮಂ ॥ ೬೩೨

ಆಟಂ ಬಾಜನೆ ಗಾಡಿಗಳ್ ಪಸದನಂ ಬೆಳ್ದಿಂಗಳೊಳ್ಪಾತು ಕೊಂ
ಡಾಟಂ ಕತ್ತುರಿ ಕಪ್ಪುರಂ ನಗೆ ತೆಗಪ್ ಪಾಟಂ ಬಿಯಂ ಜವ್ವನಂ ।
ನೋಟಂ ತಂಬುಲಮಿಂಪು ಕಂಪು ವಿಧವಂ ಪೆಯ್ಮೀಳಮೆಂದಿಂತಿವಂ
ಬೇಟಕ್ಕಾಗರಮೆಂಬೆನಣ್ಣ ಸುಸಿಲೇಂ ಪೇೞ್ದಾಗದೊಳ್ ತೀರದೇ ॥ ೬೩೩

ಸೂತ್ರಂ ೧೫೧

* ಸಾಧನಮಂ ಸಾಧ್ಯಕ್ಕವಿ
ಅನುಮಿತಿ ರೋಧಿಯನಱಿದೂಹೆಗೆಯ್ವುದನುಮಿತಿಯೆನಿಕುಂ ।
ಸೂಕ್ಷ್ಮಂ ಸಾಧುಸಮಾಧಿಪರೇಂಗಿತ
ಬೋಧಂ ನಿ[2]ರ್ವಾದ[2]ಮಪ್ಪುದಂತದು ಸೂಕ್ಷ್ಮಂ ॥ ೬೩೪

ಲಕ್ಷ್ಯಂ ॥
ಅನುಮಿತಿಗೆ ॥

ಎಳಮಿಂಚಿಲ್ಲಕ್ಕುಮಾಖಂಡಲಲಲತಧನುರ್ದಂಡಮಿಲ್ಲಕ್ಕುಮಭ್ರಾ
ವಳಿಯಿಲ್ಲಕ್ಕುಂ ಕದಂಬಾನಿಲನ[3] ಸುಟಿವದಿಲ್ಲಕ್ಕು[3]ಮುದ್ಯನ್ಮಯೂರೀ ।
ಕುಳಲೀಲಾತಾಂಡವಾಡಂಬರವಿಳಸನಮಿಲ್ಲಕ್ಕು[4]ಮಿಂತಾ[4]ಮಹೀಮಂ
ಡಳದತ್ತರ್ ನಲ್ಲನಂತಲ್ಲದೊಡೆ ತಡೆದದೇಕಿರ್ಪನಿಂದರ್ತೆ ಬರ್ಪಂ ॥ ೬೩೫

† ಅದಲ್ಲದೆಯುಂ ॥

ಬೆಸದಿರೆ ನಿನ್ನೋಪಳ ಕಾ
ಲ್ಗಸವಸದಿಂದೆಱಗಿ ತಿಳಿಪಿದಯ್ ನಿರ್ವ್ಯಾಜಂ ।
ನೊಸಲೊಳ್ ನಿಸದಮಲಕ್ತಕ
ರಸತಿಲಕ[5]ಮದಿಲ್ಲ[5]ದಂದದೇಕಿಂತಕ್ಕುಂ ॥ ೬೩೬

ಸೂಕ್ಷ್ಮಕ್ಕೆ ॥

‡ [6]ಪಗಳ್[6] ನಮಗಕ್ಕುಂ ನಂ
ಯೋಗಮೆನರ್ ಬಗೆವ ನಲ್ಲನಂ ಕುಱುತು ಮನೋ ।
ರಾಗದಿನೊಡರಿಸಿದಳ್ ಚೆ
ರ್ವಾಗಿರೆ ಪೆಱೆಗೊರ್ವಳಬ್ಬದಳಮುಕುಳನಮಂ ॥ ೬೩೭

---

1 ಘನ (ಓ). * ದಂಡಿ—II, 260. 2 ರ್ಬಾಧ (ಓ). 3 ನೆಸಗುವು (ಓ.ಅ). 4 ಮಂತಾ (ಅ). † ರುದ್ರಟ—VII, 57. 5 ಮದಲ್ಲ (ಅ). ‡ ದಂಡಿ—II, 261. 6 ಅಗಳ್ (ಓ).

ಅಂತುಮಲ್ಲದೆಯುಂ ॥

* ವಿನಯೋಪಚಾರವಚನಮು
ಮನುಕೂರಾಚರಣಮುಂ ವಿಭಿನ್ನಾನನಮುಂ ।
ಮನದೊಳಗೆ ಪುದಿದು ಪೊಣ್ಮಿದ
ಮುನಿಸಂ ಕನ್ನಡಿಪು[1]ವಾಗೆ[1] ಬಗೆವೆಂ ಪ್ರಿಯೆಯೊಳ್ ॥ ೬೩೮

ಸೂತ್ರಂ ೧೫೨

† ಗುಣಮನೆ ತರ್ಪುದು ದೋಷದ
ಗಣನೆಗೆ ದೋಷಮುಮನಿನಿಸು ಗುಣಗಣನೆಗೆ ತಂ ।
ದೊಣರ್ವುದು ಲೇಶಂ ವಿಬುಧಾ
ಗ್ರಣಿಗಳ್ ಕೆಲಬರ್ ‡ ನಿಗೂಹ[2]ನಂ[2] ಲವಮೆಂಬರ್ ॥ ೬೩೯

ಲೇಶಂ ಅಥವಾ ಲವಂ

ಲಕ್ಷ್ಯಂ ॥

ಲೇಶಕ್ಕೆ ॥

ಒಡನಿರ್ದಗಲ್ಕೆಯಾದೊಂ
ದೆಡೆಯೊಳ್ ದುಃಖಮನಸಹ್ಯಮಂ ಮಾಬ್ಬುದಱಿಂ ।
ನುಡು ನುಡು ಸಜ್ಜನರಪ್ಪವ
ರೊಡಗೂಟಮ[3]ನಕ್ಕ[3] ಖಳರ ಕೂಟಮೆ ಸುಖದಂ ॥ ೬೪೦

ನಿಗೂಹನಕ್ಕೆ ॥

ಪರಿವಿಡಿಗೆಯ್ಯೆ ಸೊಂದಿಗಿಳಿ ತಂದೆಯ ತಾಯ ಸಮೀಪದೊಳ್ ತನೂ
ದರಿಯ ರತೋಪಯುಕ್ತರುತಿಯಂ ವಿನತಾನನೆ ನಾಣ್ಚಿ[4]ತಾಳತ ।
ತ್ಪರ[4]ಶಿಶುನರ್ತನಪ್ರಹತಕಂಕಣಝಂಕೃತಹಸ್ತತೂರ್ಯನಿ
ರ್ಭರರವದಿಂದದಂ ಮಱಿಸಿದಳ್ ಗಡ ಮುಗ್ಧೆಯದೇಂ ವಿದಗ್ಧೆಯೋ ॥ ೬೪೧

ಸೂತ್ರಂ ೧೫೩

§ ವ್ಯತಿರೇಕಮುಭಯಸಾಮ್ಯ
ಪ್ರತೀತಿಯಂ ತೋಱಿ ಭೇದಮಂ ಮಾಬ್ಪುದು ॥ ಸಂ ।
[5]ಗತಿಯಿಂದಂ ಮಧ್ಯಾಂತ[5]
ಸ್ಥಿತಮಾಗಿ ಬೆಳಪ್ಪುದಱಿಗೆ ದೀಪಕಮಕ್ಕುಂ ॥ ೬೪೨

ವ್ಯತಿರೇಕಂ ದೀಪಕಂ

---

* ರುದ್ರಟ—VII, 58. 1 ವಾಗಿ (ಅ). † ರುದ್ರಟ—VII, 100. ‡ ದಂಡಿಯಮತ : ದಂಡಿ—II, 265. 2 ಮಂ (ಅ). 3 ನಕ್ಕೆ (ಬ). 4 ತೋಳತಳ್ಪದ, ಕಾಮತತ್ಪರ (ಅ), ತೋಳತಳ್ಪುರು (ಅ.ಇ). § ದಂಡಿ—II, 180. ॥ ರುದ್ರಟ—VII, 64, 65. 5 ಗತಿಯಾದಿಮಧ್ಯಮಂತ (ಅ).

ಲಕ್ಷ್ಯಂ ॥

ವ್ಯತಿರೇಕಕ್ಕೆ ॥

ಗಂಭೀರಮಮಳಲಕ್ಷ್ಮೀ
ಸಂಭವಪದಮಧಿಕಸತ್ವಮಾಗಿಯುಮೆಯ್ದ ।
ಲ್ಕಂಭೋಧಿ ನೆಱೆದು[1] ದಿಲ್ಲವ[1]
ನಂ ಧಾನುರನಿಶಿತಮತಿಯನತಿಕಲುಷಜಡಂ ॥ ೬೪೩

ವಸುಧೆಗೆ ನಂದಹೀನರಿಪುವರ್ಗಮನೋಡಿಸಿ ಚಕ್ರಿ ಮೆಚ್ಚಿ ಬ
ಣ್ಣಿಸೆ ಪತಿಥಕ್ತಿಯಂ ಮೆಱೆದು ಮಂತ್ರಪದಕ್ಕಧಿನಾಥನಾಗಿ ಪೆಂ ।
ಪೆಸವಿನಮಾರೊಳಂ ವಿಮುಖವೃತ್ತಿಯೊಳೊಂದದ ಪಕ್ಷಪಾತದಿಂ
ದೆಸಗದ ಪೈನತೇಯನಿವನೆಂಬುದು ನಾಹಸವೈನತೇಯನಂ ॥ ೬೪೪

ವಾರಿಜಗಂಧಿ ವಿಭಾತನ
ಮಾರಂ ನಿಜಸುರಭಿ ನಿನ್ನ [2]ಸುಯ್ಯಿದಱೊಳದಂ[2] ।
ತೋರಗೆಯಕ್ಕುಮೆ ಪರಗುಣ
ಹಾರಿಗೆ ನಿಜಗುಣ[3]ಮದೇಕೆ[3] ಸಮನಿಸಿದಪುದೋ ॥ ೬೪೫

ಕಾರಕದೀಪಕಕ್ಕೆ ॥

ನವಜಳದಾಗಮಮಿಂತೀ
ಧುವನಜನಕ್ಕೆಲ್ಲಮೆಯ್ದೆ ಮಾಡಿದುದಧಿಕೋ ।
ತ್ಸವಮಂ ಮತ್ತಂತದೆ ತಾಂ
ಪ್ರವಾಸಿಗಳ್ಗರ್ದಿಯೊಳೊದವಿಸಿತ್ತದವಟಲಂ ॥ ೬೪೬

ಓಸರಿಸಿದ ಜವನಿಕೆಯೊಡ
ನೋಸರಿಸಿದನಿಸರೆ ಕಂತು [4]ಕುಸುಮಾಂ[4]ಜಲಯಂ ।
ನೂಸಿದ ಪದದೊಳ್ ಸಭೆಗಂ
ನೂಸಿದ[5]ನೊಡನೊಡನೆ[5] ನನೆಯ ಮೊನೆಯಂಬುಗಳಂ ॥ ೬೪೭

ಆವರಿಸಿತ್ತೊ ನಭೋಂತ
ರ್ಭೂವಿವರಮನಮರ್ದಿನೆನಕವೆನೆ ಬಿರಯಿಗಳೋ ।
ವ್ಯೋವಿದು ಮದನನ ಸೋದನ
ದೀವಿಗೆಯೆನೆ ತೊಳಗಿ ಬೆಳಗಿದಂ ತುಹಿನಕರಂ ॥ ೬೪೮

ಕ್ರಿಯಾದೀಪಕಕ್ಕೆ ॥

ಸೊಗಯಿಸಿದುದು ಕಾರ್ಗಾಲದ
ಪುಗಿರೊಳ್ ಜಲಜಲನೆ ಪರಿಯುತಿಪ್ಪೊಳ್ವೊನಲುಂ ।

---

1 ದಿಲ್ಲನ (ಅ). 2 ಸುಯ್ಯದಱೊಳಗಂ (ಅ), ಸುಯ್ಯಿದಱೊಳಗಂ (ಓ).
3 ನೊಳಕ್ಕೆ, ದೊಳಂತೆ (ಅ). 4 ಪುಷ್ಪಾಂ (ಅ.ಓ). 5 ನೊರ್ಮೊದಲೆ (ಅ).

ಮುಗಿಲ ಪೊರೆಪೊರೆಗಳೊಳ್ ಪೊಳೆ
ದೊಗೆವ ಚಳಚ್ಚಟುಳತಗತಟಿದ್ವಿಳಸನಮುಂ ॥ ೬೪೯

ಧರೆಯಂ ಪೆಟ್ಟದೆ ಪೆಟ್ಟುವ
ಸುರಲಲನಾನೃತ್ಯಮಿತ್ತ ಲಭವನ ಸಭೆಯೊಳ್
ಕರಮೆಸೆದುದು [1]ವಾರ[1]ಸ್ತ್ರೀ
ಪರಿನರ್ತನಮತ್ತ ಲಾ ಮಹೀಶನ ಸಭೆಯೊಳ್ ॥ ೬೫೦

ಕುಳಿರ್ವೆಲರುಮಾಲನೀರುಂ
ತಳಿರ್ವಾನುಂ ಚಂದ್ರಕಾಂತಮುಂ ಚಂದನಮುಂ ।
ಕೊಳನುಂ ನಂದನವನಮುಂ
[2]ಕಳೆಯವೆ[2] ಬೇಸಗೆಯೊ[3]ಳೆನ್ನ[3]ಬೇಟದ ನೂಡಂ ॥ ೬೫೧

ಸೂತ್ರಂ ೧೫೪

* ಸಮನಿಸಿ ಬಿದಿವಸದಿಂದಂ

ಸಮಾಹಿತಂ ಅವೃತ್ತಿ — ಸಮಾಹಿತಂ ಬರ್ಪೊಡದು ಸಮಾಹಿತಮೆನಿಕುಂ ।
[4]ಸಮಗೊಂಡ[4]ರ್ಥಪದಾವೃ
ತ್ತಿ ಮತ್ತದಾವೃತ್ತಿಯೆಂಬ ಪೆಸರಂ ಪಡೆಗುಂ ॥ ೬೫೨

ಲಕ್ಷ್ಯಂ ॥

ಸಮಾಹಿತಕ್ಕೆ ॥

ಕಡುಗಬ್ಬುಲೆಯೊಳ್ ಪ್ರಿಯನಿ
ರ್ದೆಡೆ[5]ಗಾಗಿಯೆ[5] ಪೋಗರೆಂದು ಮನೆಯಂ ಪೊಱಮಿ ।
ಟ್ಟಡಿಯಿಡಲಱಿಯದೆ ಮಱುಗುವ
ಮಡದಿಗೆ ಬಗೆ ತೀರೆ ಮಿಂಚು ಮಿಂಚಿದುದಾಗಳ್ ॥ ೬೫೩

† ಮುಳಿದಿರೆ ನಿಜವಲ್ಲಭೆಯಂ
ತಿಳಿಪಲ್ ಕಾಲ್ಗೆಱಗಲಿನಿಯನಿರ್ಪವಸರದೊಳ್ ।
ಜಳಧರನಿನದಂ [6]ನೆಗೆದುದು[6]
ತಳಮಳ[7]ಗುತ್ತಾ[7]ಕೆ ತಾನೆ ಬಿಗಿಯಪ್ಪುವಿನಂ ॥ ೬೫೪

---

1 ದೇವ (ಓ). 2 ಕಳೆಯವೆ (ಅ). 3 ಳೆನಗೆ (ಅ). * ದಂಡಿ—II, 298; II, 116. 4 ಸಮಕೊಂಡ (ಅ). 5 ಗಾಗಿರ (ಅ). † ದಂಡಿ—II, 299. 6 ನೆಗ ಬ್ದುದು (ಅ). 7 ಗಾದಾಕೆ, ಗಾಗಾಕೆ (ಅ).

ಆವೃತ್ತಿಗೆ ॥

* ಅಲರ್ದುವು ಕುಟಜಂಗಳ್ ಪೂತುವಿಂಬುಪ್ಪಿನಂ [1]ಕಂ
ದಲ[1] ಕಾನುಮಿಸಿದತ್ತು ದ್ಗಾಮನೀಪಾವನೀಜಾ ।
ವಲಿ ಬಿರಿದುವೆ ಜಾತೀಯೂಥಿಕಾಕೇತಕೀಸಂ
ಕುಲಮವಿರಲಗಂಧಾಮೋದಿತಾಶಾಂತರಾಲಂ ॥ ೬೫೫

ಪಡೆಗುಂ ಮಹಿಮೋನ್ನತಿಯಂ
ಪಡೆಗುಂ [2]ಸನ್ಮಾರ್ಗ[2]ದೆಸಕಮಂ ಗುಣದೊಳ್ಪಂ ।
ಪಡೆಗುಂ ನಿರ್ಮಳಯಶಮಂ
ಪಡೆಗುಂ ಪಡೆಗುಂ ವಿಭುತ್ವಮಂ ಬುಧಸಂಗಂ ॥ ೬೫೬

ಕಲಿ ಪಾರ್ಥಂ ಪಾರ್ಥನಿಂದಂ ಕಲಿ ರವಿತನಯಂ ಪಾರ್ಥನಿಂ ಕರ್ಣನಿಂದಂ
ಕಲಿ ಭೀಮಂ ಪಾರ್ಥನಿಂ ಕರ್ಣನಿನನಿಲಜನಿಂ ರಾಘವಾಧೀಶಧೃತ್ಯಂ ।
ಕಲಿ ಶಕ್ರಾಪತ್ಯನಿಂ ಕರ್ಣನಿನನಿಲಜನಿಂದಂಜನಾಪುತ್ರನಿಂದಂ
ಕಲಿ ಧಾತ್ರೀಚಕ್ರದೊಳ್ ವಿಕ್ರಮಗುಣನಿಳಯಂ ವೀರಮಾರ್ತಂಡದೇವಂ॥ ೬೫೭

ಸೂತ್ರಂ ೧೫೫

† ಇತರೇತರಕಾರಕನಂ

ಪರಸ್ಪರಂ ಸಾರಂ

ಪ್ರತಿಪತ್ತಿ ಪರಸ್ಪರಂ ಸಮೂಹದೊಳೆಸೆವೊಂ ।
ದತಿಶಯಗುಣದಿಂ ನಿರ್ಧಾ
ರಿತಮಪ್ಪುದು ಸಾರಮೆಂಬ ಸದಲಂಕಾರಂ ॥ ೬೫೮

ಲಕ್ಷ್ಯಂ ॥

ಪರಸ್ಪರಕ್ಕೆ ॥

ಸರಿಗೆಗೆ ಕೊರಲ್ ಕೊರಲ್ಗಂ
ಸರಿಗೆಯಲಂಕರಿಸೆ ಸರಿಗೆವಂದುದು ಮುಯ್ಯ್ ।
ಚ್ಚೆರಡಱಿ ಬೆಡಂಗುವೆಂಬಂ
ತಿರೆ ಕರ[3]ವೊಪ್ಪಿದುದು[3] ಕೊರಲಗೇಂದ್ರಾತ್ಮಜೆಯಾ ॥ ೬೫೯

ಸಾರಕ್ಕೆ ॥

ಸಾರಂ ಸಂಸಾರದೊಳಬು
ಲಾರತ್ನಂ ಸಾರಮಲ್ಲಿ ಜವ್ವನಮದಱೊಳ್।
ಸಾರಂ ಮಧುರಾಕಾರಂ
ಸಾರಂ ಮತ್ತಂತ[4]ದಕ್ಕಮನು[4]ಕೂಲರಸಂ ॥ ೬೬೦

---

* ದಂಡಿ—II, 117. 1 ಕಂಟಲ, ಕಂಡಲ (ಅ). 2 ಸನ್ಮಾನ (ಅ).
† ರುದ್ರಟ—VII, 91; VII, 96. 3 ಪೊಪ್ಪುವುದು (ಅ). 4 ದಕ್ಕೆಯನು (ಓ), ದಕ್ಕಮನು (ಅ).

ಸೂತ್ರಂ ೧೫೬

ನಿಮಿಳನಂ

* ಪ್ರಕೃತಿಯಿನಲ್ಲದೊಡಾಗಂ
ತುಕಹೇತುವಿನಿಂ ಪ್ರಕೋಪರಾಗಾದಿಮನೋ ।
ವಿಕೃತಿಯನುಪಲಕ್ಷಿಸಿ ತಿಳಿ
ಯೆ [1]ಕಾಣದಿರಲದು[1] ನಿಮಿಳನಂ ಪೆಸರಿಂದಂ ॥ ೬೬೧

ಲಕ್ಷ್ಯಂ ।

† ಸರಳತರಥವಳನುಸ್ಸಿ
ಗ್ಧರೂಪಮಾ[2]ನ್ಯಪನ[2] ದೃಷ್ಟಿ ನಾಜದೊಳದಱಿಂ ।
ದೊರೆಕೊಂಡುದೊಂದು ಚೇತೋ
ನುರಾಗಮಱಿಯಲ್ಕೆ ಬರ್ಪುದಲ್ತಣಮಾರ್ಗಂ ॥ ೬೬೨

ಮದಿರಾಮದಧರಪಾಟಲ
ವದನೆಯ ಮನದೊಳ್ ಪೊದೞ್ದ ಕೋಪಂ ತಾನಂ ।
ತದು ಲಕ್ಷಿಸಲ್ಕೆ ಬಂದಿ
ರ್ದುದಿಲ್ಲ ಕೃತದೋಷ[3]ನಾಗಿಯುಂ[3] ಕಾಮುಕನಿಂ ॥ ೬೬೩

ಇವು ವಾಸ್ತವಭೇದಂಗಳ್ ॥

ಸೂತ್ರಂ ೧೫೭

ಔಪಮ್ಯಂ

ಏನಾನುಮೊಂದು ತೆಱದಿಂ
ನಾನಾವಿಧವಸ್ತುರೂಪದೊಳ್ ಸಾದೃಶ್ಯಂ ।
ತಾನೆನಿಸಿ ತೋರ್ಪುದದು ಬುಧ
ಮಾನಿತಮೌಪಮ್ಯಮೆಂಬಲಂಕೃತಿಯಕ್ಕುಂ ॥ ೬೬೪

ಸೂತ್ರಂ ೧೫೮

ವೃ ॥ ಉಪಮಾನಪ್ರತಿವಸ್ತುರೂಪಕಸಮಾಸೋಕ್ತಿಕ್ರಮಾಕ್ಷೇಪಸಾ
ಮ್ಯಪರಾಖ್ಯಾನನಿದರ್ಶನೋತ್ತರಸಸಂದೇಹಭ್ರಮಾಪಹ್ನುತಿ ।
ವ್ಯಪದೇಶನ್ಮರಣಪ್ರತೀಪಸಮಯೋಗಾಪ್ರಸ್ತುತಸ್ತೋತ್ರಮೆಂ
ದುಪಮಾಭೇದಮಿವಕ್ಕುಮಂತೆದೊರೆವೆತ್ತರ್ಥಾಂತರನ್ಯಾಸಮುಂ

ಉಪಮಾಭೇದಂಗಳ್ ॥

[4]ಅವಱೊಳಗೆ[4] ॥

---

* ರುದ್ರಟ—VII, 106. 1 ಕಾಣರಾದುದು (ಅ). † ರುದ್ರಟ—VII, 107, 108. 2 ನ್ಯಪರ (ಅ). 3 ಮಾಗಿಯುಂ (ಅ). 4 ಅಂತವರೊಳಗೆ (ಓ).

ಸೂತ್ರಂ ೧೫೯

* ಉಪಮೇಯಂ ಗುಣಲೇಶದಿ
ನುಪಮಾನಕ್ಕೆಣೆಗೆವರ್ಪೊಡುಪಮೆಯೆನಿಕ್ಕುಂ ।
[1]ವ್ಯಪನರ್ಗ[1]ವಿಷಯರೂಪ
[2]ಪ್ರಪಂಚಿತಮನೇಕಭೇದಮದುತಾನಕ್ಕುಂ[2] ॥ ೬೬೬

ಲಕ್ಷ್ಯಂ ॥

ಧರ್ಮೋಪಮೆಗೆ ॥

ಜಲನಿಧಿವೊಲ್ ಗಂಭೀರಂ
ಬಲವೈರಿಯವೊಲ್[3] ಸಮಗ್ರವಿಭವಸನಾಥಂ ।
ಕುಲಗಿರಿವೊಲ್ ನಿಷ್ಕಂಪಂ
ಬಲಯಂತೆವೊಲಧಿಕದಾನಿ ದಾನವಿನೋದಂ ॥ ೬೬೭

ಹೇತೂಪಮೆಗೆ ॥

ಪರಿವೃತ್ತತೆಯಿಂ ನುಣ್ಪಿಂ
[3]ಶರಕಾಂಡ[3]ಪ್ರತಿಮಚಾರುಗೌರಚ್ಛವಿಯಿಂ ।
ಪರಿಪಕ್ವತಾಳಫಲದೊಳ್
ದೊರೆಯೆನಿಸುಗುಮವಳ ಘನಪಯೋಧರಯುಗಳಂ ॥ ೬೬೮

ವಸ್ತೂಪಮೆಗೆ ॥

ಅಳಿಕುಳದಂತಳಕಚಯಂ
ದಳಿತಾಂಬುಜದಂತೆ ನಗೆಮೊಗಂ ಲಲಿತಾಂಗಂ ।
ಮಿಳಿರ್ವ ಲತೆಯಂತೆ ತಳಮುಂ
ತಳಿರಂತೆ ಬೆಡಂಗುವೆತ್ತು ತೋರ್ಕುಂ ನತಿಯಾ ॥ ೬೬೯

ಶ್ಲೇಷೋಪಮೆಗೆ ॥

ನಮ[4]ವೃತ್ತ[4]ಸಂಧಿಲಕ್ಷಣ
ನಮನ್ವಿತಂ ಜಾತ್ಯಲಂಕೃತಿಭ್ರಾಜಿತಮು ।
ತ್ತಮಕಾವ್ಯಬಂಧ[5]ದಂತಾ[5]
ದಮಿತಾರಿಗೆ ಸಾಜಮೊಪ್ಪುಗುಂ [6]ಕಿಱಿದೊಡೆಗಳ್[6] ॥ ೬೭೦

ಅನ್ಯೋನ್ಯೋಪಮೆಗೆ ॥

ತಳಮುಂ ಕೆಂದಳಿರುಂ ಕುಚದ್ವಿತಯಮುಂ ಪೂಗೊಂಡಲುಂ ತೋಳ್ಗಳುಂ
ನೆಳೆಗೊಂಬುಂ ಕುರುಳೋಳಿಯುಂ ಚಳದಳಿವ್ರಾತಂಗಳುಂ ಕೋಮಳಾಂ।

---

* ದಂಡಿ—II, 14; ಭಾಮಹ—II, 30. 1 ವ್ಯಪನರ್ಗ (ಓ.ಅ). 2 ಪ್ರಪಂಚಿತಂ ತಾನನೇಕ ಭೇದಮೆನಿಕ್ಕುಂ (ಅ). 3 ಶರಕಥಾ, ಸ್ಮರಕಾಂಡ (ಅ). 4 ವೃತ್ತಿ (ಅ). 5 ದಂದಂ (ಅ). 6 ಕಿಱಿದೆಡೆಯೊಳ್ (ಅ).

ಗುಳಿಯುಂ ತತ್ಕಳಿಕಾವಳೀರುಚಿಯುಮಂತೊಂದೊಂದಱೊಳ್ ಪೋಲ್ವೆಯಾ
ಗೆ ಲತಾಕೋಮಳೆ ನಾರ್ದಶೋಕಲತೆಯಂ ಪೂಗೊಯ್ದು [1]ಳಂತ[1]ಟ್ಟಿಯಂ ॥

ವಿಪರ್ಯಾಸೋಪಮೆಗೆ ॥

ಮೊಗಮಂ ತಾವರೆ ಕಣ್ಣನುತ್ಪಲದಳಂ ಧಮ್ಮಿಲ್ಲಮಂ ಸೋಗೆ ಸೆ
ಳ್ಗುಗುರಂ ಕೇದಗೆ ಪುರ್ಬನಂಗಜನ ಬಿರ್ ದಂತಾಳಿಯಂ ಮುತ್ತು ಕೆ ।
ಯ್ಮುಗಿದಾರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿನಿನ್ನಾರ ವ
ನ್ತು [2]ಗಳೊಳ್ ಪೋಲಿಪರಂತದೇಂ[2] ಮರುಳರೋ ರೂಪಂ ವಿಚಿತ್ರಾಂಗಿಯಾ॥

ಬಹೂಪಮೆಗೆ ॥

ಶರದಂಬುದಮಂ ಗಂಗಾ
ತರಂಗಮಂ ಸಿಂಧುವಾರಕುಸುಮಶ್ರೀಯಂ ।
ಹರಹಾಸವಿಳಾಸಮನನು
ಕರಿಸುವುದತಿವಿಶದಕೀರ್ತಿ ತೋಳ್ಗೊಪ್ಪುವನಾ ॥ ೬೭

ಮಾರೋಪಮೆಗೆ ॥

ಎಂತು ಬಸಂತಮದರ್ಕೆ ತೆಂಬೆಲರೆಂತದ
ರ್ಕೆಂತು ತಳಿರ್ ತಳಿರ್ಗೆಂತಲರ್ ಕುಸುಮೋತ್ಕರ ।
ಕ್ಕೆಂತಳಿ [3]ಮತ್ತೆ[3] ಮದಾಳಿಗೆಂತು ನಿನಾದಮಂ
ತಂತೆ ತರಂತರಮೊಪ್ಪಿ ತೋಱಿದಳಗ್ಗಳಂ ॥ ೬೮

ಕಲ್ಪಿತೋಪಮೆಗೆ ॥

ಮೃಗಮದಕಲ್ಪಿತಪತ್ರಭಂಗರಮ್ಯಂ
ನಗೆಮೊಗಮುಜ್ಜ್ವಳಕಾಂತಿ ನಾಡೆ ಸೌಮ್ಯಂ ।
ಸೊಗಯಿಸುಗುಂ ಮೃಗರಾಂಧನಾಭಿರಾಮಂ
ಮೃಗಧರಬಿಂಬಮಿದೆಂಬಿನಂ ನಿಕಾಮಂ ॥ ೬೯

ವಾಕ್ಯೋಪಮೆಗೆ ॥

ಪರಮನೊಳಗೊಳಗದೊಂದಂ
ಪರಿ [4]ಜಪನಂ[4]ಗೆಯ್ವೆ ನೆಗಳ್ದ [5]ನೂಕ್ತ್ಯವ್ಯಕ್ತಾ[5] ।
ಕ್ಷರದಿಂ ನಿಗೂಢತರನಿ
ರ್ಯುರರವಗುಂಜದ್ಗುಹಾಚಳಕ್ಕಿಣಿಯಾದಂ ॥ ೭೦

ಪ್ರತ್ಯಯೋಪಮೆಗೆ ॥

ಜಲಜಾಯಮಾನಮಲರ್ಗಣ್
ಪುಲಿನಂಮನ್ಯಂ ನಿತಂಬಮಳಿದೇಶೀಯಂ ।

---

1 ಳಂದ (ಅ). 2 ಗಳಂ ಪೋಲಸುವಂತುಚೇಂ. 3 ಮತ್ರ. 4 ಜಪಮಂ (ಅ).
5 ನೂಕ್ತ್ಯವ್ಯಕ್ತಾ (ಅ).

ಡಲದಳಕಪ್ರತಿಮ್ಯಣಾ
ಳಲತಾಕಲ್ಪಂಗಳಾ[1]ಲತಾಂಗಿಯ[1] ತೋಳ್ಗಳ್ ॥ ೬೭೭

ಸಮಾಸೋಪಮೆಗೆ ॥

ಕಮಲನಯನಂ ಕಂಬುಗ್ರೀವಂ ಘನಸ್ತನಮಂಡಳಂ
ಭ್ರಮರರುಚಿಮತ್ಕೇಶಂ ಬಿಂಬಾಧರಂ ನಳಿತೋಳ್ ಬೆಡಂ ।
[2]ಗಮರ್ದುದು[2] ಮೊಗಂ ರಂಭಾಸ್ತಂಭೋರು ತೆಳ್ಪಸಿಱುಮೊಪ್ಪೆ ವಿ
ಭ್ರಮದ [3]ಕಣಿಯಂ[3] ಪೊಲ್ತರ್ ನಿಲ್ತಲ್ಲಿ ಬೇಡಿತಿಯರ್ ಕೆಲರ್ ॥ ೬೭೮

ಸೂತ್ರಂ ೧೬೦

ಲಿಂಗವಚೋವಿಹಿತವಿಭೇ
ಉಪಮಾ ದೋಷಂಗಳ್ ॥ ದಂಗಳ್ ನ್ಯೂನಾಧಿಕಂ[4]ಗಳುಂ[4] ಸದೃಶತೆಯಿಂ ।
[5]ಸಂಗತಮಲ್ಲದುವುಂ[5] ದೋ
ಷಂಗಳವುಪಮೆಗೆ ಯಥಾಜನೋದ್ವೇಜನ[6]ದಿಂ[6] ॥ ೬೭೯

ಲಕ್ಷ್ಯಂ ॥

ಲಿಂಗವಚನ ಭೇದಂಗಳ್ಗೆ ॥

ನಿರವದ್ಯಂ ಗತದುರಿತಂ
ಪರಿಪೂತಂ ಜಗದೊಳಿಂತಿವಂ ಗಂಗೆಯವೋಲ್ ।
ಸುರುಚಿರತೇಜಂ ಭಾಸುರ
ತರನ್ಪರಂ ಶಖಿಶಿಖಾಕರಾಪಂಗಳವೋಲ್ ॥ ೬೮೦

ಹೀನೋಪಮೆಗೆ ॥

ಎರಲೆಯ ಪಿಂಡುಗಳಂ ದೆಸೆ
ವರಿವರಿವಿನಮಳಿಪಿ ತಗುಳ್ವ ನಾಯಂತೆ ರಣಾ ।
ಜಿರದೊಳಿದಿರ್ಚಿದ ಬಲವ
ದ್ವಿರೋಧಿಸೈನಿಕಮನಾನೃಪಂ ಬೆಂಕೊಂಡಂ ॥ ೬೮೧

ಅಧಿಕೋಪಮೆಗೆ ॥

ಮುಂಬಿಟ್ಟು ಪರೆದ ಕಟ್ತರೆ
ಯಂ ಬೆದಱಿ ತೆರಳ್ಚಿ ಬೆಳಪ ಬೆಳಗಿಂದೆಸದಿ ।
ರ್ಪಂಬುಜಸಖನಂತಿರೆ ಮಾ
ನಂಬುಬು ಬೆಳಗಿದವುದಖಳಗಗನಾಂತರಮಂ ॥ ೬೮೨

---

1 ನತಾಂಸೆಯ. 2 ಗಮದ್ರುಱಿ, ಗಮರ್ದುಟಿ, ಗಮರ್ದಿನಗೆ (ಆ). 3 ಧರ ಱಿಯ (ಆ); (*a*) ದಂಡಿ—II, 51. 4 ಗಳವು (ಆ). 5 ಸಂಗತಮುಮಲ್ಲದುವು. 6 ದೊಳ್ (ಓ.ಆ).

ಅನಾದ್ಯಶ್ಯಕ್ಕೆ ॥

* ದಾನಾಂಬುಚುಂಬಿತಕಪೋಲತಲಂ ಮದೇಭಂ
ತಾನೊಪ್ಪುವಂತೆ ಸೊಗಯಿಪ್ಪುದು ನೋಡೆ ಪೀನಂ ।
ನಾನಾರುಚಿಪ್ರಚುರಚಾಪಕಳಾಪಕಾಂತಂ
ಸಾನುಪ್ರದೇಶದೊಳುಪಾಗತಮಾ ಮಯೂರಂ ॥ ೬೮೩

† ಲತೆಯೊಳ್ ನಳಿತೋಳ್ ಪಲ್ಲವ
ತತಿಗಳೊಳಧರಂ ಕಱುಂಕೆಯೊಳ್ ಮೆಯ್ಯುಣ್ಣಂ ।
ವಿತತಾಂಶುವಪ್ಪ ಹಿಮದೀ
ಧಿತಿಯೊಳ್ ಮೊಗಮುಪಮೆ[1]ವೆತ್ತು ತೊಳಗುವುದವಳಾ[1] ॥ ೬೮೪

ಸೂತ್ರ ೧೬೧

‡ ಪ್ರತಿವಸ್ತೂಪಮೆ ಸಾಮ್ಯ
ಪ್ರತೀತಿಯಿಂದಂ ಸಮಾನವಸ್ತುನ್ಯಸನಂ ।
ಪ್ರತಿವಸ್ತೂಪಮೆ ರೂಪಕಂ ಪ್ರತಿಪಾದಿಸುವುದಭೇದಾ
ತ್ಮತೆಯಿಂದುಪಮೆಯನದಲ್ತೆ ರೂಪಕ[2]ಮಕ್ಕುಂ[2] ॥ ೬೮೫

ಲಕ್ಷ್ಯಂ ॥

ಪ್ರತಿವಸ್ತೂಪಮೆಗೆ ॥

§ [3]ನಿನ್ನನ್ನನೊರ್ವನುಂ[3] ನಂ
ಪನ್ನಗುಣಂ ಪುಟ್ಟಲರಿಯನಿನ್ನುಂ [4]ಮುನ್ನುಂ[4] ।
ಸನ್ನುತನಮೇರುಭೂರುಹ
ದನ್ನವು ಪೆಱ[5]ತಾವ[5] ಮರನುಮೇಂ ಪುಟ್ಟುಗುಮೇ ॥ ೬೮೬

ಅನಮಸ್ತ್ರರೂಪಕಕ್ಕೆ ॥

ನೆರೆಪೊರೆ ಪೊನ್ನ [6]ಸೊನ್ನಲಗೆಯಾಗೆ[6] ಮೊಗಂ ಸರಸೀಜಮಾಗೆ ಕ
ಣ್ಮಲರಲರಾಗೆ ಕೆಂದಳವೆ ಕೆಂದಳಿರಾಗೆ ಕನತ್ಕಪೋಳಮು ।
ಜ್ವಲಮುಕುರಂಗಳಾಗೆ ದರಹಾಸವೆ ಸೂಸುವ ರಾಜೆಯಾಗೆ ಕೋ
ಮಲಲಲತಾಂಗಿಯರ್ ನೆರೆದು ನೋಡಿದರಂದಿದಿರ್ಗೊಳ್ವ ಮಾಡ್ಕೆಯಿಂ॥ ೬೮೭

ಸಮಸ್ತರೂಪಕಕ್ಕೆ ॥

ವದನಾಬ್ಜಂ ಕರಪಲ್ಲವೋಪ[7]ನಿಹಿತಂ[7] ಬಾಷ್ಪಾಂಬು[8]ವಿವ್ಲಾವಿತಂ[8]
ವಿದಳನ್ನೇತ್ರವಿನೀಲಸೀರರುಹಮುಷ್ಣೋಚ್ಛ್ವಾಸದಿಂದಂ ಕಱಿಂ ।

---

* ಈ ಪದ್ಯವು ಒರೆಪ್ರತಿಯಲ್ಲಿ ಇಲ್ಲ. † ಈ ಪದ್ಯಕ್ಕೆ ಹಿಂದೆ ಒಂದು ಪ್ರತಿಯಲ್ಲಿ "ಅಲ್ಲಯಾನುದ್ಭಯಕ್ಕೆ" ಎಂದಿದೆ. 1 ಗೆತ್ತುತೋಱುವುವಿವಳಾ (ಓ). ‡ II, 46; II, 66. 2 ಭೇದಂ (ಅ). § ದಂಡಿ—II, 47. 3 ನಿನ್ನವೊಲನ್ನೊರ್ವಂ (ಅ). 4 ಮುನ್ನಂ (ಅ). 5 ತಾದ (ಅ). 6 ಸೊನ್ನಲಗೆಗಳಾಗೆ (ಓ), ಸೊನ್ನಗೆಯಾಗೆ, ಪನ್ನತಿಗೆಯಾಗೆ (ಅ). 7 ಎಹಿತಂ (ಅ). 8 ಲವ್ಲಾಎಲಂ (ಅ).

ಗಿದ ವೃತ್ತಾ ತ್ತರವಿದ್ರುಮಪ್ರತತಿ ಚಿಂತಾಂಭೋಧಿಮಗ್ನಂ ಕರಂ
ಕುದಿಯುತ್ತಿರ್ದೆರ್ದೆ ನೂಚಿಕುಂ ವಿರಹದುಃಖಾಕ್ರಾಂತಿಯಂ ಕಾಂತೆಯೊಳ್ ॥

ವಿಭಕ್ತಿರೂಪಕಕ್ಕೆ ॥

ಅಂಬುಜನೂತ್ರಮೆಂಬ [1]ಪೆಣೆದಾವಣೆಯಂ[1] ಪಱುದಾವಲೆಂಬ ಬಾ
ಳ್ಗಂಬಮನೊತ್ತಿ ಕಿಬ್ಬು ಲತೆಯೆಂಬ ತುರಂಗಮುಮಂ ಪೊರಳ್ಚಿ ಧಾ ।
ತಾಂಬುತರಂಗವೆಂಬ ಪರಿಕಾಱಿನನಟ್ಟಿ ಮದಾಳಿಯೆಂಬ [2]ಗುಂ
ಡಂ[2] ಬಟಿಯಟ್ಟಿ [3]ಸೋವುದು[3] ನಮಿರಾರಣವಾರಣಮಾಪ್ರದೇಶದೊಳ್ ॥ ೬೮೯

ಸಾವಯವರೂಪಕಕ್ಕೆ ॥

ಪರಿಲುಳಿತಘರ್ಮಜಲಮಂ
ಜರಿ ವಿಚಲದ್ಭೃ[4]ಪತಾಕ[4]ಮತಿತರಳತರ ।
ಸ್ಫುರಿತಾಧರಪಲ್ಲವಮಿವ
ಳ ರೋಷವಂ ವಕ್ತ್ರಮಿದೆ ವಲಂ ಕನ್ನಡಿಕುಂ ॥ ೬೯೦

ನಿರವಯವರೂಪಕಕ್ಕೆ ॥

ಆರಕ್ತಕಪೋಲಂ ಮದಿ
ರಾರಸಕೃತಸುರಭಿ ಘೂರ್ಣಿತೇಕ್ಷಣಮುದ್ಯ ।
ದ್ಭ್ರೂರಮ್ಯರಾನ್ಯಮಾನ್ಯಾಂ
ಭೋರುಹಮಿಾ ಸುದತಿಗಿಂತಿದೇನೊಪ್ಪಿದುದೋ॥ ೬೯೧

ಸಕಲರೂಪಕಕ್ಕೆ ॥

ವಾರಿಜಂ ವದನಂ ಬೃಹತ್ಪುಲಿನಂ ನಿತಂಬತಲಂ ಚಲ
ಚ್ಚಾರುಲೋಚನಕಾಂತಿ ಬಾಳೆಗಳೋಳಿ ಹಾರಮೆ ಫೇನವಿ ।
ಸ್ತಾರಮಂಚಿತಕುಂಚಿತಾಳಕಮುನ್ಮದಾಳಿಗಳಾಗೆ ಶ್ಯಂ
ಗಾರದೇವನದೀಪ್ರವಾಹವಿದೊಂ[5]ದೆ ದಲ್ [5]ಪೊಸತೆಂಬಿನಂ ॥ ೬೯೨

ಹೇತುರೂಪಕಕ್ಕೆ ॥

ಮೃಗರಾಜಂ ವಿಕ್ರಮದಿಂ
ಖಗರಾಜಂ ಸ್ವಾಮಿಭಕ್ತಿಯಿಂ ನಗರಾಜಂ ।
ಮಿಗಿಲಾದ ಪೆಂಪಿನಿಂ ಪ
ನ್ನಗರಾಜಂ ಧೈರ್ಯಗುಣದಿನಾಹವಸಿಂಹಂ ॥ ೬೯೩

ರೂಪಕರೂಪಕಕ್ಕೆ ॥

[6]ತರುಣಿಯ ಮುಖೇಂದು[6]ಕಮಲರಾ
ಕರದೊಳ್ ದೃಗ್ಗೋಳ್[7]ಕಾಂಕ[7]ನೀಳಾಬ್ಜಮಳಂ ।

---

1 ಪೆಣದಾಣಿಯಂ (ಅ). 2 ನಾಡಂ (ಅ). 3 ಪಾಯ್ವುದು. 4 ಲತಾಕ (ಅ). 5 ದೆನರ್. 6 ತರುಣೀ ಮುಖೇಂದು (ಅ). 7 ಕಾಂತಿ (ಅ).

ಕರಿಸೆ ವಿಚಿತ್ರಾಹುಧ್ಯಂಗಂ
[1]ಬರೆ[1] ಪೀರ್ದತ್ತಧರಚಂದ್ರಿಕಾಪರಿಮಳಮಂ ॥ ೬೪೪

ಮಾಲಾರೂಪಕಕ್ಕೆ ॥

ಸಂಸಾರಕ್ಕೇಕಸಾರಂ ಬಿದಿಯ ಕುಲಧನಂ ಲೋಕದಾಲೋಕಮಾಧಾ
ರಂ ನಯ್ಪಿಂಗಕ್ಷಿಗಳ್ಗುತ್ಸವಮೆರ್ದೆಗಮ್ಯತಂ ಕಾಮನಾಮ್ರಾಜ್ಯಸರ್ವ್ವ ।
ಸ್ವಂ [2]ಸೌಂದರ್ಯಕ್ಕೆ[2] ಗೇಹಂ ಮಹಿತಳತಿಳಕಂ ಜಾಣ ಮೆಯ್[6] ನಾಣ ಜೀವಂ
ಮಾಂಸಾಶೀ ನಿರ್ದೆರಿಂತಪ್ಪೆಳೆಯಳ[3]ನಿಱಿಯಲ್ಕೆಂತು[3]ನೀನೆತ್ತಿ[4]ಕೊಂಡೆಯ್[4] ॥

ವಿಶೇಷಗುಣರೂಪಕಕ್ಕೆ ॥

ಜಗದಾಲೋಕನದರ್ಪಣಂ ಪ್ರಥಮದಿಕ್ಕಾಂತಾನನಂ ಕಂತುರಾ
ಜಗಜೋದ್ದೀಪನಪಿಂಡಮಂಬರಸರ[5]ನ್ಯುತ್ತಂಸ[5]ಹಂಸಂ ವಿಯೋ ।
ಗಿಗಣಾಕೂತಕುರಂಗಪ್ರೋತಧಯಕೃತ್ಕಂಠೀರವಂ ಚೆಲ್ವುವೆ
ತ್ತೊಗೆದತ್ತಂಬುಧಿವೀಚಿ[6]ನರ್ತನನ[6]ಟಂ ಬಿಂಬಂ ಸುಧಾಸೂತಿಯಾ ॥೬೪೬

ಸೂತ್ರಂ ೧೬೨

* ಉಪಮಾನಕಥನಮೊಂದಱಿ
ಸಮಾಸೋಕ್ತಿ ನುಪಮೇಯಮನಱಿವುದದು ಸಮಾಸೋಕ್ತಿ ನಿಷ್ಠೇ।
ಆಕ್ಷೇಪಂ † ಧಪರಂ ತಾನೆಂಬಂತಾ
ಗೆ ಪೇೞ್ವುದಾಕ್ಷೇಪಮಕ್ಕುಮದು ಬಹುರೂಪಂ ॥ ೬೪೭

ಲಕ್ಷ್ಯಂ ॥

ಸಮಾಸೋಕ್ತಿಗೆ॥

ಫಳತರುಗಳ್ ಪಲವುಂ ಬನ
ದೊಳಗೆ [7]ಸುರೋರ್ವೀರು[7]ಹಪ್ರಕಾಶಂಗಳ್ ತಾ ।
ವೊಳವಾದೊಡಮೆಂತುಂ ಬಗೆ
ಗೊಳಿಸಿದಪುದಿದೊಂದೆ ನೂತಚೂತಕುಜಾತಂ ॥ ೬೪೮

ಆಕ್ಷೇಪಕ್ಕೆ ॥

ಒಡನಮ್ಯತಂ ಜನಿಯಿಸೆ ಪಾ
ಲ್ಗಡಲೊಳ್ ವಿಧು ಪುಟ್ಟಿದಂ ಕಳಾಮಯನೆಂಬೀ ।

---

1 ಪರಿ (ಆ). 2 ಸೌಂದರ್ಯಿಕ್ಕ. 3 ನಱಿವುತ್ತಿಂತು, ನಱಿಯಲ್ಕೆಂತು (ಆ), ದಱಿಯುತ್ತಿಂತು (ಆ), 4 ಕೊಂಡಾ (ಆ). 5 ನ್ಯುತ್ತುಂಗ (ಆ). 6 ನರ್ತಕಿ (ಓ).
* ರುದ್ರಟ—VIII, 67. † ದಂಡಿ—II, 120. 7 ಸುರಾವನಿರುಹ (ಓ).

ನುಡಿ ಪುಸಿ ಜಡಾತ್ಮಕಂ ವಿಷ
ದೊಡನೆ ವಿಷಾಕರದೊಳಿಗೆದ[1] ನೆಂಬುದೆ[1] ತಥ್ಯಂ ॥ ೬೯

ಅಂತುಮಲ್ಲದೆಯುಂ ॥

ಪೊಗಟಲಾ ನೃಪನಂ ನಾ
ಲಗೆಯೊಂದಱಿ ಮನುಜರಿರ್ಕೆ ನೆಱಿಯೆನಣಂ ಪಾ ।
ನುಗಿಯುಂ ಪವನಾಧ್ವಮನಾ
ವಗಮಾವಂ ವ್ಯಾಸದಿಂದಮಳೆಯರ್ ನೆಱಿವಂ ॥ ೭೦

ಸೂತ್ರಂ ೧೬೩

* ಪೊಸಯಿಸುವರ್ಥ[2]ಕ್ರಿಯೆಯಿಂ[2]
ಸಾಮ್ಯಂ ಪರಾಖ್ಯಾನಂ ಪ್ರಸಿದ್ಧವಸ್ತುವಿನ ದೊರೆಗೆ ವರೆ ಸಾಮ್ಯಂ † ಮ ।
ತ್ತನವಾನವಿಶೇಷಣಗುಣ
ಲಸಿತಂ ಸಮವೃತ್ತಮಪ್ಪುದು ಪರಾಖ್ಯಾನಂ ॥ ೭೦೧

ಲಕ್ಷ್ಯಂ ॥

ಸಾಮ್ಯಕ್ಕೆ ॥

ಸಕರಾರ್ಥಿಮನೋರಥದಾ
ಯಕಂ ಮಹೋದಾತ್ತಮೂರ್ತಿ ಸಾಂದ್ರಚ್ಛಾಯಂ ।
[3]ಸುಕರಾಭಿಗಮಂ[3] ನರಪಾ
ಲಕನಿರೆ ಕಲ್ಪಾವನೀಜಮೇಗೆಯ್ದುಪುದೋ ॥ ೭೦೨

ಪರಾಖ್ಯಾನಕ್ಕೆ ॥

‡ ವಿಕಚನರಸೀರುಹಂ ಕೋ
ಕಕುಳವ್ಯಾಧಾಸಿ ಪೂಗೊಳಂ ತಾನಿರೆಯುಂ ।
ಬಕನಿಕರಲುಳಿತಕಲುಷೋ
ದಕವಿರಳದೊಳಂಚೆ ಬೆಂಚೆಯೊಳ್ ವಸಿಯಿಕುಮೇ ॥ ೭೦೩

ಸೂತ್ರಂ ೧೬೪

§ [4]ಎಂತುಟು ಮುನ್ನಂ ಪೇೞ್ದ[4]
ದೃಷ್ಟಾಂತಂ ಉತ್ತರಂ ರ್ಥಾಂತರಮಂತುಟನೆ ಬಟಿಕೆ ತೋಱುವುದದು ದೃ ।
ಷ್ಟಾಂತಂ ॥ ಪ್ರಶ್ನಾರ್ಥದೊಳೋ
ರಂತನುಗುಣಮಾಗೆ ಪೇೞ್ವುದತ್ತರಮೆನಿಕುಂ ॥ ೭೦೪

---

1 ನೆಂಬಿದೆ (ಓ). * ರುದ್ರಟ—VIII, 105. 2 ಕ್ರಿಯೆಯುಂ, ಕ್ರಿಯೆಯಂ (ಅ). † ರುದ್ರಟ—VIII, 74. 3 ಶುಕರಾಜಗಮಂ (ಓ). ‡ ರುದ್ರಟ—VIII, 75. ಅನ್ಯೋಕ್ತಿಗೇ ಪರಾಖ್ಯಾನವೆಂದು ಹೆನರು. § ರುದ್ರಟ—VIII, 94. 4 ಎಂತುಂ, ಮುಂಪೇೞ್ದ (ಓ). ॥ ರುದ್ರಟ—VIII, 72.

ಲಕ್ಷ್ಯಂ ॥

ದೃಷ್ಟಾಂತಕ್ಕೆ ॥

* ಭವದಾಲೋಕನದಿಂದಾ
ಯ್ತವಳ್ಗೆ ಪಿರಿದುಂ ಮನೋವಿಕಾ[1]ಸಮಡೀಗಳ್[1] ।
ಕುವಲಯಬಂಧುವಿನಾಲೋ
[2]ಕವೆ ಮಾಡುವುದಲ್ತೆ[2] ಕುಮುದವನವಿಕಸನಮಂ ॥ ೭೦೫

ಪತಿಯಂ ಪಿಂಬಡಿನೊಳ್ ಪತಿವ್ರತೆಗೆ ಬೇಱೊಂದುಂಟೆ ಕೃತ್ಯಂ ವಿರಾ
[3]ಗತೆಯುಂ[3] ಮೇಣ್[6] ತದನುಪ್ರಯಾಣ[4]ವಿಧಿಯುಂ[4] ತಾವಲ್ಲದೆಂದಿಂತಿದಂ ।
ಕ್ಷಿತಿಗೆಲ್ಲಂ ತಿಳಿವಾಗೆ ತೋರ್ಪ ತೆಱದಿಂ ರಾಗೋದಯಂ ಪಿಂಗೆ ಸಂ
[5]ಗತೆ[5] ಸಂಧ್ಯಾಂಗನೆ ಪೊದ[6]ಳಾದೊಲವಿನಿಂ[6] ಬೆನ್ನೊಳ್ ದಿನಾಧೀಶನಾ ॥

ಉತ್ತರಕ್ಕೆ ॥

† ಮರಣಮೆನಿಪ್ಪುದಾವುದು ದರಿದ್ರತೆ ಪತ್ತಿದ ಕುತ್ತಮಾವುದಂ
ತರಿಸದೆ ನಿಂದ ಚಿಂತೆ ಸುಖಮಾವುದು ಪುತ್ರಮುಖಾವಲೋಕನಂ ।
ನರಕದ ದುಃಖಮಾವುದವಿನೀತಕಲತ್ರಮುದಾತ್ತಮಪ್ಪಲಂ
ಕರಣಮದಾವುದಗ್ಗಳಿಕೆವೆತ್ತ [7]ಗುಣಂಗಳೆ ಭೂತಳಾಗ್ರದೊಳ್[7] ॥ ೭೦೭

ಸೂತ್ರಂ ೧೬೫

ಸಂಶಯಂ ಭ್ರಮಂ ಅಪಹ್ನುತಿ

ಮಾತೇನೊ ಸಂಶಯಂ [8]ಸಂ
ಶ್ರೀತಿ[8]ಪರಂ ಚಿತ್ತಮೋಹನಂ ಭ್ರಮಮಕ್ಕುಂ ।
ಭೂತಾರ್ಥಾಪಹ್ನವ[9] ಸಂ
ಭೂತ[9]ಮದನ್ಯಾರ್ಥದೃಷ್ಟ್ಯಪಹ್ನುತಿನಾಮಂ ॥ ೭೦೮

ಲಕ್ಷ್ಯಂ ॥

ಸಂಶಯಕ್ಕೆ ॥

ಅಳಿಗಳೊ ನೀಳ್ದ ಕರ್ಬೊಗೆಯೊ ಕೆಂದಳಿರೋಳಿಯೊ ಸುತ್ತುಗೊಂಡು ತ
ಳ್ತಳುರ್ವುರಿಮಾಲೆಯೋ ಸರಸಪಕ್ವಫಲಂಗಳೊ ವಿಸ್ಫುಲಿಂಗಸಂ ।
ಕುಳವೊ ಮನಕ್ಕೆ ಸಂದೆಯುಮಗುಂದಲೆಯಾಗಿರೆ ನೋಡಿನೋಡಿ ಕಂ
ಟಳಿಸುವುದೆನ್ನ ಮೆಯ್[9] ಕೆಳದಿ[10] ಪೇಟದು[10] ಮಾಮರನೋ ದವಾಗ್ನಿಯೋ ॥

---

* ರುದ್ರಟ—VIII, 95. 1 ಕಾರಮದಾ. 2 ಕವಲ್ತೆಮಾಡುವುದು (ಅ). 3 ಗತೆಯಿಂ. 4 ವಿಧಿಯಿಂ. 5 ಗತಿ. 6 ಳೊಂದೊಲವಿನಿಂ (ಅ). † ರುದ್ರಟ—VIII, 73. 7 ಗುಣಂ ಸುಜನ್ಯೈಕಬಾಂಧವಾ (ಅ). 8 ಸಂಭೀತಿ (ಓ), ಸಂಭೀತ (ಅ). 9 ಸಂಪೂತ, ಸಂಘಾತ (ಅ). 10 ಕೇಳಿದು (ಅ).

ಭ್ರಮಕ್ಕೆ ॥

ಮಣಿಭವನಂಗಳ ರುಚಿಗಳ್
ಪೆಣೆದು ನಭೋಂಗಣದೊ[1]ಳಿಂದ್ರ[1]ಚಾಪವಿಳಾಸ ।
ಕ್ಕೆಣೆಯಾಗಿರೆ ಬಹುವಿಧದಿಂ
ಕುಣಿವುವು ಕಾರ್ಗೆತ್ತು ಕೇಗಿ ಸೋಗೆನವಿಲ್ಗಳ್ ॥ ೭೧೮

ಕವಿವ ಕುಬೇರಧೂಪದ ಕವಿರ್ಪೊಗೆಯಂ ನವಮೇಘಮಾಲಿಕಾ
ನಿವಹಮೆಗೆತ್ತು ತೋರ್ಪ ಮಣಿದೀಧಿತಿಯಂ ಕುಡು[2]ಮಿಂಜಿ[2]ಗೆತ್ತು ಪೊ ।
ಣ್ಮುವ ಪಟಹಪ್ರಣಾದಮನೆ ಮೇಘನಿನಾದಮೆಗೆತ್ತ ಕಾಲತಾಂ
ಡವಮನೊಡರ್ಚುಗುಂ ಶಿಖಿಕುಳಂ ಕನಕಾಯತಕೂಟಕೋಟಿಯೊಳ್ ॥ ೭೧೯

ಅಪಹ್ನುತಿಗೆ ॥

ಉನ್ಮದಮಧುಕರಕುಳರನ
[3]ವನ್ಮೃದು[3]ಝಂಕಾರನಿನದಮ[4]ಲ್ತಿದು[4] ಪೀನಂ ।
ಮನ್ಮಥಚಾಪವಿ[5]ಮುಕ್ಕೊ[5]ಲ್
ಧ್ವನ್ಮಾರ್ಗಣಭೀಂಕೃತಿಸ್ವನಂ ತಾನಕ್ಕುಂ ॥ ೭೨೦

ಸೂತ್ರಂ ೧೬೬

[6]ಉಪಮೇಯನ್ಯಗ್ಭಾವೋ
ವ್ಯಪದೇಶಂ ಪಪನ್ನ [6]ಮುಪಮಾನಮಾಗೆ ಮುಖ್ಯಮದಕ್ಕುಂ ।
ಸ್ಮರಣಂ ವ್ಯಪದೇಶಂ ಮುಂ ಪೋದುದ
ನಪೂರ್ವಮಂ ಕಂಡು ನೆನೆವುದದು ತಾಂ ಸ್ಮರಣಂ ॥ ೭೨೧

ಲಕ್ಷ್ಯಂ ॥

ವ್ಯಪದೇಶಕ್ಕೆ ॥

ಕುಚಯುಗಳಚ್ಛಲದಿಂದೊಂ
ದಿ ಚಕ್ರವಾಕದ್ವಯಂ ಭುಜವ್ಯಾಜಲತಾ ।
ರುಚಿಗಳೊಳಿರ್ದಪ್ಪುವು ನಾ
ಡೆ ಚೆಲ್ವುವೆತ್ತಾ ನ್ಯಮಿಷಸರಃಪರಿಸರದೊಳ್ ॥ ೭೨೨

ಸ್ಮರಣಕ್ಕೆ ॥

ಮನಕಂ ಪಕ್ಕಲ್ಲದೆ [7]ನೆಲ
ನಿನಿಸಾನುಂ ಮೆಚ್ಚಿ [7] ಕರ್ಣನಂ ನೋಡಿ ನರಂ ।

---

1 ಳಮರ (ಅ). 2 ಮಿಂಜು (ಅ). 3 ವನ್ಮಧು (ಅ). 4 ಲ್ಲಿದು (ಓ). 5 ಏಯುಕ್ಕೊ (ಓ). 6 ಉಪಮೆಯನನ್ಯದ್ಭಾವೋದ್ಯುಪನ್ನ (ಓ.ಅ). 7 ನೆಲಗಿನಿಸಾನುಂ ಮೆಚ್ಚಿ (ಅ).

ನೆನೆದಂ ತನ್ನೊಳ್ ತಾಗಿದ
ತ್ರಿನಾಕಪಾಣಿಯ ಕಿರಾತತನುಸೌಷ್ಠವಮಂ ॥ ೭೧೫

ವಿಶಾಳಮಳಿನೋದ್ಗ್ರತುಂಗಗಿರಿಕುಂಜನಿಜಾತಮ
ಪ್ರಶೋಕವನದಲ್ಲಿ ಧಾತುಜಳನಿರ್ಝರಂ ಪಾಯೆ ಮಾಂ ।
ಸಶೋಣಿತಮಯಂಬೊಲಾಗಿ ಕಿಱಿದಂತರಂ ತೋಱೆ ಕಂ
ಡು ಶಾರ್ಙ್ಗ ನೆನೆದಂ ಹಿರಣ್ಯಕನದೊಂದು ಬಿಟ್ಟಂದಮಂ ॥ ೭೧೬

ಸೂತ್ರಂ ೧೬೭

* [1]ಅನುಕಂಪೆಯಕ್ಕೆ[1] ಮೇಣ್ ಕು
ತ್ಸನಮುಪಮೇಯಸ್ಥಿತಂ ಪ್ರತೀಪಂ ಗೆಡೆಗೊಂ ।
ಪ್ರತೀಪಂ ಸಮಯೋಗಂ [2]ಡನುಗತ[2]ಮಾಗಿರೆ ಗುಣದೋ
ಷನಿರೂಪಣದಿಂ ವಿಭಾಗ[3]ಮದು ಸಮ[3]ಯೋಗಂ ॥ ೭೧೭

ಲಕ್ಷ್ಯಂ॥

ಪ್ರತೀಪಕ್ಕೆ ॥

† ಅಮಲನಮಾಗಿಯುಮಿಾ ನಿ
ನ್ನ ಮೊಗಂ ಮೃಗಲಕ್ಷ್ಮನೆಣೆಗೆ ವಂದಪುದಿನಿಸಂ ।
ಕಮಲಾಯತಾಕ್ಷಿ ಕಜ್ಜಲ
ವಿಮಿಶ್ರಿತಾಶ್ರುದಬಿಂದುಮಲಿನಕಪೋಲಂ ॥ ೭೧೮

ಆಸಿತೋತ್ಪಳದಳಶೋಭೆಯ
[4]ನೆಸೆಯೆ[4] ಕಟಾಕ್ಷದೊಳೆ [5]ತಳೆದ[5] ಮದದಿಂದಾರೋ ।
ಕಿನದಿರು ಮುಯ್ವಂ ಮಾನಿನಿ
ದೆಸೆದೆಸೆಗಳೊಳೊಳೆವು ಕುವಲಯಾಕರ[6]ಮೆನಿತುಂ[6] ॥ ೭೧೯

ಸಮಯೋಗಕ್ಕೆ ॥

‡ ಮೃಗನಯನೆಯರೊಲವುಂ ಬ
ಳ್ಳಿಗೊಂಡು ತಳ್ತಡರೆ ಪೊಳೆದು ಮಿಂಚುವ ಮಿಂಚುಂ ।
ಬಗೆವಾಗಳ್ ನಿಲ್ಲವದೊಂ
ದು ಗಟಿಗೆಯುಂ ಘನನಿಬದ್ಧಮೆನೆ ಸಂದಿರ್ದುಂ ॥ ೭೨೦

---

* ರುದ್ರಟ—VIII, 76. 1 ಅನುಕಂಪಮಕ್ಕೆ (ಅ). 2 ಡನುಮತ (ಅ). 3 ಮುರುಸಹ (ಬ). † ರುದ್ರಟ—VIII, 77. 4 ನೆಸೆವ (ಅ). 5 ತಳೆದು. 6 ಮೆಸೆಗುಂ. ‡ ದಂಡಿ—II, 332.

ಸೂತ್ರಂ ೧೬೮

* ಬಗೆದಿರ್ದು ಬೇಱಿದೊಂದಂ
ಪೊಗಟ್ಟಂದಪ್ರಸ್ತುತಪ್ರಶಂಸೆಯೆನಿಕ್ಕುಂ।

ಅಪ್ರಸ್ತುತ ಪ್ರಶಂಸೆ; ಅರ್ಥಾಂತರನ್ಯಾಸಂ

ನೆಗಟೆ ನುಡಿವುದನೆ ಸಾಧಿಸಿ
ನಿಗದಿಪುದರ್ಥಾಂತರಪ್ರಸಂಗನ್ಯಾಸಂ॥ ೨೨೧

ಲಕ್ಷ್ಯಂ ॥

ಅಪ್ರಸ್ತುತಪ್ರಶಂಸೆಗೆ ॥

† ಮೃದುಹರಿತಪ್ರವಾಳನವಶಾದ್ವಲರಾಜಿಯನಾಯ್ದು ಮೇದು ತ
ಣ್ಪೊದವಿದ ನಿರ್ಝರಾಂಬುಗಳನೊಯ್ಯನೆ ಪೀರ್ದು ನಿಜಾಂತರಂಗದೊಳ್ ।
ಪುದಿದನುರಾಗದಿಂದೆಳಸಿ ಪುಲ್ಲೆಗಳಾರೊಳವೆಂದು ದೈನ್ಯಮಿ
ಲ್ಲದೆ ಸುಖಮಿರ್ಪುವೀ ವನನಿಕುಂಜವಿಭಾಗದೊಳೇಣಸಂಕುಳಂ॥ ೨೨೨

ಅರ್ಥಾಂತರನ್ಯಾಸಕ್ಕೆ ॥

ಜಗದೊಳುಳ್ಳ ನದೀಪ್ರವಾಹಜಲಂಗ[1]ಳೊಬ್ಬುಡಿ[1]ದಾವಗಂ
ಪುಗೆಯುಮೊತ್ತದು ಮೇರೆಯಂ ಬಡಬಾನಳಂ ಬಿಡದಾಗಳುಂ ।
ತಗುಳೆ ಪೀರೆಯುಮಂತದೆಳ್ಳನಿತಪ್ಪೊಡಂ ತವದಂತೆಪ್ಪೋಲ್
ಬಗೆದು ನೋಡೆ ಮಹಾತ್ಮರಪ್ಪವರೇಕರೂಪರದೆಲ್ಲಯುಂ ॥ ೨೨೩

ರೂಪರ್ದ್ಧನಾರಿಯಾಯ್ತು ವಿ
ರೂಪಾಕ್ಷಂಗೆಂತು ಶಾಂತರೌದ್ರಾತ್ಮಕಮಿಂ ।
ರೂಪು ನಿನಗಾದು[2]ದಂತೆ[2] ಮ
ಹಾಪುರುಷರ ಚರಿತಮಪರತಂತ್ರಮಚಿಂತ್ಯಂ ॥ ೨೨೪

ಇವು ಉಪಮಾಭೇದಂಗಳ್ ॥

ಸೂತ್ರಂ ೧೬೯

ನಾಡಾಡಿಗಱಿವಿನಂ ಕೆ
ಯ್ಗೂಡಿದ ವಸ್ತೂಪವರ್ಣನಂ ವಿಸ್ಮಯಮಂ ।
ಮಾಡುವೊಡತಿಶಯಮಕ್ಕುಂ
ನಾಡೆಯುಮಿದಱಿಂದಮಾವುದುಂ ಬಗೆಗೊಳಿಕುಂ ॥ ೨೨೫

ಅತಿಶಯಂ

---

* ದಂಡಿ—II, 340; II, 169. *Cf.* ರುದ್ರಟ—VIII, 79. † ದಂಡಿ—II, 341. 1 ಳೊಳ್ಬುಡಿ (ಅ). 2 ದೆಂತು (ಬ).

ಸೂತ್ರಂ ೧೭೦

* ವಿರೋಧಮುತ್ಪ್ರೇಕ್ಷೆವಿಭಾವನಾಹ್ವಯಂ
ತಿರೋಹಿತಂ ಪೂರ್ವಮಹೇತು ತದ್ಗುಣಂ ।
ಪರಸ್ಪರಾಸಂಗತಿಕಂ [1]ವಿಶೇಷಮುಂ[1]
ನಿರೂಪ್ಯಮಾಣಾತಿಶಯಪ್ರಭೇದಮುಂ ॥ ೨೨೬

ಅತಿಶಯ ಭೇದಂಗಳ್

ಅಲ್ಲಿ ॥

ಸೂತ್ರಂ ೧೭೧

† ಅನ್ಯೋನ್ಯವಿರುದ್ಧಪದಾ
ರ್ಥನ್ಯಾಸಮೆ ತಾಂ ವಿರೋಧಮವಿವಕ್ಷಿತಸಾ ।
ಮಾನ್ಯಮತದ್ಗುಣಯೋಗದಿ
ನನ್ಯತ್ವಾರೋಪಮಪ್ಪುದುತ್ಪ್ರೇಕ್ಷೆ ವಲಂ ॥ ೨೨೭

ವಿರೋಧಂ ಉತ್ಪ್ರೇಕ್ಷೆ

ಲಕ್ಷ್ಯಂ ॥

ವಿರೋಧಕ್ಕೆ ॥

ಮರದುಱುಗಲ ಕಟ್ಟಲೆಯುಂ
ಪರಕಲಿಸಿ ಪೊದಳ್ದ ಶೋಣಮಣಿದೀಧಿತಿಯುಂ ।
ನೆರೆದಿರ್ದುವೊಂದನೊಂದೊ
ತ್ತರಿಸಲ್ ನೆಱೆ ನೆಱೆಯವೀ ಮಹೀಧರತಟದೊಳ್ ॥ ೨೨೮

ಘನಜಘನಂ ತನುತನು ನಿ
ಮ್ನನಾಭಿ ತುಂಗಸ್ತನಂ ವಿನೀಲಮಕೇಶಂ ।
ಕನದರುಣ[2]ದಶನ[2]ವಸನಂ
[3]ಮನದೊಳ್[3] ಭಾವಿಸೆ ವಿರುದ್ಧಮಿವಳಾಕಾರಂ ॥ ೨೨೯

ದಶರಥನಾಗಿಯುಂ ದಶಸಹಸ್ರರಥಂ ರವಿವಂಶನಾಗಿಯುಂ
ಶಶಧರಕೀರ್ತಿರೂಪನಿನನಾಗಿಯುಮಸ್ತಮಯಾಪವರ್ಜಿ ಕ ।
ರ್ಕಶಬಲನಾಗಿಯುಂ ಮೃದುವಪುಃಪ್ರಸರಂ ಮತಿತೀವ್ರನಾಗಿಯುಂ
ಪ್ರಶಮಿತಚಿತ್ತನೆಂತುಮವಿರುದ್ಧಗುಣಂ ಗುಣವಜ್ಜನಸ್ತುತಂ ॥ ೨೩೦

ಅತಿಸೂಕ್ಷ್ಮೇಕ್ಷಣನೆಂತುಮಂಧನತಿಸೌಂದರ್ಯದೊಳ್ [4]ನತಕ್ರಮಾ[4]
ನ್ವಿತನೆಂತುಂ ಪೆಱವಂ ಮಹಾಜಿಮುಖದೊಳ್ [5]ನಿರ್ಗೀತ[5]ನಮ್ಯಗ್ಗಹ ।
ಶ್ರುತನೆಂತುಂ ಬಧಿರಂ ಕರಂ ಪರಪರೀವಾದಂಗಳೊಳ್ ನೋಡ್ಪೊಡ
ದ್ಭುತಮಾಶ್ಚರ್ಯಮಭೂತಪೂರ್ವಮೆನಕಂ ಶ್ರೀಗಂಡಮಾರ್ತಂಡನಾ ॥ ೨೩೧

---

* ರುದ್ರಟ—IX, 2; IX, 30. 1 ವಿಶೇಷ್ಯಮುಂ, ವಿಶೇಷ್ಯಮುಂ (ಅ).
† ಭಾಮಹ—II, 91. 2 ದಂಶ (ಅ). 3 ಮನಕ್ಕೆ (ಅ). 4 ವಿಕ್ರಮಾ (ಅ).
5 ನಿರ್ಗಿಕ್ತ (ಅ).

ಉತ್ಪ್ರೇಕ್ಷೆಗೆ ॥

ಇರದೆ ನಿತಂಬವೆಂಬಹಿನಿವಾಸ[1] ದಿನೀಕೆಯ[1] ರೋಮರಾಜಿಯೆಂ
ಬುರಗನಳುರ್ಕೆಯಿಂ ಮೊಗಮನೊಪ್ಪುವ ಚಂದ್ರನೆಗೆತ್ತು ಕೋಪದಿಂ ।
ಬರೆ ಬರಲೀಯದತ್ತ ಮೊಲೆಗಳ್ ತಡೆದಿರ್ದಪುವೆಂದು ಪರ್ಬುವಂ
ತಿರೆ ಕವಿಯೊಳ್ ಬೆಡಂಗಿಡಿದು ತೋರ್ಕುಮಪಾಂಗದ ನೋಟಮಾಕೆಯಾ ॥

ಎಳೆಯಳ ಮೊಗದ ನೆಲ್ ತ
ಮ್ಮೊಳಗಿರೆ ನಂತನದೆ ಬೀಗಿದಂತಿರ್ದ ಕುಚಂ ।
ಗಳ ಮಱೆಯೊಳ್ ಕಾಣದೆ ಮೊಗ
ದಳವಂ ನಡು ನೆನೆದು ಬಡಬಡಾದಂತಿರ್ಕುಂ ॥ ೭೩೩

ವಾನರಪತಿ ಬಿಸುಗದಿರಿಂ
ಪೇನದೆ ತಪೆ ಪೀರ್ಗುಮೆಂಬ ಮಱುಕದಿನಂಭೋ ।
ಜಾನನನಂಬುಜವನಮಂ
ಬಾನಣಿಸಿದನೆನಿಪುವೆನೆವ ತಾವರೆಯೆಲೆಗಳ್ ॥ ೭೩೪

ನೀಲಯ [2]ರಸದೊಳ್[2] ಕರಡಿಯ
ತೋಲಂ [3]ತೊಯ್ದಿದ್ದ[3] ಮಸಿಯೊಳದಱೊಳ್ [4]ಪುದಿದ[4] ।
ತ್ರೀಲೋಕಮಕ್ಕುಮೆನಿಸಿ
ತ್ತಾ ಲೋಕವಿರೋಧಿ ಬಹಳತಮನಂತಮನಂ ॥ ೭೩೫

ಸೂತ್ರಂ ೧೭೨

ವಿಭಾವನೆ ತಿರೋಹಿತಂ

* ಕ್ರಿಯೆಯಂ ಪ್ರತಿಷೇಧಂಗೆಯೆ
ನಿಯತ[5]ಫಳ[5]ವ್ಯಕ್ತಿಯದು ವಿಭಾವನೆಯೇಕಾ ।
ಶ್ರಯಮನದೊಂದಂ ಗುಣದತಿ
ಶಯಂ ತಿರೋಹಿಸೆ ತಿರೋಹಿತಂ ತಾನಕ್ಕುಂ ॥ ೭೩೬

ಲಕ್ಷ್ಯಂ ॥

ವಿಭಾವನೆಗೆ ॥

ನಮಱಿದೆ ಕೊಂಕಿ ನೀಳ್ದಸಿಯ ಪುರ್ವುಗಳೆಚ್ಚದೆ ನಾಡೆಯುಂ ಬೆಡಂ
ಗಮರ್ದಸಿತಾಕ್ಷಿಯುಗ್ಮಮಡಿಯೂಡದೆ ಕೆಂಪೆಸೆದಿರ್ದ ಕೆಂದಳಂ ।
ಭ್ರಮರಕುಳಪ್ರ[6]ಭಾಸಿ[6] ಕುಟಿಲಾಲಕಮೊತ್ತದೆಯುಂ ನಿಸರ್ಗದಿಂ
ತಮಗೆನೆ ಗಾಡಿ ಕೆಯ್ಗುಟಿಯೆ ಬರ್ಪ ಲತಾಂಗಿಯರಾದವೊಪ್ಪಿದರ್ ॥ ೭೩೭

---

1 ದೊಳೀಕೆಯ (ಅ). 2 ರಸದಿಂ (ಅ). 3 ತೊಯ್ದುಟ್ಟಿ (ಅ), ತೊಯ್ದುರ್ದೆ (ಓ). 4 ಪುಟ್ಟಿದ (ಓ). * ಭಾಮಹ—II, 77 ; ರುದ್ರಟ—IX, 50.
5 ಪದ (ಓ.ಅ). 6 ಹಾಸಿ (ಓ.ಅ).

* [1]ಅಕುಪಿತ[1]ಕಲುಷಿ ಜಲಮಪಾ
ನಕಪ್ರಮತ್ತಂ ಶಿಖಂಡಿನಂತಾನಮಹೇ ।
ತುಕನುರಭಿ ನೀಪವಿಪಿನಂ
ನಕಳಮಹೀತಳದೊಳಾದುದಂದೊರ್ವೊದಲೊಳ್ ॥ ೬೩೮

ತಿರೋಹಿತಕ್ಕೆ ॥

† ಇನಿಯನ ವಿಯೋಗದಿಂದಾ
ದ ನಿನ್ನ ಬಡತನಮನಱಿಯಲಾಗದ [2]ದಿನಿಸುಂ[2] ।
ಘನತರಚಂದ್ರಕಲಾಭಿಷ
ವನಿಕಾಶಸ್ಪತನುಕಾಂತಿಯಿಂ ತರಲಾಕ್ಷೀ ॥ ೬೩೯

ಕಾಳಿಂದಿಯ[3]ಸಿತಜಲದೊಳ[3]
ಗೋಲಾಡುವ ಕೃಷ್ಣನಂ ಸವರ್ಣತೆಯಿಂ ಗೋ ।
ಪಾಲಕುಮಾರರ್ ನೋಡಿಯು
ಮಾಲೋಲಮನಸ್ಮರಱಿಯ[4]ದಾಕುಲ[4]ಮುತ್ತರ್ ॥ ೬೪೦

ಸೂತ್ರಂ ೧೭೩

‡ ಜನಿಯಿಸೆ ಮುನ್ನಂ ಜನ್ಯಂ
ಜನಕದಿನದು ಪೂರ್ವಮೆಂಬುದಕ್ಕುಂ ಮತ್ತಂ ।
ಪೂರ್ವಂ ಅಹೇತುಕಂ ಸ್ವನಿಮಿತ್ತದೊಳಂ ಕಾರ್ಯಂ
ಜನಿಯಿಸದಿರ್ಪಿರವಹೇತುಕಂ ಪೆಸರಕ್ಕುಂ ॥ ೬೪೧

ಲಕ್ಷ್ಯಂ ॥

ಪೂರ್ವಕ್ಕೆ ॥

ನಂದಿಸೆ [5]ಗಱು[5] ನಂದಿಸೆ ರಘು
ನಂದನನೆಡೆಗಿಱುದು ಕವಿವ ಕಣೆಯಿಂ ಮುನ್ನಂ ।
ಬಂದುದು ನೆಲಕ್ಕೆ ರಿಪುಭಟ
ವ್ಯಂದಂ ಬಟಿಯಂ ನಿಶಾತವಿಶಿಖ[6]ಪ್ರಸರಂ[6] ॥ ೬೪೨

ಸ್ಮರನ ಶರಂಗಳಿವೆನೆ ತರ
ತರದಿಂ ಪೊರೆನೆಗೆದು ಮೆಲ್ಲಮೆಲ್ಲನೆ ಬಟಿಯಂ ।
ಬಿರಿದುವು ಮಲ್ಲಿಗೆ [7]ಮುನ್ನೆಮೆ[7]
ಬಿರಿದುವು ಬಿಬ್ಬರನೆ ಬಿರಯಿಜನದಳ್ಳೆರ್ದೆಗಳ್ ॥ ೬೪೩

---

* ಭಾಮಹ—II, 78. 1 ಅಕುಟಿಲ (ಅ), ಅಕುಟಿತ (ಓ). † ರುದ್ರಟ—IX, 51. 2 ದೆನಸುಂ (ಅ.ಓ). 3 ನಡುನೀರೊಳ್ (ಓ.ಅ). 4 ರಾಕುಲ (ಅ). ‡ ರುದ್ರಟ—IX, 3 ; IX, 54. 5 ಗಱು (ಓ). 6 ಪ್ರಕರಂ (ಅ). 7 ಮುನ್ನಂ (ಅ).

ಅಹೇತುಕಕ್ಕೆ ॥

ಪೆತ್ತುಂ ತೆಳ್ಪಟಿಯದ ನಡು
ಮುತ್ತುಂ ಬೀಱದ ಪಯೋಧರಂ ಮುನಿದುಂ ಚೆ ।
ಲ್ವೊತ್ತಿರಿಪ ನಗೆಮೊಗಂ ಮೆ
ಯ್ವೆತ್ತಿರೆ ಕರಮೊಪ್ಪಿದಪ್ಪರಲ್ಲೆಯ ಪೆಂಡಿರ್ ॥ ೭೪೪

* ಸಕಲುಷವಿಕೃತಾಶಯರೊಳ
ಮಕೋಪನಂ ಕುಟಿಲವೃತ್ತರೊಳಮತಿಋಜು ದೂ ।
ಷಕರೊಳಮರೂಕ್ಷವಚನಂ
ಸಕಲಮಹೀವಳಯತಿಳಕನೀ ಬುಧತಿಳಕಂ ॥ ೭೪೫

ಸೂತ್ರಂ ೧೭೪

† ಅತಿಬಹಲಸ್ಥಿತಿಯಿಂ ಸಂ
ತದ್ಗುಣಂ, ಪರಸ್ಪರಾ ಸಂಗತಿಕಂ — ಗತಗುಣಮವಿಭೇದಿಯಾಗೆ ತದ್ಗುಣಮೆನಿಕುಂ ।
ಕೃತಕಾರ್ಯಕಾರಣಂ ವಿ
ಪ್ರತಿಷಿದ್ಧಮದೆನೆ ಪರಸ್ಪರಾಸಂಗತಿಕಂ ॥ ೭೪೬

ಲಕ್ಷ್ಯಂ ॥

ತದ್ಗುಣಕ್ಕೆ ॥

ಯಮುನಾಪಗೆ ಸುರನದಿಯಂ
ಕಮಳೋದರನಿಂದುಮೌಲಿಯಂ ನೀಲನಗಂ ।
ಹಿಮಗಿರಿಯಂ ಪ್ರೋಲ್ತರ್ಪಿನ
ಮಮಲಯಶೋರುಚಿ ಪ್ರೊದಳ್ದುದಿಳೆಗಿಂದರನಾ ॥ ೭೪೭

ಇದು ಕಿಱುದಿದು ಪಿರಿದಿದು ಕುಟಿ
ಯಿದು ತೆಮರಿದು ಬಕ್ಕಬಯಲಿದಾಶ್ರಯಮಿದು ಗೆಂ ।
ಟಿದು ನಾರೆಯೆಂಬ ನಿರ್ಣಯ
ಮದಾದುದಿರ್ಪೊದವಿ ಪುದಿದ ಮರ್ಬಿನೊಳಾಗರ್ಪಂ ॥ ೭೪೮

ಪರಸ್ಪರಾಸಂಗತಿಕಕ್ಕೆ ॥

ಹಿಮಕುಮುದಕುಂದಶಶಿಧವ
ಲಮೆನಿಪ ನಿಜಕೀರ್ತಿಯೆನಕದಿಂದಮಿಳಾಲೋ।
ಕಮನೆಯ್ದೆ ರಕ್ತಮಪ್ಪಂ
ತು ಮಾಡಿದಂ ಕೃಷ್ಣನಿಂತಿದೇನಚ್ಚರಿಯೋ ॥ ೭೪೯

---

* ರುದ್ರಟ—IX, 55. † ರುದ್ರಟ—IX, 24 ; *Cf.* X, 48.

ಸೂತ್ರಂ ೧೭೫

* ಒದವಿದ ಸಾಮಗ್ರಿಯೊಳೇ
ವಿಶೇಷೋಕ್ತಿ ಕದೇಶಮೈಕಲ್ಯಮಾಗೆಯುಂ ಮತ್ತಂ ತ ।
ತ್ಸದೃಶಫಲಸಿದ್ಧಿಯಂ ತೋ
ರ್ಪುದದು ವಿಶೇಷೋಕ್ತಿಯೆಂಬಲಂಕೃತಿಯಕ್ಕುಂ ॥ ೭೫೦

ಲಕ್ಷ್ಯಂ ॥

† ರಥವೊಂದೆಗಾಲಿಯದು ಸಾ
ರಥಿಯಪ್ಪೊಡೆ ಪೆಬವನಸಮಮಶ್ವಮವೆಂತುಂ ।
ಪ್ರಥಿತಪ್ರತಾಪದಿಂದಂ
ಮಥಿತಪ್ರತಿಪಕ್ಷನುದಯಿಯಾದಂ ದಿನಪಂ ॥ ೭೫೧

ಧನುವುಂ ಕರ್ಬಿನ ಬಿಲ್ ಗಡಂ [1]ಗೊಣೆ[1]ಯಮುಂ ನೀರೇಜಸೂತ್ರಂ ಗಡಂ
ನನೆಗಳ್ ಬಾಣಚಯಂ ಗಡಂತತನು ತಾಂ ಮತ್ತಂ ಮನಂ [2]ನೊಂದು ನಿ ।
ರ್ಬನಿ[2]ಪಂತಾರ್ದಿಸುತಿರ್ಪನುರ್ಚಿದೆರ್ದೆಯೊಳ್ [3]ಪುಣ್ಣಿತ್ತರೆಂದಿಂತಿದಿ
ಲ್ಲಿನಿಸುಂ[3] ಮನ್ಮಥಶಸ್ತ್ರಕಲ್ಪಮಿದು ದಲ್ ಬೇಱೊಂದು ಶಿಕ್ಷಾಕ್ರಮಂ॥ ೭೫೨

ಇವು ಅತಿಶಯಭೇದಂಗಳ್ ॥

ಸೂತ್ರಂ ೧೭೬

‡ ಎರಡರ್ಥಮೊಂದೆ ಶಬ್ದಾಂ
ತರದೊಳ್ ನೆಗಟ್ಪಂತು [4]ಪೇೞ್ವುದ[4]ರ್ಥಶ್ಲೇಷಂ।
ಅರ್ಥಶ್ಲೇಷಂ ದೊರೆಕೊಳೆ ಶಬ್ದಾವಯವದೊ
ಶಬ್ದಶ್ಲೇಷಂ ಳೆರಡಭಿಮತಶಬ್ದಮಱಿಗೆ ಶಬ್ದಶ್ಲೇಷಂ ॥ ೭೫೩

ಸೂತ್ರಂ ೧೭೭

§ ತತ್ವಂ ವ್ಯಾಜಸ್ತುತಿಯವಯ[5]ವಸ್ಥಂ[5] ವಿರೋಧಾವಭಾಸಾ
ಶ್ಲೇಷ ರ್ಥತ್ವಂ ಮಿಕ್ಕರ್ದಧಿಕಮವಿಶೇಷಾತ್ಮಕಂ [6]ವಸ್ತ್ವ[6]ಸಂಭಾ ।
ಭೇದಂಗಳ್ ವ್ಯತ್ಯಂ ವಕ್ರೋಕ್ತ್ಯನುಗತಮುಮೆಂದಿಂತು ತಾತ್ಪರ್ಯದಿಂದಂ
ತತ್ವಜ್ಞರ್ ವಿಸ್ತರಿಸೆ ನೆಗಟ್ಟುಂ ಶ್ಲೇಷ[7]ಭಾಗ[7]ಪ್ರಭೇದಂ ॥

---

* ದಂಡಿ—II, 323. † ದಂಡಿ—II. 328, 1 ಡೊಣೆ (ಓ), ಗೊನೆ, ಗೊಲೆ (ಅ). 2 ಮೊಂದುನಿರ್ಬನಿ (ಅ). 3 ಪುಣ್ಬಿತ್ತದೆಂದಿಂತಿವೆಲ್ಲಿನಸುಂ. ‡ ರುದ್ರಟ—X, 1 4 ಪೇೞ್ದೊಡರ್ಥ (ಅ). § ರುದ್ರಟ—X, 2. 5 ವಿತ್ಸಂ (ಅ). 6 ವಸ್ತು (ಅ). 7 ಭೇದ (ಓ).

ಸೂತ್ರಂ ೧೭೫

ಅಲ್ಲ ॥

* [1]ಬಗೆಗೆ ಪೆಱಿತರ್ಥಮೊಂದಂ[1]

ತತ್ಪಂ ನೆಗಟ್ಟುತುಂ ನೆಗಟ್ಪ ತತ್ಪವರ್ಣನೆ ತತ್ಪಂ ।
ವ್ಯಾಜಸ್ತುತಿ ತಗುಳೆ ಪಟಿ[2]ವಂತೆ[2] ಕೆಯ್ಮಿಗೆ
ಪೊಗಟ್ಪುದು ತಾಂ ವ್ಯಾಜಸಂಸ್ತವಾಖ್ಯಮೆನಿಕ್ಕುಂ ॥ ೭೫೫

ಲಕ್ಷ್ಯಂ ॥

ತತ್ಪಕ್ಕೆ ॥

ವರಗೋಮೇದಕವಿಸ್ಫುರ[3]ದ್ವಸನ[3]ನನುದ್ಯತ್ಪದ್ಮರಾಗೋಲ್ಲಸ
ಚ್ಚರಣಂ ನೀಲ[4]ರುಚಿ[4]ಪ್ರವಾಲಸಿತನೀಷಲ್ಲೋಹಿತಾಕ್ಷಂ ಮನೋ ।
ಹರಮುಕ್ತಾಮಯವಜ್ರಸಂಹನನನೇಮಾತೀ ಮಹಾತ್ಮಂ ನೃಪೇ
ಶ್ವರರತ್ನಂ ವಿಲಸತ್ಸುವರ್ಣದೊರೆವೆತ್ತಿರ್ಕುಂ ಭವತ್ಸಂಗದಿಂ ॥ ೭೫೬

ವ್ಯಾಜಸ್ತುತಿಗೆ ॥

ವಾತಿ ಪರವೆಣ್ಗೆ ಶರಣಾ
[5]ಯಾತಂಗನುರಂ ಬಿಯಕ್ಕೆ[5] ಗುಪ್ತಂ ರಿಪುಸಂ ।
ಘಾತಕ್ಕೆ ಪರಾಕ್ರಮ[6]ನೆನೆ[6]
ಭೂತಲಮೇನೆಂದು ಕೇಶಿಯಂ ಬಣ್ಣಿಪುದೋ ॥ ೭೫೭

ಜೋಡೆ ಕರಮಡಿ[7]ಯಳಾ[7]ರೊಡ
ಗೂಡಿಯುಮವರ್ಗಲ್ಲಳೆನಿಪ ವಸುಧಾಂಗನೆಯಂ ।
ಕೋಡೊಳೆ ತಳೆದುಂ ಸೊಬಗಿನ
ಗಾಡಿಗೆ [8]ಮುಯ್ಯಾಂತ[8] ಸೊಬಗಿದಾ[9]ವುದು[9] ಗಜೆಗಾ ॥ ೭೫೮

ಸೂತ್ರಂ ೧೭೪

† ಅವಯವಮುಖದಿಂ ಸಮುದಾ
ಅವಯವಂ ಯವಿಶೇಷಣಮನ್ಯವಸ್ತುಗಮಕ[10]ಮದಾದಂ[10] ।
ವಿರೋಧಾಭಾಸಂ ದವಯವಮವಿರುದ್ಧಂ ನೋ
ಡೆ ವಿರುದ್ಧಸ್ಥಿತಿಯೊಳಿರೆ ವಿರುದ್ಧಾಭಾಸಂ ॥ ೭೫೯

---

* ರುದ್ರಟ—X, 20, 11; ದಂಡಿ—II, 343. 1 ಬಗೆಪೆಱಿತುಮರ್ಥಮೊಂದುಂ (ಅ). 2 ವನಿತೆ (ಅ). 3 ದ್ಧಶನ (ಅ). 4 ಮಣಿ (ಅ). 5 ಯಾತಕ್ಯಸುರಂ ವ್ಯಯಕ್ಕೆ (ಅ). 6 ಮೆನೆ (ಅ). 7 ಯೊಳಾ (ಅ). 8 ಮುಯ್ಯಾಂತ (ಅ). 9 ವುದೊ (ಅ). † ರುದ್ರಟ—X, 18, 22. 10 ದೊಳಮರ್ದಂ (ಅ).

ಲಕ್ಷ್ಯಂ ॥

ಉಪಯವಕ್ಕೆ ॥

ಬಳಭದ್ರಂ ಭುಜದೊಳುರ
ಸ್ಥಳದೊಳ್ ಪೃಥು ವಿತತಯಶದೊಳರ್ಜುನನೀತಂ ।
ಕಳಿಕಾಲದೊಳಂ ತನ್ನೊಳ್
ತಳೆದಿರ್ದಂ ಪೂರ್ವಭೂಮಿಪಾಲಸ್ಥಿತಿಯಂ ॥ ೬೬೦

ವಿರೋಧಾಭಾಸಕ್ಕೆ ॥

ಅನುಗತಕರ್ಣಂ ಕೃಷ್ಣಾ
ರ್ಜುನಾನುರಕ್ತಂ ವಿಲೋಚನಂ ದೋರ್ದಂಡಂ ।
ಘನದೃಢಬಲಂ ಪ್ರಲಂಬಂ
ತನಗೆನೆ ಪಿರಿದುಂ ವಿರುದ್ಧಮಿಾ ನೃಪನಂದಂ ॥ ೬೬೧

ಸೂತ್ರಂ ೧೮೦

* ಆರಬ್ಧಕ್ಕಧಿಕಮಸಾ
ಧಾರಣಗುಣಮಧಿಕಮೆಂಬುದಕ್ಕುಂ ಸದೃಶಾ ।
ಕಾರವಿಶೇಷಣಮರ್ಥಮು
ದಾರಂ ಬೇಱೊಂದು ತೋರ್ಪೊಡವಿಶೇಷಾಖ್ಯಂ ॥ ೬೬೨

ಅಧಿಕಂ
ಅವಿಶೇಷಂ

ಲಕ್ಷ್ಯಂ ॥

ಅಧಿಕಕ್ಕೆ ॥

ಅಂಗುಳೊಳಡಸಿದ ವಿಷಮುಂ
ಭಂಗುರತರವಿಷಮದೃಷ್ಟಿಯುಂ ವ್ಯಾಳಸಮಾ ।
ಸಂಗಮುಮಮರ್ದಿರೆ ಮದನಹ
ರಂಗೆಣೆಯೆನಿಪುದಱಿನೆಮಗೆ ಖಳರಭಿವಂದ್ಯರ್ ॥ ೬೬೩

ಅವಿಶೇಷಕ್ಕೆ ॥

ಗುರುಪರಿಣಾಹಂಗಳ್ ಪೀ
ವರಂಗಳುನ್ನತಿಯುತಂಗಳುರ್ವರೆಗೆ ಮನೋ ।
ಹರಕುಚಮಂಡಳದಂತಿರೆ
ಕರಮೆಸೆವುವು ವಿಮಳದರ್ಪರಾದ್ರಿಗಳೆರಡುಂ ॥ ೬೬೪

---

* ರುದ್ರಟ—X, 3, 7, 8.

ಸೂತ್ರಂ ೧೪೧

* ಪೆಸರೊಳಸಂಭವಮೆನಿಸುಗು
ಮಸಂಭವಂ ತದ್ವಿಶೇಷಣಂ ಪೃಥಗರ್ಥಂ ।
ಪೊಸಯಿಸೆ ಭಿನ್ನರಸಂ ಸು
ಪ್ರಸಿದ್ಧವಾಚ್ಯದೊಳದಲ್ತೆ ವಕ್ರೋಕ್ತಿ ಕರಂ ॥ ೭೬೫

ಅಸಂಭವಂ
ವಕ್ರೋಕ್ತಿ

ಲಕ್ಷ್ಯಂ ॥

ಅಸಂಭವಕ್ಕೆ ॥

ಅವ್ಯಪಚ್ಛೇದನನತಿಥವ
ಳವರ್ಣನುತ್ಸಾರಿತಾರಿ ಬೇಱೊರ್ವಂ ದಾ ।
ನವಮಥನನೀತನೆನಿಸಿದ
ನವನಿಗೆ ಪುರುಷೋತ್ತಮಾನುಭಾವಂ ಕೃಷ್ಣಂ ॥ ೭೬೬

ವಕ್ರೋಕ್ತಿಗೆ ॥

ವೀರರನ[1] ಪ್ರವಿದಾರಣ[1]
ಮಾರಣಸಂಪ್ರಾಪ್ತಕೌಶಲಂ ಭಾವಿಸೆ ರಂ ।
ಭೋರು ನರೇಂದ್ರತೆಯಂ ವಿ
ಸ್ತಾರಿಸಿದಪನಂಗನಂಗಸಿದ್ಧಿಯೊಳೀತಂ ॥ ೭೬೭

ಸೂತ್ರಂ ೧೪೨

ಪದವರ್ಣವಿಭಕ್ತಿವಿಭಾ
ಗದಿಂ ದ್ವಿಧಾರೂಪಮಿಷ್ಟ[2]ಮಕ್ಲಿಷ್ಟಂ[2] ಶ ।
ಬ್ದದೊಳಾಗಿ [3]ತೋಱುವಂದಂ[3]
ತದು ಭಂಗಶ್ಲೇಷಮೆಂದು ಪೇೞಲ್ಪಡೆಗುಂ ॥ ೭೬೮

ಭಂಗಶ್ಲೇಷಂ

ಲಕ್ಷ್ಯಂ ॥

ಸ್ವಗತಾನಲಸನ್ಮಣಿರ
ಶ್ಮಿಗಾಢಮಗಣಿತ[4]ಜಲದ್ವಿ[4]ಪಾವಳಿ ಕಡಲಂ ।
ಮಿಗೆ ವಂದಮರಗಜೇಂದ್ರಂ
ಸೊಗಯಿಸು[5]ವುದು[5] ದಾನವಾರಿರೇಖಾನುಗತಂ ॥ ೭೬೯

---

* ರುದ್ರಟ—X, 16, 9. 1 ಪ್ರದಚಾರಣ (ಅ.ಇ). 2 ಮಾಕ್ಲಿಷ್ಟಂ (ಅ). 3 ತೋರ್ಪತೆಱನಂ (ಅ). 4 ಜಗದ್ವಿ (ಓ.ಅ). 5 ಗುಂ (ಅ).

ಸೂತ್ರಂ ೧೪೩

* ಯೋಗಂ ಪಲವುಮಲಂಕೃತಿ
ಸಂಶ್ಲೇಷಂ ಗಾಗಿರೆ ಸಂಶ್ಲೇಷವೆಂಬುದನ್ವರ್ಥಗತಂ ।
ಯೋಗಮುಮಂಗಾಂಗಿಪ್ರವಿ
ಭಾಗಂ ಸಮಕಕ್ಷಮೆಂದೆರಡ್ತೆ ಜನಕ್ಕುಂ ॥ ೨೭೦

ಲಕ್ಷ್ಯಂ ॥

† ಸ್ವಭಾವಗಂಭೀರನಲಂಘ್ಯವೈಭವಂ
ಪ್ರಭೂತರತ್ನಂ ನೃಪನಂಬುರಾಶಿಪೋಲ್ ।
ವಿಭೀಷಣಗ್ರಾಹಮವಧ್ಯಮರ್ಣವಂ
ಪ್ರಭೂತಸಾರಂ ಸುಖಸೇವ್ಯನೀ ನೃಪಂ ॥ ೨೭೧

ಸೂತ್ರಂ ೧೪೪

‡ ಪ್ರೇಯಂ ಪ್ರಿಯತರವಚನಾ
ಪ್ರೇಯಂ ಖ್ಯೇಯಮಹಂಕಾರಗರಿಮಮೂರ್ಜಸ್ವಿ ಶುಭ ।
ಊರ್ಜಸ್ವಿ ಆಶಿ [1]ಪ್ರಾಯಾರ್ಥಾಶಂಸಾಭಿ[1]
ಪ್ರಾಯಮಲಂಕಾರಮಾಶಿಯೆಂಬರ್ ಕೆಲಬರ್ ॥ ೨೭೨

ಲಕ್ಷ್ಯಂ ॥

ಪ್ರೇಯಕ್ಕೆ ॥

ನೆಲನನವಯವದೆ ತಳರದೆ
ನಿಲೆ ತಾಳ್ದಿದ ಮೆಯ್ಗೆ ಮೆಲ್ಲಮಾನಲ್ಕರಿದಾ ।
ಯ್ತಲಘುಪ್ರಸಾದದಿಂ ನೀ
ನೊಲಿದೆಟ್ಟರೆ [2]ಮನೆಗೆ[2] ಮನದೊಳಾದನುರಾಗಂ ॥ ೨೭೩

ಊರ್ಜಸ್ವಿಗೆ ॥

[3]ಕೆಳದೀ[3] ಬಿಲ್ಲುಮನಂಬುಮ
ನಳೀಕಧಟವಿಕಟವೇಷಮಂ ಬಿನುಟೀಗಳ್ ।
ಮುಳಿಯಿಸದೆನ್ನಂ ಮಗುಟ್ಟುಂ
ಬಳೆದೊಚ್ಚೊಡೆ ಗೆಲ್ವಯಂಬುದೊಚ್ಚೊಡೆ [4]ಗೆಲ್ಲಯ್[4] ॥ ೨೭೪

---

* ಭಾಮಹ—III, 49 ; ದಂಡಿ—II, 359, 360. † ಭಾಮಹ—III, 50.
‡ ದಂಡಿ—II, 275. 1 ಪ್ರಾಯಾರ್ಥಾಂಶು ಸಾಭಿ (ಅ). 2 ಮನಕೆ (ಓ.ಅ).
3 ಕಳಲದೆ. 4 ಗೆಲ್ವಯ್ (ಅ.ಓ).

ಆರ್ಯೆ ॥
ನೆಲೆಗೊಳ್ಗೆ ನಿಜಭುಜಾಸಿಯೊ
ಳೊಲಿದು ಜಯಾಂಗನೆ ವಿರೋಧಿವಂಶಾವಳಿಯಂ ।
ನೆಲೆಗಿಡಿಸಿ ನಿನ್ನ ತೇಜೋ
ಜ್ವಲನಂ ತಳ್ತಬ್ಬಿಕೊಳ್ಗೆ ವಿಕ್ರಮತುಂಗಾ ॥ ೭೭೫

ಸೂತ್ರಂ ೧೪೫

* ಭಾವಿಕಮೆಂದರೆಬರ್ ಕವಿ

ಭಾವಿಕಂ ಭಾವಗತಾರ್ಥ[1]ಮನೆ[1] ತಾಮಲಂಕೃತಿ[2]ಗಳೊಳು[2] ।
ದ್ಭಾವಿಸಿ ಪೇೞ್ವರ್ ಶಕ್ತಿನ
ಮಾವಿರ್ಭೂತಪ್ರಬಂಧವಿಷಯಮದಕ್ಕುಂ ॥ ೭೭೬

ಸೂತ್ರಂ ೧೪೬

ಸ್ಥಾನೋಪವರ್ಣನಂ ಶ
ಬ್ದಾನಾಕುಳಭಾವಮದ್ಭುತಾರ್ಥತ್ವಂ ಸ್ವಾ ।
ಧೀನರಸವೃತ್ತಿ ಸಂಬಂ
ಧಾನುಗಮಂ ಭಾವಿಕಕ್ಕೆ ಭಾವಮಿವಕ್ಕುಂ ॥ ೭೭೭

ಇದು ಗುಣವಿವೇಕದೊಳ್ ಅರ್ಥಾಲಂಕಾರಪ್ರಕರಣಂ ತೃತೀಯಂ ॥

ಗೀತಿಕೆ ॥ ಈ ತೆಱದಿಂದರ್ಥಾಲಂಕೃತಿ
[3]ಯೋತು ವಿಭೇದಮನಾದಮೆಲ್ಲಮಂ[3] ।
ನೂತನಮಾರ್ಗಮೆಸೆಯೆ [4]ಪೇೞ್ದಂ[4]
ಖ್ಯಾತಯಶಂ ಕವಿತಾಗುಣೋದಯಂ ॥ ೭೭೮

ಶ್ರುತದೇವೀಮಕರಂದಕಲ್ಪಲಪನಂ ವಾಕ್‌ಶ್ರೀನಿವಾಸಾಂಬುಜಾ
[5]ಯಿತ[5]ವಕ್ತ್ರಂ ರಸಭಾವಭಾಸುರಸಮುದ್ಯದ್ಭಾರತೀನರ್ತನೋ ।
ಚಿತರಂಗಪ್ರತಿಮಾನನಂ ಪ್ರವಿಲಸದ್ವಾಕ್ಕುಂದರೀಕುಂಕುಮಾಂ
ಕಿತಕೇಳೀಭವನಾಜಿರೋಪಮಮುಖಂ ಭೂಭಾಗದೊಳ್ ನಾಕಿಗಂ ॥ ೭೭೯

ಇದು ಸಕಲಸುಕವಿಜನಮನಸ್ಸರೋಜಿನೀರಾಜಹಂಸಾಯಮಾನಾ
ನೂನಕವಿತಾಗುಣೋದಯಂ ಶ್ರೀನಾಗವರ್ಮವಿರಚಿತಮಪ್ಪ
ಕಾವ್ಯಾವಲೋಕನದೊಳ್ ಗುಣವಿವೇಕಾಧಿಕರಣಂ
ತೃತೀಯಂ

---

* ದಂಡಿ—II, 363. Cf. 1 ಮೆನೆ (ಅ). 2 ಯೊಳಗು (ಅ). 3 ಯಾಂತಃ ಪಾದೆ ವಿಚ್ಛೇದಮನಾದುಮೆಲ್ಲಮಂ (ಓ), ಯಂತಃಪಾತವಿಭೇದಮನಾದವನೆಲ್ಲಂ (ಅ). 4 ಪೇೞ್ದಂ (ಅ). 5 ಯತ (ಅ).

ರೀತಿಕ್ರಮರಸನಿರೂಪಣಾಧಿಕರಣಂ

ರೀತಿಪ್ರಕರಣಂ

ಸೂತ್ರಂ ೧೪೭

ರೀತಿ ವಿನೂತವೆನ್ದು ಕೃತಿಗೊಪ್ಪುವ ಮೆಯ್ ರಸಭಾವವೃತ್ತಿನಿ
ರ್ಣೀತಿಯೆ ಜೀವಮಂತದಱಿನನ್ವಿತ[1]ನಪ್ಪ[1] ಕವೀಶ್ವರಂ ಬುಧ ।
ವ್ರಾತಮೊಱಿಲ್ದು [2]ಬಿಚ್ಚಟಿಸಿ[2] ನಚ್ಚುವಳಂಕೃತಿ ಕೂಡದಿರ್ದೊಡಂ
ರೀತಿಯೊ[3]ಳೊಂದೆ[3] ಪೇೞ್ವುದು ರಸಂ ಬಿಡೆ ಬಂಧುರಕಾವ್ಯಬಂಧಮಂ॥

ಸೂತ್ರಂ ೧೪೮

* ಪದರಚನಾತಿಶಯಂ ರೀ
ರೀತಿ ತಿ ದಲದುವುಂ ನಿಯತವರ್ಣಗುಂಫನಗುಣದೊಂ ।
[4]ದೊದವಿಂ[4] ಮೂದೆಱಿನಕ್ಕುಂ
ವಿದರ್ಭಪಾಂಚಾಲಗೌಡವಿಷಯನಿಬದ್ಧಂ ॥ ೭೮೧

ಸೂತ್ರಂ ೧೪೯

ಅಸಮಸ್ತಪದನ್ಯಾಸಂ
ವೈದರ್ಭರೀತಿ ಪ್ರಸಾದಮಾಧುರ್ಯಗುಣಸಮಗ್ರಮುದಾರಂ ।
ರಸಭಾವಭಾವಿತೋಕ್ತಿ
ಪ್ರಸರಂ ವೈದರ್ಭರೀತಿಯೆನೆ ಪೆಸರ್ವಡೆಗುಂ ॥ ೭೮೨

ಲಕ್ಷ್ಯಂ ॥

ಮನಪೊಲ್ದಾತನ ಗಾಡಿಯಂ ದರಪುರಂಗಂಡಾಕೆಗಳ್ ಪೂವಿನಂ
ಬಿನ ಕೋಳ್ಗಂ ಕುಳಿರ್ವಾಲಿನೀರ್ಗಮಲರ್ವಾಸಿಂಗಂ ಕುಳಿರ್ಕೊೞ್ಬು ನಂ ।
ದನಕಂ ಚಂದನಕಂ ಪಸುರ್ಪೆಸೆವ ಬಾಳೊಂಪಕ್ಕವೊಂದೊಂದೆ ತ
ಣ್ಬನಿಯೊಳ್ ಕೋಡಿಸುತಿರ್ಪ ಬಿಜ್ಜಣಿಗೆಗಂ ಪಕ್ಕಾಗದೇಂ ಶ್ರೋಪರೇ ॥ ೭೮೩

---

1 ಮಷ್ಟ (ಅ). 2 ಬಿಚ್ಚಟಿಪೆ (ಅ). 3 ಳೊಂದಿ (ಅ). * ವಾಮನ—I. 11, 6, 7, 8, 9. 4 ದೊಡನಿದೆ (ಅ).

ಸೂತ್ರಂ ೧೯೦

ದ್ವಿತ್ರಿಪದರಚಿತವೃತ್ತಿ ವಿ
ಪಾಂಚಾಲರೀತಿ ಚಿತೌಪಮ್ಯಾದ್ಯಲಂಕ್ರಿಯಾಸಮುಪೇತಂ ।
ಶ್ರೋತ್ರಸುಖಲಲಿತಮೃದುಪದ
ಪಾತ್ರಂ ಪಾಂಚಾಲರೀತಿ[1]ಯೆನೆ ಪೆಸರ್ವಡೆಗುಂ[1] ॥ ೭೪೪

ಲಕ್ಷ್ಯಂ ॥

ಇನಿಯನ ಕೆಂದಳಂ ತಳಮನೊಯ್ಯನೆ ಸೋಂಕೆ ಪೊದಳ್ದ ನಾಣ ಪೆಂ
ಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾನಾದ್ಯೆ ಬ ।
ಚ್ಚನೆ ಬಸಿಯುತ್ತುಮಿಂದುಕರನಂಕುಳವೊಯ್ಯನವುಂಕಿ ಸೋಂಕೆ ಸೋಂ
ಕಿನೊಳೊಱೆವಿಂದುಕಾಂತಮಣಿಪುತ್ರಿಕೆಯಂದದಿ[2] ನಾದವೊಪ್ಪಿದಳ್[2] ॥ ೭೪೫

ಸೂತ್ರಂ ೧೯೧

ಅತಿದೀರ್ಘಸಮಾಸಾಂಚಿತ
ಗೌಡರೀತಿ ಗತಿಶಬ್ದಾಡಂಬರಾನುವಿದ್ಧಂ [3]ಕ್ರೋಧಾ ।
ದ್ಭುತ[3]ರೌದ್ರವೀರರಸಸಂ
ಗತಮಂತದು ಗೌಡರೀತಿ [4]ಪರುಷ[4]ಪ್ರಾಯಂ ॥ ೭೪೬

ಲಕ್ಷ್ಯಂ ॥

[5]ವಂಗಾಂಗಾಂಧ್ರ[5]ಕಳಿಂಗಕೊಂಗ[6]ವಿಸರ[6]ತ್ಪಾದಾತಪಾಠೀನಮು
ದ್ಯಂಗತ್ತುಂಗತುರಂಗಭಂಗುರತರಂಗಾಕೀರ್ಣಮುಚ್ಚೈಂಖಳೋ ।
ತ್ತುಂಗೋನ್ಮತ್ತಮತಂಗಜಪ್ರಕರಯಾದಸ್ಸಂಕುಳಂ ಕೂಡೆ ನೋ
ಟ್ಪಂಗಂದದ್ಭುತಮಾಗಿ ತೋಱಿ ಮನಗಿತ್ತುರ್ವೀಶಸ್ಯೈನ್ಯಾರ್ಣವಂ ॥ ೭೪೬

ಸೂತ್ರಂ ೧೯೨

ಕಾರುಣ್ಯಂ ಹಾಸ್ಯಂ ಶೃಂ
ಗಾರಮಿವಿನಿತಱೊಳಮಕ್ಕೆ ಮೈದರ್ಪಿ ಮನೋ ।
ಹಾರಿಪ್ರಳಯಾದ್ಭುತರಸ
[7]ವೀರರಸಂ[7]ಗಳ್ಗೆ ಪೇಳ್ದ್ಗೆ ಪಾಂಚಾಳಿಕೆಯಂ ॥ ೭೪೭

---

1 ಯೆಂಬುದಕ್ಕುಂ (ಅ). 2 ನೊಪ್ಪಕೋಱುದಳ್ (ಅ). 3 ಕ್ರೋಧೋದ್ಭುತ (ಅ).
4 ಪುರುಷ (ಅ) 5 ವಂಗೀವಂಗ (ಅ). 6 ವಿಳಸ (ಅ). 7 ವೀರಾಖ್ಯಂ.

ಸೂತ್ರಂ ೧೯೩

ಎಸೆಗುಂ ರೌದ್ರಭಯಾನಕ
ರಸಬೀಭತ್ಸೋಕ್ತಿ ಗೌಡರೀತಿಯಿನದಱೊಳ್ ।
ಪೊಸಯಿಸುಗುಂ ಮೇಣ್ ನಿಸದಂ
ರಸವತ್ವಮತಿಪ್ರತೀತಿ[1]ವೃತ್ತ್ಯ್[1]ಶ್ರಯದಿಂ ॥ ೨೮೯

ಸೂತ್ರಂ ೧೯೪

ಅರೆಬರ್ ದೀರ್ಘಸಮಾಸಂ
ಬೆರಸಿರೆ ಶೃಂಗಾರರಸಮುಮಂ ಪೇೞ್ವರ್ ಬಿ ।
ತ್ತರಿಸುವರಸಮಾಸಪದಾಂ
ತರಂಗಳೊಳಗುಚಿತಮಾಗಿ ರೌದ್ರಾದಿಯುಮಂ ॥ ೨೯೦

ಲಕ್ಷ್ಯಂ ॥

ಶೃಂಗಾರರಸಕ್ಕೆ ॥

ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ
ರವಝಂಕಾರಿತಚಾರುವಾಮಚರಣಾಘಾತಂ ಚಳದ್ಭೂಲತಾ ।
ಗ್ರವಿಭಾಗೋತ್ಕಟತರ್ಜನಂ ತರಳತಾತಾಮ್ರಾಧರಂ ಚಕ್ಕಿಗಿ
ತ್ತುವಲಂಪಂ ಪ್ರಣಯಪ್ರಕೋಪನುರತಪ್ರಾರಂಭದೊಳ್ ಕಾಂತೆಯಾ ॥೨೯೧

ರೌದ್ರಾದಿಗೆ ॥

ಇರದೆಂಟುಂ ದಿಗ್ಗಜಂಗಳ್ ನೆರದಿರದಿದಿರಂ ತಾಗೆಯುಂ ಮಂದರಕ್ಷ್ಮಾ
ಧರದೊಳ್ ಕೆಯ್ಗೂಡಿ ಗೋತ್ರಾದ್ರಿಗಳೆ ಗಜಘಟಾರೂಪದಿಂ ತಾಗೆಯುಂ ಮ।
ತ್ಕರಿತಾಂಗರ್ ತಾನೆ ನಾಲ್ಗುಂ ಪೆಱಪೆಱಪು ಘಟಾಬಂಧಮೇ ಭಂಡಮೆಂದೊಂ
ದು ರಣೋತ್ಸಾಹಂ ಮನಕ್ಕುಬ್ಬರಿಸಿರೆ ಸಮರಾಜೋಪಮಂ ತಾಳ್ದಿ ನಿಂದಂ ॥

ಇದು ರೀತಿಕ್ರಮರಸನಿರೂಪಣದೊಳ್ ರೀತಿಪ್ರಕರಣಂ ಪ್ರಥಮಂ ॥

---

1 ನೃತ್ಯ್.

ರಸಪ್ರಕರಣಂ

ಸೂತ್ರಂ ೧೪೫

ಶೃಂಗಾರಾದಿಗಳಪ್ಪ ರ
ಸಂಗಳ್ ವರ್ತಿಸುಗು[1]ಮಂತವೆಂಚೆ[1] ವಲಂ ಕಾ ।
ವ್ಯಾಂಗಕ್ಕೆ ಸತ್ಕ್ರಿಯಾರೂ
ಪಂಗಳ್ ರತ್ಯಾದಿಭಾವಸಂಪನ್ನಂಗಳ್ ॥ ೭೯

ಸೂತ್ರಂ ೧೪೬

* ರತಿ ಪರಿಹಾಸಂ ಶೋಕೋ
ದ್ಯತಮುತ್ಸಾಹಂ ಭಯಂ ಪ್ರಕೋಪಂ ವಿಜುಗು ।
ಸ್ಥಾಯಿಭಾವಂ ಪ್ಪತೆ ವಿಸ್ಮಯಾಶಯತ್ವಂ
ಪ್ರತಿನಿಯತಸ್ಥಾಯಿಭಾವಮಿವು ತಾಮಕ್ಕುಂ ॥ ೭೯

ಸೂತ್ರಂ ೧೪೭

† ಮತಿನಿರ್ವೇದಾವಹಿತ್ಥ ಶ್ರಮಮದಜಡತಾಗ್ಲಾನಿಚಿಂತೋಗ್ರತೇರ್ಷ್ಯಾ
ಸಂಚಾರಿ ಧೃತಿನಿದ್ರಾ[2]ವೇಗ[2]ಶಂಕಾತ್ರಸನಚಪಲತಾಲಸ್ಯ[3]ಸುಪ್ತಾವಬೋಧ[3] ।
ಭಾವಂ ಸ್ಮೃತಿಗರ್ವಾಮರ್ಷದೈನ್ಯೋತ್ಸುಕರತಿಮುದಪಸ್ಮಾರಜಾಡ್ಯವಿಷಾದ
ಸ್ಥಿತಿಚಿತ್ತ ಭ್ರಂಶಮೋಹಾಮಯಮೃತಿಗಳಿವಿಂತೆಯ್ದಿ ಸಂಚಾರಿಭಾವಂ॥

ಸೂತ್ರಂ ೧೪೮

‡ ಸ್ವೇದಂ ವೈವರ್ಣ್ಯಂ ಸ್ವರ
ಸಾತ್ವಿಕಭಾವಂ ಭೇದಂ ರೋಮಾಂಚನಂ ಪ್ರಕಂಪನಮಶ್ರು ।
ದ್ಭೇದಂ ಸ್ತಂಭಂ ಲಯಮೆಂ
ದಾದುವಿವೆಂಟುಂ ರಸಕ್ಕೆ ಸಾತ್ವಿಕಭಾವಂ ॥ ೭೯

---

1 ಮೆತ್ತವೆಂಂಟುವಲಂ (ಅ). * ಭರತ—VI, 17; ಸಾಳ್ವ–I. ಸೂ 7. † ಭರತ–VI. 18–21. 2 ವೇಶ (ಅ). 3 ಸುಪ್ತೋಹಬೋಧ ಸುಪ್ತೋವ ಬೋಧ (ಅ). ‡ ಭರತ–VI. 22.

ಸೂತ್ರಂ ೧೯೯

ಭಾವಂ ಬಹಿರರ್ಥಸಮು
ದ್ಭಾವಿತಮನುಭವಭವಂ ವಿಭಾವಂ ರಸನ ।
ದ್ಭಾವವಿಹಿತಾಭಿನಯಮನು
ಭಾವಂ ಸಂಚಾರಿಭಾವಮನವ[1]ಸ್ಥಿತಿ[1]ಕಂ ॥ ೭೯೭

ಸೂತ್ರಂ ೨೦೦

* ಭಾವಂ ವಿಭಾವಮೆಸೆವನು
ಭಾವಂ ಸಂಚಾರಿಭಾವಮೆಂದಿಂತಿವಱಿಂ ।
ದಾವಿಷ್ಕೃತಮಕ್ಕುಂ ರಸ
ಮಾವುದುಮೆಂದಱಿಗೆ ಭರತಶಾಸ್ತ್ರಕ್ರಮದಿಂ ॥ ೭೯೮

ಸೂತ್ರಂ ೨೦೧

† ಸ್ತ್ರೀಪುಂಸರತಿಸಮುತ್ಥ
ಶೃಂಗಾರಂ ವ್ಯಾಪಾರಂ ತಾನದಲ್ತೆ ಶೃಂಗಾರಂ ಮೇ ।
ಳಾಪದಿನಗಲ್ಕೆಯಿಂ ಸುನಿ
ರೂಪಿತಸಂಭೋಗವಿಪ್ರಲಂಭನಸಮಾಖ್ಯಂ ॥ ೭೯೯

ಲಕ್ಷ್ಯಂ ॥

ಸಂಭೋಗಶೃಂಗಾರಕ್ಕೆ ॥

‡ ಪದೆಯಿಸೆ ಸೊಂಕಿ [2]ಸಂಕೆಗಿಡೆ[2] ಮೇಳಿಸಿ [3]ಮೆಯ್ವಿಡೆ ತಳ್ತು[3] ತೋಳ ತ
ಳ್ಪಿದಿರ್ಗೊಳೆ ಮೆಲ್ಲನಪ್ಪಿ ಮೊಗ[4]ಮಿತ್ತಿರೆ[4] ಚುಂಬಿಸಿ ಸೋಲ್ತು ನಾಣನೊ ।
ಕ್ಕುದನಱಿದಿಚ್ಛೆಕಾರ್ತನದ ಲಜ್ಜೆಗಳಂ ನುಡಿದಂತಲಂಪಿನು
ಬ್ಬಿಗಮನಾಲತಾಂಗಿಗೆ ನೃಪಂ ಪಡೆದಂ ನವಸಂಪ್ರಯೋಗದೊಳ್॥ ೮೦೦

ಇದು ಮುಗ್ಧಸಮಾಗಮಂ ॥

§ ಬಗೆಯೊಳ್ ಪೊಣ್ಮು ವಲಂಪು [5]ಕಾತರತೆ[5]ಯಂ ತಂದೀಯೆ ಮೆಯ್ಮೆಯ್ಗೆ ನಂ
ದುಗಳೇನಪ್ಪೊಡಮಿಲ್ಲದಂತಮರ್ವಿನಂ ತಳ್ತಪ್ಪಿ ಬಾಯ್ಗೂಟದೊಳ್ ।
ಮಿಗೆ ಪೀರ್ವಂತೆ [6]ಮನೋಜರಾಗರಸಮಂ[6] ಮೆಯ್ವೆರ್ಚಿ ಕಾದಲ್ಕೆ ಕೆ ।
ಯ್ಮಿಗುವನ್ನಂ ನೆರೆದರ್ [7]ಮನಂ ತಣಿವಿನಂ[7] ನಾನಾರತ [8]ಪ್ರೌಢಿಯಿಂ[8]॥

ಇದು ಮಧ್ಯಸಮಾಗಮಂ ॥

---

1 ಸ್ಥಿತ (ಅ). * ಸಾಳ್ವ. I. ಸೂ 1. † ಸಾಳ್ವ. I. ಸೂ 14. ‡ ಸಾಳ್ವ. III, 138. 2 ಸಂಕಿನದೆ (ಅ). 3 ಮೆಯ್ವಿಡಿತಕ್ಕು (ಓ). 4 ಮಿತ್ತರೆ, ಮಿತ್ತದೆ (ಅ), ಮಿತ್ತಿದೆ (ಓ). § ಸಾಳ್ವ III. 140. 5 ಕಾತರಿಕೆ (ಅ). 6 ಮನೋಜರಾಜನುಖಮಂ, ಮನೋನುರಾಗನುಖಮಂ (ಅ). 7 ನುನಃಪ್ರಿಯತಮರ್ (ಅ). 8 ಕ್ರೀಡೆಯಿಂ (ಅ).

ಕುಟಿಲಾನೀಲಾಳಕಂಗಳ್ ನಿಮಿರ್ದಿರೆ ಬೆಳರ್ವಾಯ್ ನಾಡೆಯುಂ ಬೀಗೆ[1] ರೋಷೋ[1]
ತ್ಕಟದೇಹಂ ರಾಗದಿಂ ಪಿಳ್ಳನೆ ಪಿಟಿದಪ್ಪೊಲಂಬಾಗೆ [2]ನೀಳ್ದಾಳ[2]ವಾಳಂ ।
ವಿಟವೃತ್ತಂ ಮೆಯ್ಯೊಳೆತ್ತಂ ಪಸರಿಸಿರೆ ವಿಟಂ ಬೀನೆ ನಿಂದಿರ್ದಳೊರ್ವಳ್
ಸ್ಫುಟಿತೋರೋಮಧ್ಯೆ ಛಿನ್ನಾವಟುತಟವಿಹಿಟದ್ಗ್ರಂಥಿನಿರ್ಗ್ರಂಥದಿಂದಂ ॥ ೮೦

ಇದು ಪ್ರಾಢಸಮಾಗವ ಂ ॥

ಕಡೆಗಣ್ಣಿಂ ಕಡೆಗೋಡಿವೋಗೆ ಪಿರಿದುಂ ಚಲ್ಲಂ ಕುಚದ್ವಂದ್ವದಿ
ಚ್ಛೆಡೆಯಿಂ ಸ್ವೇದಜಲಂ ತುಳುಂಕೆ ಜಘನಾಂತರ್ದೇಶದಿಂದಾವಗಂ ।
ಬಿಡದುಣ್ಮತ್ತಿರೆ ಮನ್ಮಥದ್ರವಮನಂಗಾವೇಶದಿಂ ಕಾಲ್ತಡಂ
ಬಡೆ ಬಂದಾಟಿಸಿ ನೋಡಿದಳ್ ಪದಪಿನಿಂ [3]ಶ್ರೀವಿಪ್ರ[3]ಮಾರ್ತಂಡನಂ ॥ ೮೧

ಇದು ಅಭಿಲಾಷೆ ॥

ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಮುವ ಘರ್ಮಜಲಂಗಳಾ
ಪಾಂಗು ಗಂಗೆಯ ಶೀಕರಮೆಂಬಂತಾಗಿರೆ ಕಂಡುಮೆ ಶಂಭುವಂ ।
ಗಂಗೆ ದಲ್ ಬಿಗಿದಪ್ಪಿದ[4]ಳೆಂದಾ[4]ಶಂಕೆಗೆ ಭೋಂಕನೆ ಮೋದೆ ಮು
ದ್ದಿಂಗೊಱಿಲ್ದಮರ್ದಪ್ಪಿದನೀಶಂ ನಲ್ಲಳನಲ್ಲೆ ರತಾಂತದೊಳ್ ॥ ೮೨

ಇದು ಈರ್ಷ್ಯೆ ॥

ಪಿಪ್ರಲಂಭಶೃಂಗಾರಕ್ಕೆ ॥

ಪದವೆತ್ತಿರ್ವರ ಜೀವಮೊಂದೊಡಲೆ [5]ಬೇಱೆಂಬಂತುಟುಂ[5] ಮಾಡಿದಂ
ಮದನಂಗಾವುದು ದೋಷ[6]ಮುಂತೆ[6] ನುಡಿಯಲ್ಕೇಂ ಬರ್ಕುಮೇ ಪಾಪಮಂ ।
ಬಿದಿಯೆಂಬಾಱಿಡಿ[7]ಗಳ್ಳ[7]ನಿಂದಮುಟಿವಾಯ್ತು ರ್ವರ್ಗಮಿನ್ನೊರ್ಮೆ ದೈ
ವದಿನೆತ್ತಾನುಮದಿಂದುಬಿಂಬಮುಖಿಯಂ ಕಾಣ್ಮೊಂದು ನಯ್ಪಕ್ಕುಮೇ ॥೮೩

ಇದು ಪೂರ್ವಾನುರಾಗಂ ॥

ಅಱಿಯದೆ ಗೆಯ್ದೆನಬ್ಜಮುಖಿ ನೀನಿದನೊರ್ಮೆಗೆ ಸೈರಿಸೆಂದು ಕಾ
ಲ್ಗೆಱಗಿರೆಯುಂ ಪ್ರಿಯಂ ನುಡುನುಡೇಂ ಗಡ ಸೈರಿಪುದೆಂದು ಕೋಪದಿಂ ।
ಪಱಿಪಡೆ ಪೋಗೆ ನೂಂಕಿ ಕಳೆದಂದಿನ ದುಷ್ಕೃತಮೆನ್ನನಾವಗಂ
ಮಱುಗಿಸಿ ಮುಚ್ಚಿ ನುಟ್ಟಪುವು ನೋಡಿರೆ ಶೀತಮರೀಚಿಮಾಲೆಗಳ್ ॥ ೮೪

ಇದು ಮಾನಾಖ್ಯಂ ॥

* ಇನಿಯನಗಲ್ದು ಪೋಗಿ ಪರದೇಶದೊಳಿರ್ದಪನಾನುಮಿಲ್ಲಿ ಮಾ
ವಿನ ತಳಿರ್ವಾಸಿನೊಳ್ ಪೊರಳುತಿರ್ದಪೆನಾಗಳುಮಿಂತೆ ನೀನುಮೆ ।
ನ್ನನೆ ನಡೆ ನೋಡುತುಂ ನಭದೊಳಿರ್ದಪಯಪ್ಪುದಱಿಂದೆ ನಿನ್ನನಾ
[8]ನನುವಿಪೆ[8]ನೆನ್ನ ಮೆಯ್ ಬಡವೊ ನಲ್ಲನ ಮೆಯ್ ಬಡವೋ ನಿಶಾಕರಾ॥೮೫

ಇದು ಪ್ರವಾಸಂ ॥

---

1 ರಾಗೋ (ಅ). 2 ನೀರಾಳ (ಅ). 3 ಶ್ರೀಚ್ಛ (ಅ). 4 ಳೆಂದಾ (ಅ).
5 ಬೇಱಿಪ್ಪಂತುಟುಂ (ಓ). 6 ಮುಂಚೆ (ಓ,ಅ). 7 ಗಕ್ಕ (ಅ). * ಸಾಳ್ವ I. 66.
8 ನನುಮಿಸೆ (ಅ).

[1]ವ್ರತಕೆಂತಾ[1]ಯ್ತಾಗಳಿಂತೀತನು ತನುಲತೆಯೊಮಾಗಿಯೆಂದೀಹಿಮಾನೀ
ಪತನಕ್ಕೆಂ[2]ತಾರ್ತೆ[2] ಮೆಯ್ಯಂ ವನಜವದನೆ ಕೇಳ್ ಗ್ರೀಷ್ಮದೊಳ್ ನಿಚ್ಚಮೆತ್ತಂ।
ನತಿ [3]ತಟ್ಟುತ್ತಿರ್ಪ್ಪೆ[3] ಕಾಯ್ಪಿಂದುರಿವ ಬಿಸಿಲೊಳಾಮೇಘವಿಸ್ಫೂರ್ಜಿತಾರ್ಣಃ
[4]ಪತಧಾರಾಭೀಕರಾಡಂಬರಜಳಸಮಯಂ[4] ಬಂದೊಡೆಂತಳ್ಕದಿರ್ಪಯ್॥ ೮೦೮

ಇದು ಕರುಣಾತ್ಮಕ ವಿಪ್ರಲಂಭಂ ॥

ಸೂತ್ರಂ ೨೦೨

ವಿಕೃತಾಂಗವೇಷಭಾಷಾ
ಹಾಸ್ಯಂ ಪ್ರಕಾರಕೃತಹಾಸಹೇತುಕಂ ಹಾಸ್ಯಮಿತಿ ।
ಕರುಣಂ ಪ್ರಕಟತರಶೋಕಭಾವ
ಪ್ರಕೃತಿಪರಂ ಕರುಣಮಾರ್ತಜನತಾಪಿಷಯಂ ॥ ೮೦೯

ಲಕ್ಷ್ಯಂ ॥
ಹಾಸ್ಯಕ್ಕೆ॥

* ಶ್ರೀ [5]ತನ್ನೆಂದಿನ ರೂಪೆ[5] ಕೌಸ್ತುಭದೊಳಚ್ಯುತ್ತಿರ್ದಪೋಲ್ ತೋಱಿ[6]ಕಂ
ಡೇ[6]ತರ್ಕೀಕೆ ಮದೀಯವಾಸಗೃಹಮಂ ತಾಂ[7]ಪೊಕ್ಕಳೆಂ[7] ದೇವದಿಂ ।
ದಾ[8]ತಾಮ್ರಾಕ್ಷಿಯನೀಕ್ಷಿಸುತ್ತುಮಿರೆ[8] ತನ್ಮುಗ್ಧತ್ವಮಂ ಕಂಡು ನಂ
ಜಾತಾಂತಃಸ್ಮಿತನಾದ ಕೃಷ್ಣನೆಮಗೀಗಾನಂದಸಂದೋಹಮಂ ॥ ೮೧೦

ಇದು ಉತ್ತಮಪಾತ್ರಂ ॥

ಸೊಗಯಿಪ್ಪೊಳ್ದೊಡೆ ನೋಯೆ[9]ಸೂತ್ರ[9]ದೆಪೆವೋಲ್ ನೀಳ್ದಿರ್ದ ಬಾರಂತೆ[10] ತೋ[10]
ರ್ಪುಗಿಯಂ ಪುಣ್ಮೆಯಮಾಗಿ ಮಾಡಿ ಬಿದಿ ಮುಂ ಜಂಘಾಪ್ರಮಾಣಕ್ಕೆ ನೂ ।
ಲ್ದೆಗೆದಂತಿರ್ಪ ನಖವ್ರಣಾವಳಿಗಳಂ ನಲ್ಲಂಗೆ ಕಣ್ಗೆತ್ತು ತುಂ
ನಗುತುಂ [11]ಸಾರ್ದು ಸವಂಗಮಂ ಕಳೆ[11]ಯಿಸುತ್ತಿರ್ಪಾಕೆ ಕಣ್ಗೊಪ್ಪಿದಳ್ ॥

ಇದು ಮಧ್ಯಮಪಾತ್ರಂ ॥

ಪ್ಲವಂಗಮಕುಳಂಗಳಲ್ಲಿ ಕಿಸುಗಲ್ಲ ಶೃಂಗಂಗಳಂ
ದವಾಗ್ನಿಶಖೆಗೆತ್ತು ಬೆರ್ಚಿ ಮದದಂತಿಯಂ ನಿರ್ಘರ ।
ಪ್ರವಾಹನಗಮೆಂದೆ[12]ಗೆತ್ತದಱು[12] ಬೆಂಗೆ ವಂದಾಗಳಾ
ದವಸ್ಥ[13]ತಱು[13]ನಲ್ವನಂ ನಗಿಕುಮಪ್ಪರೋ[14]ಬ್ಯಂದಮಂ[14] ॥ ೮೧೨

† ಕುಳ್ಳಿರ್ದು [15]ಕುಳಿರ್ವ ಮೆಳೆಯೊಳ್[15]
ಪಳ್ಳದ ಕೇದಗೆಗೆ ಪಾಯ್ದು ಪತ್ತಿದ ಕೆಯ್ಯಂ

---

1 ವ್ರತಕೇನಾ (ಅ). 2 ತಾರ್ಥ, ತಾರ್ದ (ಅ). 3 ತಟ್ಟಾಂತಿರ್ಪೆ (ಓ). 4 ಪತದ್ಧಾರಾಭೀರೂಜಳದನಮಯಂ(ಅ). * ಸಾಳ್ವ II. 94. 5 ತನ್ನಂದರೂಪು (ಅ). 6 ಪೇಱೇ (ಓ). 7 ಪೊಕ್ಕರ್ದ (ಅ). 8 ತಾಮ್ರಾಕ್ಷಿ ನಿರೀಕ್ಷಿಸುತ್ತುಮಿರೆ (ಅ). 9 ನೇತ್ರ (ಅ.ಇ). 10 ತೀ (ಓ,ಅ). 11 ತೋಱಿನಮಾಗಮಕ್ಕೆಳ (ಅ). 12 ಮತ್ತ ದಱು (ಓ,ಅ). 13 ಕೆಱು (ಓ,ಅ) 14 ವ್ಯಂದಮಂ (ಓ,ಅ). † ಸಾಳ್ವ II 99. 15 ಕುದುರೆಯೋಳ್ ಕುಳು (ಓ,ಅ).

ಮುಳ್ಳುರ್ಚ್ಚಿ ತೆಱೆದು ಪಲ್ಲಂ
[1]ಕೊಳ್ಳೆನೆ[1] [2]ನಗಿಸಿದುದು[2] ಕಟಕಮಂ ಮರ್ಕಟಕಂ ॥ ೮೧೩

ಇದು ಜಘನ್ಯಪಾತ್ರಂ ॥

[3]ಕರುಣಕ್ಕೆ ॥

ಬಗೆಗೀಗಳ್ ನಿಶ್ಚಯಂ ಪುಟ್ಟಿದುದಱಿದೆನಿದಂ ಪನ್ನಗಂ ಶಂಖಚೂಳಂ
ಮಗನಿಂತೀವ್ಯದ್ಧೆಗೀತಂ ತಡೆದಿರದೊಡಗೊಂಡುಯ್ದುವಂ ಕಿಂಕರಂ ಪ ।
ನ್ನಗರಾಜಂಗೀತನಂ ವಾಸುಗಿ ಗರುಡನ ತೀಂಗೊಡ್ಡಿದಂ ತಪ್ಪದಾಹಾ
ವಿಗಳದ್ಬಾಷ್ಪಾಂಬುದೀನಾನನೆ ಜನನಿ ಮಗಂ ಪೋಗೆ ಪುಯ್ಯಲ್ಚಿದಪ್ಪಳ್॥ ೮೧೪

[4]ಅಂತಲ್ಲದೆಯುಂ॥

ಅಬಲನೆರ್ದೆಯೊಳ್ ತಿಣ್ಣಂ ತದ್ಮೈಸಿ ಪುತ್ರವಿಮೋಹದಿಂ
ದೆಬವಿ ತನುವಂ ಹಾಹಾ ಹಾ ವತ್ಸಯೆಂದಮರ್ದಪ್ಪಿಕೊಂ ।
ಡಬುತುಮಬುತುಂ ನಟ್ಟಿರ್ದಂಬಂ ಮುನೀಶನಿಳೇಶನಿಂ
ಕಿಬಿಸೆ ಸರಲಂ ಮುನ್ನಂ ತದ್ಬಾಷ್ಪರದಿಂದಸು ಪೋಪುದುಂ ॥ ೮೧೫

ಸೂತ್ರಂ ೨೦೩

ವೀರರಸಂ ಬವರಿಸುಗುಮು

ವೀರಂ ದಾರೋತ್ಸಾಹ[5]ಪ್ರವೃತ್ತಿ[5]ಕಾರಣಕಾರ್ಯ್ಯಂ ।
ರೌದ್ರಂ ದಾರುಣರೋಷಾವೇಶವಿ
ಕಾರಭವಂ ರೌದ್ರಮೆಂಬ ರಸಮದು ನೆಗಟ್ಗುಂ ॥ ೮೧೬

ಲಕ್ಷ್ಯಂ ॥

ವೀರಕ್ಕೆ ॥

ತ್ರಿದಶೇಂದ್ರಾರ್ಜಿತಶೌರ್ಯಮೊರ್ಮೆ ಕಿಡೆ ಪೋಯ್ತಾಭೀಳದಿಕ್ಪಾಲರೊ
ಡ್ಡಿದ ಸೈನ್ಯೋದ್ಧತಿ ಮತ್ತಮೊರ್ಮೆ ಕಿಡೆ ಕೇಳ್ ನಿರ್ಮೂಲಮಾಯ್ತನ್ನುಮೊ ।
ರ್ಮೆ ದಲೆನ್ನೊಳ್ ಸಮನಪ್ಪವಂ ಪೊಣರೆ ಕೀಲ್ಪುಂದೊಪ್ಪುಗುಂ [6]ಬೆಂಗಿಯೇ[6]
ಮುದುವರ್ದೀ ನಿನಗೆಂತು ಕೀಲ್ದ್ವ[7]ನತುಳ[7]ಶ್ರೀಚಂದ್ರಹಾನಾಸಿಯಂ ॥ ೮೧೭

ಅಂತುಮಲ್ಲದೆಯುಂ ॥

* ಕ್ಷಿತಿಯೊಳರಾತಿಭೂಪತಿಗಳಂ ತವೆ ಕೊಂದು ನಮಂತು ವಿಪ್ರನಂ
ತತಿಗಬಿಳಾವನೀತಳಮನಿತ್ತು ನೆಗಟ್ಟಿದನಲ್ತೆ ವಿಕ್ರಮೋ ।
ನ್ನತಿಯೊಡನೊಂದು ದಾನಗುಣದುನ್ನತಿಯಂ ಧುವನಕ್ಕೆ ಧನ್ಮನಾ
ತ್ಮಕೃತರಿಪು ಪಾತ್ರನಾತ್ಮಕೃತಜಗದ್ವಲಯಂ ಜಮದಗ್ನಿನಂದನಂ ॥ ೮೧೮

---

1 ಕೊಳ್ಳೆನೆ (ಓ, ಅ). 2 ನಗಿಸಿತ್ತು (ಅ). 3 ಕರುಣರನಕ್ಕೆ (ಓ). 4 ಅದಲ್ಲದೆಯುಂ (ಓ). 5 ಪ್ರವರ್ತಿ (ಅ). 6 ಬೆಂಗಿಯೆಂ, ರೆಂಗಿಯೆಂ (ಅ). 7 ನಮಳ (ಅ).

* ನಾಳ್ಯ. II 106.

ರೌದ್ರಕ್ಕೆ ॥

* ಕುಡಿವೆಂ ದುಶ್ಶಾಸನೋರಃಸ್ಥಳಮನಗಲೆ ಪೋಪ್ಪಾರ್ದು [1]ಕನ್ನೆತ್ತರಂ[1]ಪೊ
ಕ್ಕುಡಿವೆಂ ಪಿಂಗಾಕ್ಷನೂರುದ್ವಯಮನುರುಗದಾಘಾತದಿಂ ನುಚ್ಚುನೂರಾ ।
ಗೊಡೆವೆಂ ತದ್ರತ್ನರಶ್ಮಿಪ್ರಕಟಮಕುಟಮಂ ನಂಬು ನಂಬೆನ್ನ ಕಣ್ಣಿಂ
ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ॥ ೮೧೯

ಅಱುಪಿದುದು ರೌದ್ರರಸಮಂ
ಕಿಱುಪಿದ ಕುಡು[2]ವುರ್ವು[2] ಕರ್ಚಿದೌಡುರ್ಚಿದ ಬಾ ।
ಳಿಱಿಯಲನುಗೆಯ್ದು ಕೆಯ್[3] ಬೆ
ಳ್ಮುಱಿ ಬಿಚ್ಚನೆ ಬಿಟ್ಟಿ ಕಣ್[4] ಹಯಾರೋಹಕರಾ ॥ ೮೨೦

ಸೂತ್ರಂ ೨೦೪

ಭಯಹೇತುಸಮುದ್ಭೂತಂ
ಭಯಾನಕಂ ಭಯಾನಕಂ ಕೃತಜುಗುಪ್ಸನಂ ಬೀಭತ್ಸಂ ।
ಬೀಭತ್ಸಂ
ಅದ್ಭುತಂ ನಿಯತಂ ವಿಸ್ಮಯಭಾವಾ
ಶ್ರಯಮದ್ಭುತರಸಮೆನಿಪ್ಪ[3]ಪೆಸರಂ ಪಡೆಗುಂ[3] ॥ ೮೨೧

ಲಕ್ಷ್ಯಂ ॥
ಭಯಾನಕಕ್ಕೆ ॥

† ಮಕರಂ ಬಾಯೆ ಱಿದಂದದಿಂ [4]ತೆಱಿದ[4]ಬಾಯ್[5]ಪೇಱಿರ್ದ[5] ಕೂರ್ದಾಡೆ ನೆ
ಕ್ಕ ಕದಂಪೆತ್ತಿದ್ದ ಪುರ್ವು ಪತ್ತಿದ ಬಸಿಱಿ[6] ಪೋತಂದ ಕಣ್ ಮೇಘಘೋ ।
ಷಕ[6]ಠೋರ[6]ಧ್ವನಿ ನೀಳ್ದ ಕೇಸುರಿಪೊಲರ್ಪಾಭೀಳಕೇಶಾಳಿ ಸ
ರ್ಪಕ[7]ನದ್ಭೂಷಣಭೀಷಣಂ[7] ಭಯದಮಾಯ್ತಾ ರಾಕ್ಷಸೀರೂಪಕಂ॥ ೮೨೨

‡ ಸೋರ್ಮುಡಿ[8]ಸೋರ್ದು[8] ಪಿಂದಲೆಯೆ [9]ಪಚ್ಚಳ[9]ಮಂ ನಿಜಮಾರ್ಗಮಂ ಬಿನು
ಟ್ಟೊರ್ಮೆಯೆ ಕಪ್ಪ ಚಮ್ಮಟಿಗೆ ಮುಟ್ಟಿದವೊರ್ ನನುಬೆರ್ಚಿ ತಾನದ ।
ಕ್ಕಿರ್ಮಡಿ ಬೆರ್ಚಿ ಬೆರ್ಚಿ ನಡುಕಂ ಪೆಱಗೇಱುದಱೊರ್ವಳೋಪನಂ
ಪೆರ್ವೊರೆ ದೆನ್ನನುರ್ಚಿದಪುವೆಂಬಿನಮಪ್ಪಿ[10]ದಳಾಗಳಾರ್ತದಿಂ[10] ॥ ೮೨೩

ಬೆರಲಂ ಕರ್ಚುವ[11]ಪುತ್ತಂ[11]
ಪರಿದೇಱುವ ಕೆಯ್ದುಱಿಕ್ಕಿ ಪ್ರೊಡಮಡುವ ಭಯ ।
ಜ್ವರದಿಂ ನಡುಗುವ ಭೀರುಗ
ಳರೆಬರ್ ಕನ್ನಡಿಸಿದರ್ ಭಯಾನಕರಸಮಂ ॥ ೮೨೪

---

* ಸಾಳ್ವ II 107. 1 ಕನ್ನೆತ್ತರಂ (ಅ,ಇ). 2 ವೋರ್ಬು (ಓ). 3 ಪುದಕ್ಕುಂಪೆಸರಿಂ (ಅ.ಓ). † ಸಾಳ್ವ II 113. 4 ತೆಗೆದ (ಓ,ಅ). 5 ಪೀಱಿರ್ದ (ಅ). 6 ಘೋರ (ಅ). 7 ವದ್ಭೂಷಣ ಭೂಷಣಂ (ಅ). ‡ ಸಾಳ್ವ II. 114. 8 ಜೋಲ್ದು (ಅ). 9 ಪಶ್ಚಿಮ (ಓ.ಅ). 10 ಳಾದಪೊಪ್ಪಿದಳ್ (ಅ.ಇ). 11 ಪುತ್ತಂ (ಓ).

ಬೀಭತ್ಸಕ್ಕೆ ॥

ನೆತ್ತರಂ ಕುಡಿದು ಸೀನೆಣ[1]ದೊರ್ಪಿಡಿ[1]ಖಂಡಮಂ
ಪತ್ತೆ [2]ತೊಯ್ದು[2] ನೆಣದೊಟ್ಟಿದ ಪಾರೆಯುಮಿಾರೆಯುಂ ।
ತುತ್ತಿ ನುಂಗಿ [3]ಮಿದುಳಂ[3] ತಣಿವಿಂ ಪುಳಿದೇಗುದೇ
ಗುತ್ತುಮಿರ್ಪುವದಱೊಳ್ ರಜನೀಚರಕೋಟಿಗಳ್ ॥ ೮೨೫

ಅದ್ಭುತಕ್ಕೆ ॥

ಪಯವುಲಗಳ್ ಮೊಲೆಯೂಡಿದುವಾಹರಿಣಂಗಳಂ . . . . . .
ನಯದೊಳೆ ನೋಡಿದುವಾನೆಗಳಂ ಹರಿಗಳ್ ನಿಜೋಜ್ವಲಕೇಸರಾ ।
ಳಿಯ[4]ನಗಿಯು[4]ತ್ತಿರೆಯುಂ ಕುಟಿಲಾಹಿಗಳುಂ ನವಿಲ್ಗಳನೆತ್ತಮಾ
ಶ್ರಯಿಸಿದುವಿಂತಿನಿತದ್ಭುತಮಾಯ್ತು ತಪೋ[5]ಮಹತ್ಫದಿ[5]ನಾಕೆಯಾ ॥ ೮೨೬

ತನಗಿಲ್ಲದ ಭಯಮಂ ತ್ಯೆ
ಲನಾಂತ ರಿಪುನೃಪರ್ಗೆ ಕುಡುವನವರ್ಗಿಲ್ಲದುದಂ ।
ವಿನುತ[6]ಜಯ[6]ಶ್ಲಾಘ್ಯಯಶೋ
ಧನಮಂ ತಾನೀಬ್ದುಕೊಳ್ವನೇನಚ್ಚರಿಯೋ ॥ ೮೨೭

ಸೂತ್ರಂ ೨೦೫

* ನಮಭಾವಪ್ರಭವಂ ಶಾಂ
ತಮಕ್ಕುಮಂತಾ ನಮತ್ವಮುಂ ವರ್ತಿಸುಗುಂ ।
ನಮನಿಸಿ [7]ಸಮ್ಯಗ್[7]ಜ್ಞಾನಂ
ತಮಮಂ ರಾಗಮುಮನಲೆದು ತೊಲಗಿಸೆ ಮನದಿಂ ॥೮೨೮

ಲಕ್ಷ್ಯಂ ॥

ಬಗೆಯಂ ತಾರದೆ ತಾಪಸಾಶ್ರಮಪದಕ್ಕಜ್ಞಾನದಿಂ ಮೂರ್ಖರೇ
ಕೆ ಗಡಂ ಮಾಣ್ಬರೊ ಮುಪ್ಪಟಲ್ ಬಡತನಂ ರೋಗಂ ವಿಯೋಗಂ[8]ಗಳಿ ।
ನ್ನೆಗಮಿಕ್ಕಿ [8]ರ್ದೊಡಲಂ ಬಿಸುಟ್ಟು [9]ಪೆಱದಂ[9] ಕೆಯ್ಕೊಂಡು ಸಂಸಾರದೊಳ್
[10]ಮಗುಳ್ದುಂ[10]ಪುಟ್ಟುವರೆಂಬ ಗಾಂಪಿದೆ ವಲಂ[11]ಧೀರಂಗೆ[11] ಲಜ್ಜಾಕರಂ॥

ಧರೆಯೊಳ್ ಧರ್ಮಪಥಕ್ರಮಂಗಳೆಸೆಗುಂ ಮತ್ಕೀರ್ತನಂಗಳ್ ಜಯೋ
ದ್ಧುರ[12]ಮುಂಟರ್ಥ[12]ಫಲೋಪಮಾನವೆಮಗೀಹಸ್ತ್ಯಶ್ವತಂತ್ರಂ ಕುಳಾ ।

---

1 ದೊಳ್ಪಿಡಿ (ಓ.ಅ). 2 ಕೊಯ್ದು (ಅ), ತೊಯ್ದು (ಅ.ಓ). 3 ಮಿದುಳಿಂ (ಅ). 4 ನುಗಿವು (ಓ). 5 ಮಹಾತ್ಮ (ಓ) 6 ನಜ (ಓ), ನಯ (ಅ). * ನಾಳ್ಪ II. ಸೂ. 63. 7 ದಿವ್ಯ (ಅ). 8 ಳಂನೆಗಪಕ್ಕೆ (ಅ). 9 ಪೆಱದಿಂ (ಓ,ಅ), ಪೆಱರಿಂ, ಪಸಮಂ (ಅ). 10 ತಗುಳ್ದುಂ (ಅ). 11 ಎೀರಂಗೆ (ಅ.ಓ). 12 ಮುಂಟಾರ್ಥ (ಅ.ಓ).

ಧರಣಂ ಕಾಮಫಲೋಪಮಂ ಬಳೆದಪಂ ಮನ್ನಂದನಂ ಸಾಲ್ವುದಿ
ನ್ನಿರವೇಂ[1] ಮೋಕ್ಷಮಹಾಮಹೀರುಹಫಲೈಕಾ[2]ಸ್ವಾದಮಂ[2] ನೋಡುವೆಂ ॥

ಸೂತ್ರಂ ೨೦೬

* ಕರುಣಾರಸಕ್ಕೆ ಮಿಗೆ ಹಾ
ಸ್ಯರಸಂ ಶೃಂಗಾರರಸಕ್ಕೆ ಬೀಭತ್ಸಂ ರೌ ।
ದ್ರ[3]ರಸಕ್ಕಮದ್ಭುತಂ[3] ವೀ
ರರಸಕ್ಕೆ ಭಯಾನಕಂ [4]ನಿರೋಧಕಮಕ್ಕುಂ[4] ॥ ೬೩೧

ಲಕ್ಷ್ಯಂ ॥

† ಕರಜಕ್ಷತಗಳಿತಾಸ್ಥಾ
ನುರಕ್ತಕರ್ದಮಿತವಿಗ್ರಹಂ [5]ಸುವ್ರಣಿತಾ[5] ।
ಧರಜಾತಿಪೂತಿಗಂಧಂ
ತರುಣೀಮುಖಮೆನಗೆ ಪಡೆದುದೊದವಿದಲಂಪಂ ॥ ೬೩೨

ಸೂತ್ರಂ ೨೦೭

‡ ಎರಡುಂ ವಿರುದ್ಧರಸಮೊಡ
ವೆರಸಿರೆ ತದವಾಂತರಸ್ಥಮೊಂದನ್ಯರಸಂ ।
ಪರಿಪುಷ್ಟಮಾಗೆಯುಂ ವ್ಯತಿ
ಕರಣಂ ಮೇಣ್ ತಾಮವಾಗೆಯುಂ ನಿರ್ದೋಷಂ ॥ ೬೩೩

ಲಕ್ಷ್ಯಂ ॥

§ ಅರುಣಜಳಾವ[6]ಲಿಪ್ತ ಪೊಸಗುಂಕುವ[6]ದಂತಿರೆ ಕರ್ಣಲಗ್ನತೋ
ಮರಮವತಂಸದಂತಿರೆ [7]ನವಿವ್ರಣ[7]ರಾಜಿ ವಿಭೂಷಣಾಳಿಯುಂ ।
ತಿರೆ ಮಿದುಳುಣ್ಮೆ ಪುಷ್ಪಕೃತಶೇಖರದಂತಿರೆ ಕೊಂಡು ಪೋದರ
ಚ್ಚರಸಯರಣ್ಮೆ ಬಿಟ್ಟ ಭಟರಂ ಕೊನೆಮೊಸೆಯ ಚೆನ್ನಪೊಂಗರಂ ॥ ೬೩೪

ಭಯದಿಂ ಕರ್ಚಿದುದೊಂದು ಪುಲ್ ಮುಗಿದ ಕೆಯ್ ಬಿಟ್ಟಿರ್ದ ಕೇಶಂಗಳುಂ
ನಯನಾಂಭಃಪ್ಲವಮೋಡುವಲ್ಲಿ ಪಿರಿದುಂ ಕಾರುಣ್ಯಮಂ ಮಾಡೆ ವೈ ।

---

1 ದೆನ್ನಿರವಂ, ದಿನ್ನರವೆಂ, ದಿನ್ನರದೆಂ (ಅ). 2 ಸ್ವಾದನಂ (ಓ.ಅ) ಸಾರಮಂ(ಅ)
* ಸಾಳ್ವ II. ಸೂ 68. 3 ರಸೋಕ್ತಿಗದ್ಭುತಂ (ಓ.ಅ). 4 ಪರೋಧಿಗಳಕ್ಕುಂ (ಅ)
† ಸಾ ೪ II. 125. 5 ಸವ್ರಣಿತಾ (ಅ). ‡ ಸಾಳ್ವ II. ಸೂ 69. § ಸಾಳ್ವ II. 126, 127. 6 ಳಿಪ್ತನವಕರ್ದಮ (ಅ), ಳಿಪ್ತನರಕರ್ದಮ (ಓ.ಅ). 7 ನವಗ್ರಹ (ಓ), ನವವ್ರಣ (ಅ.ಇ).

ರಿಯನಾಗಳ್ ನಗುವಂತಿರ್ದುದು ಕನತ್ಪಟ್ಟಂ ವಿನಿರ್ಭಿನ್ನಕುಂ
ಥಯುಗೋದ್ಯದ್ದ್ವಿಪಮೌಕ್ತಿಕಾಳಿಕಳಿತಂ ಶ್ರೀವಿಪ್ರಮಾತ್ತಂಡನಾ ॥ ೬೩೫

ಸೂತ್ರಂ ೨೦೮

ವೀರಂ ಗೌರಂ ರೌದ್ರಮ
ದಾರಕ್ತಂ ಪೀತಮದ್ಭುತಂ ಶ್ಯಾಮಂ ಶೃಂ ।
ಗಾರಂ ಶ್ವೇತಂ ಹಾಸ್ಯಂ
ಕಾರುಣ್ಯಂ ಧೂಮ್ರಸಿತಮುಟಿದುವವೆರಡುಂ ॥ ೬೩೬

ಸೂತ್ರಂ ೨೦೯

ಭಾರತಿಯ ಕೊಂಕು ನತ್ಪೋ
ವೃತ್ತಿಭೇದಂಗಳ್ ದಾರತೆ ನರಸಾರ್ಥ[1]ಮುದ್ಧತಸ್ಥಿತಿ[1]ಯಿವಱುಂ ।
ಭಾರತಿ ಸಾತ್ವತಿ ಕೈಶಿಕಿ
ಯಾರಭಟಿಯೆನಿಪ್ಪ ವೃತ್ತಿಗಳ್ ನಾಲ್ಕಕ್ಕುಂ । ೬೩೭

ಸೂತ್ರಂ ೨೧೦

ವಿದ್ವಜ್ಜನಹೃದಯಂಗಮ
[2]ಸದ್ವಕ್ರೋಕ್ತಿ [2]ಪ್ರಕಾಶಮದ್ಭುತಹಾಸ್ಯೋ ।
ದ್ಯದ್ವಸ್ತುವೃತ್ತಿ ಸಲೆ ರಸ
ವದ್ವಚನದೊಳೆಸೆಯೆ ಪೇೞ್ದ್ಗೆ ಭಾರತಿಯಿಂದಂ ॥ ೬೩೮

ಸೂತ್ರಂ ೨೧೧

ಚಾಗಂ ಬೀರಂ ಸೊಬಗೆಂ
ಬೀಗುಣಮುಂ ಶಾಂತವೃತ್ತಿಯುಂ ಸಾಹಸದು ।
ದ್ಯೋಗಮುಮತಿಲಲತಸದಾ
[3]ಭೋಗ[3]ದೊಳಿಂಬಾಗೆ ರಂಜಿಕುಂ ಸಾತ್ವತಿಯೊಳ್ ॥ ೬೩೯

---

1 ಮುದ್ಧುರ (ಅ.ಓ). 2 ಸದ್ವಕ್ರೋಕ್ತಿ, ಸದ್ವರ್ಣೋಕ್ತಿ (ಅ).
3 ಭಾಗ (ಅ).

ಸೂತ್ರಂ ೨೧೨

ನಗರಾದಿವರ್ಣನಂ ನೃ
ತ್ಯಗೀತವಾದ್ಯಪ್ರಯೋಗಮಬಳಾವಿಷಯೋ ।
ಪಗಮವ್ಯವಹೃತಿಯೆಂಬಿವು
ನೆಗಳ್ದಂ ಮೃದುಮಧುರರಚನೆಯಿಂ ಕೈಶಿಕಿಯೊಳ್ ॥ ೪೪೦

ಸೂತ್ರಂ ೨೧೩

ಕ್ರೂರಾಸ್ತ್ರಪಾತಚಿತ್ರಮ
ಹಾರಣಮಹೇಂದ್ರಜಾಲರೌದ್ರಾದಿರಸಂ ।
ಚಾರುತರಸ್ಫುಟಬಂಧದೊ
ಳಾರಭಟೀವೃತ್ತಿಯಿಂದಭಿವ್ಯಂಜಿಸುಗುಂ ॥ ೪೪೧

ಇದು ರೀತಿಕ್ರಮರಸನಿರೂಪಣದೊಳ್ ರಸಪ್ರಕರಣಂ ದ್ವಿತೀಯಂ ॥

ಗೀತಿಕೆ॥ * ರೀತಿಯಂ ರಸವಿಭಾಗಮುಮಂ ವಿ
ಖ್ಯಾತಿಯನಾಂತವೃತ್ತಿಗಳಂ ಪ್ರಾ ।
ತೀತಿಕಮಾಗೆ ತಿಳಿಯೆ ಪೇಳ್ದನಿಂತೀ
ಧೂತಳದೊಳ್ ಸಲೆ ನಾಗವರ್ಮಂ ॥ ೪೪೨

ವೃ॥ ಧರೆಯೆಂತಂತೆ ರಸಾಶ್ರಯಂ ಜಲಧಿಯೆಂತಂ[1] ತಾತ್ತ[1]ಗಾಂಭೀರ್ಯಮಂ
ಬರಮೆಂತಂತೆ ಸದಾವೃತಂ ದೆಸೆಗಳೆಂತಂತೂರ್ಜಿತಂ ಸಂದ ಮಂ ।
ದರಮೆಂತಂತೆ ಸುವರ್ಣಭಾಸಿ [2]ಶಶಿ[2]ಯೆಂತಂತುಜ್ವಳೋದ್ಯತ್ಕಳಾ
ಸ್ಫುರಿತಂ ಭಾವಿಸೆ ನಾಗವರ್ಮರಚಿತೋದಾತ್ತಪ್ರಬಂಧಾನ್ವಯಂ ॥ ೪೪೩

ಇದು ಸಕಳಸುಕವಿಜನಮನಸ್ಸರೋಜನೀರಾಜಹಂಸಾಯಮಾನಾನೂನ
ಕವಿತಾಗುಣೋದಯಂ ಶ್ರೀನಾಗವರ್ಮವಿರಚಿತಮಪ್ಪ
ಕಾವ್ಯಾವಲೋಕನದೊಳ್ ರೀತಿಕ್ರಮರಸನಿರೂಪಣಂ
ಚತುರ್ಥಾಧಿಕರಣಂ

---

* ಈ ಪದ್ಯವು ಒಂದು ಪ್ರತಿಯಲ್ಲಿ ಮಾತ್ರ ಕೆಳಗೆ ಕಂಡಂತೆ ಬರೆದಿದೆ :—
ರೀತಿರಸಭಾಗಮಂ ವಿ ॥ ಖ್ಯಾತಿಯಸಾಂತಮಳವೃತ್ತಿವೃತ್ತಂಗಳುಮಂ॥
ಪ್ರಾತಿಕಮಾಗಿರೆ ಪೇಳ್ದುಂ । ಧೂತಳದೊಳಗೆಸೆಯೆ ನಾಗವರ್ಮಕವೀಂದ್ರಂ ॥

1 ತಾಪ್ತ (ಅ). 2 ರವಿ (ಅ).

ಕವಿಸಮಯಾಧಿಕರಣಂ

ಸೂತ್ರಂ ೨೧೪

* ಆವುದಶೇಷಲೋಕವಿಷಯಸ್ಥಿತಿಯಲ್ತ ಖಿಳಾಗಮಾರ್ಥಮುಂ
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿ ನಿ ।
ಷ್ಕೇವಳ[1]ಮಾದ[1] ರೂಢಿವಶದಿಂ ಸಲೆ ಸಲ್ವು[2]ದಿದಲ್ತೆ[2] ಶಿಷ್ಟಸಂ
ಭಾವಿತಮಪ್ಪ ಕಾವ್ಯಸಮಯಂ ಭುವನತ್ರಯವಸ್ತುಗೋಚರಂ ॥

ಸೂತ್ರಂ ೨೧೫

† ಆತತಸತ್ಕವಿಸಮಯಂ
ಜಾತಿದ್ರವ್ಯಕ್ರಿಯಾಗುಣಾಶ್ರಯಮಸದಾ ।
ಖ್ಯಾತಿ ನದಕೀರ್ತನಂ ನಿ
ರ್ಗೀತಂ ನಿಯಮಾರ್ಥಮೈಕ್ಯಮೆನೆ ನಾಲ್ಕು ತೆಱಂ ॥ ೪೪೫

ಅಸದಾಖ್ಯಾತಿ ಪ್ರಕರಣಂ

ಸೂತ್ರಂ ೨೧೬

ನಲಿಲಾಶ್ರಯಮಾತ್ರದೊಳಂ
ಕಲಹಂಸಪ್ರಭೃತಿನದಿಗಳೊಳ್ ಕಮಲಸಿತೋ ।
ತ್ಪಲಕುವಲಯಾದಿಶೈಲಾ
ವಲಿಯೊಳ್ ರತ್ನಾದಿಯುಂ ಪ್ರಯೋಗಿಸೆಪಡೆಗುಂ ॥ ೪೪೬

ಲಕ್ಷ್ಯಂ ॥

ಜಲಾಶ್ರಯಮಾತ್ರದೊಳ್ ಹಂಸಾದಿಗಳ್ಗೆ॥

ವೃ॥ ಜಕ್ಕವಕ್ಕಿಗಳಿಂ ಕಳಹಂಸೆಯಿಂ
[3]ಮಿಕ್ಕ ಸಾರಸದಿಂ ಕುರರಂಗಳಿಂ[3] ।

---

* ಕಾವ್ಯಮೀಮಾಂಸೆ p. 78. 1 ಮಾಗಿ (೮). 2 ದದಲ್ತೆ (೮). † ಕಾವ ಏಮಾಂಸೆ ಪು. 79; *cf.* ಕಾವ್ಯಕಲ್ಪಲತಾವೃತ್ತಿ. I. V. 94. ಓರೆ ಪ್ರತಿಯಲ್ಲಿ "ಅವಱೊಳ್ಸನ್ನಿಬಂಧನಮದೆಂತೆನೆ" ಎಂದು ೨೧೬ನೆಯ ಸೂತ್ರದ ಮುಂದೆ ಇದೆ. ಅಸನ್ನಿಬಂಧನವೆಂದಿರಬಹುದು. 3 ಕುಕ್ಕುರಂಗಳಿಂದೆಸೆವಸಾರಸಂಗಳಿಂ (ಓ).

ಮೊಕ್ಕಳಂ ಸೊಗಯಿಪ್ಪುದು ನೋಡ ನೋ
ಟಕ್ಕೆ ಚೆಲ್ವೆಸೆದಿಲ್ಲಿಯ ಪೂಗೊಳಂ ॥ ೮೪೭

ನದಿಯೊಳ್ ಕಮಲಾದಿಗಳ್ಗೆ ॥

ಸರಯೂನದ್ಯರವಿಂದಮಂದಮಕರಂದಸ್ಯಂದಿ ಗಂಗಾಂಬುಶೀ
ಕರಸಂಸಂಗಿ ಲತಾಭಿರಾಮಲಲನಾ[1]ಲಾಸ್ಯೈಕ[1]ಶೈಲೂಷನ ।
ದ್ರಿರುಹಕ್ರೋಡನಿಪಾತಿ [2]ಮಾಲ್ಯವದನು[2]ಪ್ರಸ್ಫೋತ್ಥಿತಂ ಯಾಮುನೋ
ದರಕುಂಜಸ್ಥಿತಿ ಮೆಲ್ಲನಲ್ಲಿ ಸುಟಿಗುಂ ಬಂದೊಂದು ಮಂದಾನಿಳಂ ॥ ೮೪೮

ಕುವಲಯವನರುಚಿಯಿಂ ಜಾ
ಹ್ನವಿಯ ಜಳಂ ಕರಮೆ ಕಟ್ಟಿ ತೋಱುದುದಂತಾ ।
ಪ್ಲವಗಧ್ವಜಂಗೆ ಯಮುನಾ
ಪ್ರವಾಹನಂಭೇದಮಾದ ತೆಱದಿಂದಾಗಳ್ ॥ ೮೪೯

ಶೈಲದೊಳ್ ರತ್ನಾದಿಗಳ್ಗೆ ॥

ಕಳಧೌತೋಚ್ಚಶಿಲೋದ್ಗತಾಂಶುವಿಲಸತ್ಪಾದಂ ಸ್ಫುಟಸ್ಫಾಟಿಕೋ
ಪಳ[3]ಧಾಮೋ[3]ಜ್ವಳಮಧ್ಯಮಂಬುರುಹರಾಗೋದಗ್ರಪಾಷಾಣಭಾ ।
ವಳಯೋದ್ಭಾಸಿ ನಿಜೋಪಕಂಠ[4]ಮಸಿತ[4]ಚ್ಛಾಯಾಂತರತ್ನಪ್ರಭಾ
ವಿಳಮೂರ್ಧಂ ನಡೆ ನೋಡೆ ಹ್ರೋಲ್ತುದು ನಗಾಧೀಶಂ ಖಗಾಧೀಶನಂ ॥

ಮರಕತದ ಕಲ್ಲ [5]ಕವಿ[5]ಗಳೊ
[6]ಳೆರಡಱಿಯದೆ ಕೂರ್ತ[6] ಧೂರ್ತ ಸುರಮಿಥುನಂಗಳ್ ।
ನೆರೆದಳಸುಗಲಸ ಗಿಳಿಯುಂ
ಪುರುಳಿಯುಮಳಸುವುವು ದೇವಭಾಷೆಗಳಳಸಂ ॥ ೮೫೧

ಅಂತಲ್ಲದೆಯುಂ ಧನದನ
ಗಂ ತನಗಟ್ಟಿದೊಡೆ ರಾಯಭಾರಿತನಂ ಬಂ ।
ದಂತಿರ್ಪುವಿದಱು ಕುಂಜೋ
ದ್ಯಾಂತದ [7]ತಟತಟಿಸಿ[7] ಪೊಳೆವ [8]ಕುಳಿಶಾಶ್ಮಂಗಳ್[8] ॥ ೮೫೨

ಇದು ಜಾತಿ ॥

ಸೂತ್ರಂ ೨೧೭

* ತಮದೊಡ್ಡು ಮುಪ್ಪಿಸಂಗ್ರಾ
ಹ್ಯಮಭೇದ್ಯಂ ಸೂಜಿಗಪ್ಪೊಡಂ ತಾನೆನೆಯುಂ ।

---

1 ಲಾಸ್ಯೋಪ ; ಳಿಸ್ಯೈಕ (ಅ). 2 ಪಾಳವವಧೂ (ಅ). 3 ದಲೊಪ್ಪೀ (ಓ). 4 ಮಹಿತ (ಅ). 5 ಕಣ್ (ಅ). 6 ಳೆರಡಿಲ್ಲದೆ ಕೂಡಿ ಕೂರ್ತು (ಅ). 7 ತಳದಳಿಸಿ (ಅ). 8 ಕುಳಿಶಾಸ್ತ್ರಂಗಳ್ (ಅ). * ಕಾವ್ಯಮೀಮಾಂಸೆ p. 80. *cf.* ಕಾವ್ಯಕಲ್ಪಲತಾವೃತ್ತಿ.

ಕುಮುದಪ್ರಿಯಾತಪಂ ನಾ
ವ್ಯಮಂಜಳಿಗ್ರಾಹ್ಯಮೆನೆಯುಮಿಷ್ಟಮಿವಕ್ಕುಂ ॥ ೬೫೩

ಲಕ್ಷ್ಯಂ ॥

ತಮಕ್ಕೆ ॥

ಪೊದೆದ ಮದವನ್ಮಾತಂಗೇಂದ್ರಾಜಿನಾಂಬರಮಂ ನಿಮಿ
ರ್ದಿದಪನಧವಂ ತಾನೆಂಬಂತಾಗೆ ಪೆರ್ಚಿದಗುರ್ವಿನೊಳ್ ।
ಪುದಿದೊದವಿನಿಂ ನೂಱೀನಿರ್ಭೇದ್ಯಮಪ್ಪಿನಮೆಯ್ದೆ ಪ
ರ್ವಿದುದಸದಳಂ ಮುಷ್ಟಿಗ್ರಾಹ್ಯಂ ತಮಂ ಭುವನಾಂತಮಂ ॥ ೬೫೪

ಚಂದ್ರಾತಪಕ್ಕೆ ॥

[1]ಬೆಲಗಸೆದೀವಿ[1]ಕೊಂಡು ಕುಡಿಯರ್ ಮೊಗೆಯರ್ ಕೊಡಗೊಂಡು ತಿರ್ದಿ ಬ
ಚ್ಚಲ[2]ನೆಳ[2]ದೋಂಟದೊಳ್ ಪರಿಯಿಸರ್ ಪಱುಗೋಲ್ಗಳನಿಕ್ಕಿ ಪಾಯಿಸರ್ ।
ನೆರೆಯಿನಿಸೆಂದು ನೋಡರೊಳಕ್ಕೊಕ್ಕು ದುಡುಂಮಿಱುದಾಡಲೀಸಲ
ಗ್ಗಲಿಸದಲಂಪಿನಿಂ ಬಗೆ[3]ದುದಂದು ಜನಂ ಘನಚಂದ್ರಿಕಾಂಬುವಂ[3] ॥ ೬೫೫

ಇದು ದ್ರವ್ಯಂ ॥

ಸೂತ್ರಂ ೨೧೮

* ಇರುಳೊಳ್ ಚಕ್ರಾ[4]ಹ್ವಯಯುಗ[4]
ವಿರಹಾರ್ತಿಚಕೋರಚಂದ್ರಿಕಾಪಾನಮಿವಿಂ ।
ತೆರಡುಂ ಕ್ರಿಯಾತ್ಮಕಂಗಳ್
ವಿರಚಿಸೆ [5]ಪಡೆಗುಂ[5] ಪ್ರಯೋಗಗತಿಲಕ್ಷ್ಯಂಗಳ್ ॥ ೬೫೬

ಲಕ್ಷ್ಯಂ ॥

ಪ್ರಥಮಕ್ಕೆ ॥

ನೆರೆವನ್ನಂ ರವಿ ನಿಲ್ಲ[6]ದಸ್ತ[6]ಗಿರಿಯಂ ಸಾರ್ದಂ ಪ್ರಿಯಂ ಪೋಗಲಾ
ತುರನಾಗಿರ್ದನೆನುತ್ತುಮತ್ತಿನನ[7]ಸಿತಾ[7]ತ್ಮೇಶನಂ ನೋಡಿ ಕೋ ।
ಪರಸಾ[8]ವೇಶ[8]ಮನೊಂದು ಶೋಕರಸಮಂ ಮತ್ತೊಂದು ಕಣ್ ಕೆಯ್ಕೊಳು
ತ್ತಿರೆ ಕೆಯ್ಕೊಂಡುದು ಚಕ್ರವಾಕವಧು ಕಣ್ಗೆತ್ತಂ ನದೀಲೀಲೆ[9]ಯಂ[9] ॥ ೬೫೭

ಬಿಸರುಹಸಖನಸ್ತಾದ್ರೀಂದ್ರಮಂ ಪೊರ್ದಿ ಪೋದಯ್
ಬಿಸುಟಿನಿಯನೆ ನೀನುಂ ನಿನ್ನ ದೆಂದೆನ್ನೊಳೆನ್ನೀ ।
ಯಸುವುಮಿರದೆ ಪೋಗಲ್ಕರ್ದುದೆಂದಿಂತೊನಲ್ಗುಂ
ಕುಸುಮಶರಶರಾಕಾಕೀಲಿತಾಂಗಂ ರಥಾಂಗಂ ॥ ೬೫೮

---

1 ಬೆಲಗಸೆತೀವಿ; ಬೆಲಸಗೆದೀವಿ (ಅ). 2 ನೆಳೆ, ನೆಲ (ಅ). 3 ಗೆಳಸಿದರ್ ಘನ ಚಂದ್ರಿಕೆಯಂ ಲತಾಂಗಿಯರ್ (ಅ). ದೆಳಸಿದರ್ಘನಚಂದ್ರಿಕೆಯಂ ಲತಾಂಗಿಯರ್ (ಓ). 4 ಹ್ವಯ. * ಕಾವ್ಯಮೀಮಾಂಸೆ P. 81. *cf.* ಕಾವ್ಯಕಲ್ಪಲತಾವೃತ್ತಿ. 5 ಪಡುಗುಂ. 6 ನಸ್ತ. 7 ನಿಂತಾ (ಓ). 8 ವೇಗ. 9 ಯಿಂ.

ಸುರಸಿಜಷಂಡದ ತೆರೆಗಳ್
ತೆರಳ್ವಿನಂ ಕಮಳಪತ್ರಚಯಮೆನಿತನಿತುಂ ।
ಕೊರಗುವಿನಂ ಬಿಸುಸುಯ್ದೀಂ
ಬರಯಿಸಿದುವೊ ಚಕ್ರವಾಕಮಿಥುನಮವಿರುಳೊಳ್ ॥ ೮೫

ದ್ವಿತೀಯಕ್ಕೆ ॥

ಮನಮ[1]ನೆ ೞಲ್ಚುವಂ[1] ಕಿರಣಜಾಲದಿನಂತವು [2]ಪೋಗೆ[2] [3]ಮುಟ್ಟು[3]ಗೆ
ಟ್ಟನಿತಱೊಳಿಟ್ಟಡಂಗಿ[4]ದಪನಂ[4] ತದಱಿಂದೆರೆದಪ್ಪೆನೇಣರಾಂ ।
ಧನನ ಕರಂಗಳುಳ್ಳನಿತುಮಂ ತವೆ ಪೀರೆನುತುಂ ಚಕೋರರೋ
ಚನೆ ಪಿರಿ[5]ದಪ್ಪ ನಲ್ಮೆ[5]ವೆರಸಲ್ಕಱೊಳಂದೆರೆದಳ್ ಚಕೋರಮಂ ॥ ೮೦

ಇದು ಕ್ರಿಯೆ ॥

ಸೂತ್ರಂ ೨೧೯

* ಹಸಿತಯಶಃಪ್ರಭೃತಿಯೊಳು
ಲ್ಲಸಿತಂ ಸಿತಭಾವಮಯಶದೊಳ್ ಪಾಪದೊಳಂ ।
ತಸಿತರುಚಿ ಕೋಪರಾಗ
ಪ್ರಸರದೊಳಾರಕ್ತವರ್ಣ[6]ಮಭಿವರ್ಣಿಸುಗುಂ[6] ॥ ೮೧

ಲಕ್ಷ್ಯಂ ॥

[7]ಹಸಿತಯಶಃಪ್ರಭೃತಿಗೆ[7] ॥

ಬೆಳಪ ಮುಖಚಂದ್ರನೊಳ್ ತಳ
ತಳಿಸುತ್ತುಂ ತೊಳಗಿ [8]ಪೊಳೆವ[9] ಬೆಳ್ಙಂಗಳ[9]ದೊಂ[9] ।
ದಳವನಳವಡಿಸಿ ಕರಮು
ಜ್ಜ್ವಳಿಪ ಮುಗುಳ್ನಗೆ ಬೆಡಂಗು ನೃಪನಂದನೆಯಾ ॥ ೮೨

ಹರಹಾಸದ್ಯುತಿಯಂ ನಿರಾಕರಿಸಿ ಗಂಗಾಸಿಂಧುಕಲ್ಲೋಲಶ್ರೀ
ಕರಮುಂ ನಿಂದಿಸಿ ಸಿಂಧುವಾರಕುಸುಮಶ್ರೀಯಂ ಪಳಂ[10]ಚಾಡಿ ಭಾ[10] ।
ಸುರಚಂದ್ರಾಂಶುವಿ[11]ಕಾನ[11]ಮುಂ ತೆಗಟ್ದು ಮುಕ್ತಾಹಾರವಿಸ್ತಾರಡಂ
ಬರಮಂ ಮಿಕ್ಕು ಬೆಳಪ್ಪುದುಜ್ವಳಯಶಂ ಶ್ರೀಗಂಡಮಾರ್ತಂಡನಾ ॥ ೮೩

ನಂದನನೊಸಗೆಯುಮಾ[12]ಮಕ
ರಂದಕ[12]ನೆಳಸಿರದೆ [13]ಬಿಟ್ಟು ಪೋದೊಂದಬಲುಂ[13] ।

---

1 ನೊಱಲ್ಚು (ಅ). 2 ಪೋಗಿ (ಓ). 3 ಮುಂದು (ಆ.ಓ). 4 ಸವನಂ (ಅ.ಓ). 5 ದೊಂದು ಸರ್ಗೆ (ಅ.ಓ). * ಕಾವ್ಯಮೀಮಾಂಸೆ. P 83. 6 ಮದುವರ್ಣ್ಯಯುತಂ; ಮದುವರ್ಣ್ಯಯಂ, (ಅ), ಮದುವರ್ಣ್ಯಿತಂ. 7 ಹಸಿತಸಿತ (ಓ). 8 ಬೆಳಪ (ಅ). 9 ಗೊಂ (ಅ). 10 ಚಲ್ ವಿಭಾ (ಅ.ಓ). 11 ಳಾನ (ಆ.ಓ). 12 ಮರ ಕಂದಕ (ಅ). 13 ಬಿಸುಟುಪೋದೊಡೆಯಬಲುಂ (ಅ.ಓ).

ಕುಂದದೊಡನಲೆಯೆ ನತಿ ಕಾ
ಳಿಂದಿಯ ನುರನದಿಯ ಕೂಡಲಂ ಪೋಲ್ತರ್ದಳ್ ॥ ೮೬೪

ಅಯಶಃ ಪಾಪಂಗಳ್ಗೆ ॥

ವಿಳಸದಮೃತಾಂಶುಮಂಡಲ
[1]ದೊಳೆ ಕಱುಯೆಂತಂತೆ[1] ನೆಗಪ ದುರ್ಯಶದಿಂದಂ ।
ಖಳನಾನೃಪಾತ್ಮಜಂ ನಿ
ರ್ಮಳನಿಜವಂಶಕ್ಕೆ ಮಾಡಿದಂ ಮಳಿನತೆಯಂ ॥ ೮೬೫

ದೊರೆ[2]ಕೊಂಡ[2] ಪಾಪಲೇಶ್ಯಾ
ಪರಿಣಾಮಮೆ[3] ಕೃಷ್ಣವರ್ಣಮಂ[3] ಪುಟ್ಟಿಸಿದಂ ।
ತಿರೆ ಕಡುಗಲಿಯರವಂದಿರ್
[4]ಪರುಷ[4]ಸ್ವರ[4]ಪರುಷ[4]ನಯನ[5]ಪರುಷ[5]ಶರೀರರ್ ॥ ೮೬೬

ಕೋಪರಾಗಂಗಳ್ಗೆ ॥

ಅವತಂಸಾಶೋಕನವ
ಪ್ರವಾಲರುಚಿ ಮುಳಿಸೆ ರೂಪುಗೊಂಡಪೊಲೆರಡುಂ ।
ಕಿವಿಗಳೊಳ್[6]ಮಾಯಮಂ[6] ಪ
ರ್ಚುವ [7]ಕಲ್ಪಯ[7] ತೆಱದಿನೆಸೆದುದಾನ್ಗಾಯಿಕೆಯೊಳ್ ॥ ೮೬೭

ಕುಂಕುಮದ [8]ಕದಡು[8]ನೀರಂ
ಭೋಂಕೆನೆ ಮೇಲೊತ್ತೆ [9]ನೃಪತಿ[9] ಮೆಯ್ಯಿಂ ರಾಗಂ ॥
ತಾಂ ಕರಮೆ ತೀವಿ ಪೊಱಗೆ ತು
ಳುಂಕುವಪೋಲ್ ತೋಱುತಿರ್ಪುದಿರ್ದಳ್ ॥ ೮೬೮

ಇದು ಗುಣಂ ॥

ಇದು ಕವಿಸಮಯದೊಳ್ ಅಸದಾಖ್ಯಾತಿಪ್ರಕರಣಂ ಪ್ರಥಮಂ.

---

* ಸದಕೀರ್ತನ ಪ್ರಕರಣಂ

ಸೂತ್ರಂ ೨೨೦

† ಅಸುಕೆಯ ಕುಜದೊಳ್ ಫಳಮಂ
ವಸಂತದೊಳ್ ಜಾತಿಕುಸುಮಮಂ ಚಂದನದೊಳ್ ।

---

1 ದೊಳಗಣಕಪೆಯಂತೆ (ಅ). 2 ಕೊಂಡು (ಅ). 3 ಪಾಪರೂಪಮಂ (ಅ.ಓ). 4 ಪುರುಷ (ಅ). 5 ಪಕ್ಷ, ಪುರುಷ (ಅ). 6 ಮಾಂಸಮಂ (ಅ.ಓ). 7 ಕಲ್ಪಪ (ಅ). 8 ಕಡುಕು (ಅ). 9 ನೃಪನ (ಅ.ಓ). * ಮತ್ತಮಲ್ಲಿ ಸದಕೀರ್ತನ ಪ್ರಕರಣಮೆಂತೆಂದೊಡೆ (ಓ). † ಕಾವ್ಯಮೀಮಾಂಸೆ. P 80.

ಕುಸುಮಫಲಮೆಂಬಿವಂ ಬ
ಣ್ಣಿಸದಿರ್ಪುದು ತಾಮವಲ್ಲಿ ಸಂಭವಿಸುವೊಡಂ ॥ ೮೬

ಲಕ್ಷ್ಯಂ ॥

ಕುಸುಮಕಿಸಲಯಮೆ ಲೋಕ
ಕ್ಕೆಸೆವುತ್ತಂಸಾವತಂಸಮೆನೆ ಸಾಲದೆ ಸಂ ।
ದಸುಕೆಗೆ ನಿಸ್ಸಾರಫಲ
ಪ್ರಸೂತಿ ಮತ್ತಂತದಾದೊಡೇನಾಗದೊಡೇಂ ॥ ೮೦

* ಎನಿತು ಸುಮನಸ್ಸಮುನ್ನತಿ
ತನಗಾದೊಡಮಭಿನೂತಜಾತಿವಿಕಾಸ ।
ಕ್ಕಿನಿತೆಡೆಗುಡದುದಱಿಂ ಕುಲ
ಜನದ ವಿಭೂತಿಯನೆ ಸುರಭಿಸಮಯಂ ಪೋಲ್ಕುಂ ॥ ೮೧

* ಬಿದಿವಸದೆ ಕುಸುಮಫಲಮಿ
ಲ್ಲದಿರ್ದೊಡಂ ತನ್ನದೊಂದು ಮೆಯ್ಯಿಂದಂ[1] ಲೋ ।
ಕದ ಸೇದೆಯೆಲ್ಲಮಂ[1] ಕಿಡಿ
ಸಿದಪುದು ಚಂದನಮೆ ವಂದ್ಯಜನ್ಮಂ ಕುಜದೊಳ್ ॥ ೮೨

ಇದು ಜಾತಿ ॥

ಸೂತ್ರಂ ೨೨೧

† ಸಿತಪಕ್ಷದೊಳುಳ್ಳೊಡಮಂ
ಧತಮಸಮಂ ಕೃಷ್ಣಪಕ್ಷದೊಳ್ ಚಂದ್ರಿಕೆಯಂ ।
ಕೃತಮತಿಗಳ್ ಕವಿಮಾರ್ಗಾ
ಶ್ರಿತಗತಿಗಳ್ ಪೇೞದಿರ್ಕ[2]ದೆಂತುಂ[2] ಕೃತಿಯೊಳ್ ॥ ೮೩

ಲಕ್ಷ್ಯಂ ॥

ಇಡಿದಿರೆ ಗುಹಾಂಧಕಾರಂ
ಪೊಡರ್ದೆಸೆದಿರೆ ಚಂದ್ರಕಾಂತರುಚಿ ನಗದೋರೊಂ ।
ದೆಡೆಗಳ್ ಪೋಲ್ತಪ್ಪುವದೊಂ
ದೆಡೆಯೊಳ್ ನೆರೆಸಿರ್ದ ಕಾಳಮಂ ಜೊನ್ನಮುಮಂ ॥ ೮೪

ಇದು ದ್ರವ್ಯಂ ॥

---

* c. p. ಕಾವ್ಯಮೀಮಾಂಸೆ, p. 80. 1 ಲೋಕದೊಳಾದ ಸೇದೆಯಂ (ಅ).
† ಕಾವ್ಯಮೀಮಾಂಸೆ p. 81. 2 ದೆಂದುಂ (ಅ.ಓ)

ಸೂತ್ರಂ ೨೨೨

* ದಿವಸದೊಳಸಿತಾಬ್ಜವಿಕಾ
ಸವುಮಂ ಶೇಫಾಳಿಕಾಶ್ರುಬಿಂದುಪರಿಭ್ರಂ ।
ಶವುಮಂ ಪೇೞಲ್ಕಾಗದು
ಸವವಾಯಂ ಸಮನಿಸಿರ್ಪೊಡಂ ಸತ್ಕೃತಿಯೊಳ್ ॥ ೮೭೫

ಲಕ್ಷ್ಯಂ ॥

ಪಗರ್ ರತಾರಂಭದೊಳಿರ್ದಿರುಳ್ ಕನ
ಲ್ವಗಲ್ವ ಚಕ್ರಾಹ್ವಯುಗಂಗಳಟ್ಕಱಿಂ ।
ಮೊಗಕ್ಕೆ ತರ್ಪಂತ[ಲ]ರಲ್ ತಗುಳ್ದುವೆ
ಲ್ಲಿಗಂ ರಜಂ ಪೊಣ್ಮೆ ಮಹೋತ್ಪಳಾದಿಗಳ್ ॥ ೮೭೬

† ಸಸಿಯೆಟ್ಟರಮಂ [1]ಕಂಡೊಗೆ[1]
ದೊಸಗೆ ಮನಕ್ಕಧಿಕಮಾಗೆ ಶೇಫಾಳಿಕೆ ನಂ ।
ತಸದಿಂದಿಕ್ಕಿದ ಬಾಷ್ಪ
ಪ್ರಸರಮನಿಳಿಸಿದುವು [2]ನಿಶೆ[2]ಯೊಳಲ್ಲೊಕ್ಕಲರ್ಗಳ್ ॥ ೮೭೭

ಇದು ಕ್ರಿಯೆ ॥

ಸೂತ್ರಂ ೨೨೩

‡ ತತದಶನದ್ಯುತಿಯೊಳರ
ಕ್ತತೆಯನೆ ವಿಕಸತ್ಪ್ರಿಯಂಗು [3]ಸುಮನಸದೊಳಪೀ[3] ।
ತತೆಯನೆ ಪಂಕಜಮುಕುಳ
ಪ್ರತತಿಯೊ[4]ಳಹರಿತ್ವ[4]ವೃತ್ತಿಯನೆ ಪೇೞ್ದ್ರ ಬುಧರ್ ॥ ೮೭೮

ಲಕ್ಷ್ಯಂ ॥

ದಶನಾರಕ್ತತೆಗೆ ॥

ತೊಳಪ ದಂತಮರೀಚಿನಂತತಿ ಪರ್ವ್ವಿ ಬಳ್ವಳನೀಳ್ದು ಗೊಂ
ದಳಿಸಿ ಬಾಳಮೃಗಾಂಕದೀಧಿತಿಜಾಳಮಂಜರಿಗಳ್ ಜಗ ।
ದ್ವಳಯಮಂ ಬೆಳಪಂತೆ ಬಂದು ನಭಾಂತರಾಳಮನೆಲ್ಲಮಂ
ಬೆಳಗೆ ಧೂವಳಯಾಧಿಪಂ ನುಡಿಗುಂ ಸ್ವಚಿತ್ತಗತಾರ್ಥಮಂ ॥ ೮೭೯

---

* ಕಾವ್ಯಮೀಮಾಂಸೆ, p. 82. † ಈ ಪದ್ಯವಾದಮೇಲೆ ಒಂದು ಪ್ರತಿಯಲ್ಲಿ ಕೆಳಗೆ ಕಂಡ ಸೂತ್ರವು ದೊರೆಯುತ್ತದೆ. ಇದು ಸದಕೀರ್ತನ ಪ್ರಕರಣಕ್ಕೆ ಸಂಬಂಧಿಸುವುದಿಲ್ಲ: ಆನೆ ಬಿದಿರ್ ಪಂದಿ ಮುಗಿರ್ । ಮಾನಂಬುಧಿಶಂಖಮೆಂಬೀಯೆಂಟುಂ ॥ ಸ್ಥಾನಂಗಳಲ್ಲಿ ಪುಟ್ಟುಗುಂ । ಮೇನಚ್ಚರಿ ತಿಳಿದುನೋಡೆ ಮ್ಕ್ತಿಕರತ್ನಂ ॥ 1 ಕಂಡೊ (ಅ.ಇ). 2 ನಿಶಿ (ಅ). ‡ ಕಾವ್ಯಮೀಮಾಂಸೆ, p. 83. 3 ಕಾನುಮದೊಳತಿ (ಅ.ಓ). 4 ೞೀಹರಿತ (ಅ), ೞೀಹರಿಯ ವೃತ್ತಿಪೇೞ್ದ್ರ ಬುಧರ್ಕಳ್ (ಅ.ಓ).

ಕುಂದದಳಧವಳನೃಪದಶ
ನೇಂದುಜ್ಯೋತ್ಸ್ನಾಮೃತಾಚ್ಛಜಲಪರಿಷೇಕಂ ।
ಮಾಂದಿಸುವಂತಾದುದು ನೃಪ
ನಂದನೆಯೆರ್ದೆಯೊಳಗೆ ಬಳೆದ ಶೋಕಾನಳನಂ ॥ ೮೮೦

ಪ್ರಿಯಂಗುಕುಸುಮಾಪೀತತ್ವಕ್ಕೆ ॥

ಇವಳೀಪ್ರಿಯಂಗುಕುಸುಮ
ಚ್ಛವಿಲಸಿತಶ್ಯಾಮಕುಚತಟಾಂತದೊಳೊಪ್ಪಿ ।
ರ್ಪುವು ತಾರಹಾರರುಚಿ ನೀ
ಳವೇದಿಕಾಂತರದೊಳೆಸೆವ ಪೂವಲಗಳವೋಲ್ ॥ ೮೮೧

ಪದ್ಮಕುಟ್ಮಳಾಹರಿತತ್ವಕ್ಕೆ ॥

ತೆರೆಯು ಪೊಯ್ಲೊಳೆ ತೆರಳ್ದು ಬರ್ಪ ವಿ
ಸ್ಫುರಿತಶಂಖನಿವಹಂ ಪಯೋಧಿಯೊಳ್ ।
ಕರಮೆ ಚೆಲ್ವೆಸೆದು ಕಣ್ಗೆ ತೋರ್ಕುಮಂ
ಬುರುಹಕು[1]ಟ್ಮಳಕುಳಂಗಳಂತೆವೋಲ್ ॥ ೮೮೨

ಇದು ಗುಣಂ ॥

ಇದು ಕವಿನಮಯದೊಳ್ ನದಕೀರ್ತನಪ್ರಕರಣಂ ದ್ವಿತೀಯಂ.

---

* ನಿಯಮಾರ್ಥಪ್ರಕರಣಂ

ಸೂತ್ರಂ ೨೨೪

† ಜಳಧಿಯೊಳೆ ತಿಮಿತಿಮಿಂಗಿಳ
ಗಿಳಮಕರಪ್ರಕರಶಂಖಸಂಭವಮಕ್ಕುಂ ।
ಮಳರಹಿತತಾಮ್ರಪರ್ಣೀ
ಜಳದೊಳೆ ಶುಕ್ತಿಜಮಣಿಪ್ರಕಾಂಡಪ್ರಭವಂ ॥ ೮೮೩

ಲಕ್ಷ್ಯಂ ॥

ತಿಮಿತಿಮಿಂಗಿಳಾದಿಗಳ್ಗೆ ॥

ಮಿಳಿರ್ವರುಣಧ್ವಜಂಗಳ ನೆಬಲ್ಗಳನೊಂದೆರೆಗೆತ್ತು ವಾರ್ಧಿಯೊಳ್
ಪೊಳೆವೆಳವಾಳೆಗಳ್ ಕರ್ದುಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ ।

---

1 ಟ್ಮಳಂಗಳಾತಱಿನೊಲ್ (ಓ). * ನಿಯಮವ್ಯವಚ್ಛೆಯುಮೆಂತೆಂದೊಡೆ (ಓ).
† ಕಾವ್ಯಮೀಮಾಂಸೆ, p. 80.

ಗಳೆ ತಿಮಿಯಂ ತಿಮಿಂಗಿಳನಡಂಗುವಿನಂ ತವೆ ನುಂಗೆ ತತ್ತಿಮಿಂ
ಗಿಳಮುಮನಾತಿಮಿಂಗಿಳಗಿಳಂ ತವೆ ನುಂಗಿದುದೊಂದು ತಾಣದೊಳ್॥ ೮೮೪

ಕರಿಮಕರಂಗಳುಚ್ಚಳಿತಭಂಗುರತರಂಗತರಂಗಮಾಲೆಯಂ
ಕರರದನಾಗ್ರದಿಂದಿಱಿಯೆ ಮುತ್ತುಗಳಂತಿರೆ ಸೂಸಿ ಪಾಯ್ವ ಶೀ ।
ಕರದೊಳೆ ನಾಂದು ಸೇಡುಗೊಳುತುಂ ಸುಟಿದೂದುವ ಗಾಳಿ ಬರ್ಪ ದೇ
ವರ ವರಕಾಂತೆಯರ್ಕಳ ಪರಿಶ್ರಮಮಂ ಕಳೆದತ್ತು ವಾರ್ಧಿಯೊಳ್॥ ೮೮೫

ನೊರೆಯಿವಲ್ಲವು ತಳ್ತ ಶಂಖದ ಬಳ್ಗಿಗಳ್ ಬಡಬಾನಲಾಂ
ಕುರವಿವಲ್ಲವು ರತ್ನದೀಧಿತಿಗಳ್ ತರಂಗವಿವಲ್ಲ[1]ಪು[1] ।
ದ್ಧುರಕುಳಾಚಳಪಙ್ತಿಗಳ್ ಜಳಶೀಕರಂಗಳಿವಲ್ಲವಾ
ಪರೆದ ಮುತ್ತುಗಳೆಂಬ ಶಂಕೆಯನಾಗಿಕುಂ ಮಕರಾಕರಂ॥ ೮೮೬

ತಾಮ್ರಪರ್ಣಿಯೊಳ್ ಶುಕ್ತಿಜಕ್ಕೆ॥

ಜಿನರಾಜಶಿಶುಗೆ ಧರೆಯೊಳ್
ಜನಿಯಿಸಲಂತಾನರೇಂದ್ರ [2]ಪತ್ನಿಯೆ[2] ದೊರೆ ನೂ ।
ತನಶುಕ್ತಿಜಕ್ಕೆ ತಾಯ್ವನೆ
ಯೆನಿಸರ್ ದೊರೆ ತಾಮ್ರಪರ್ಣಿ ತಾನೊಂದೆ ವಲಂ॥ ೮೮೭

ಇದು ಜಾತಿ॥

ಸೂತ್ರಂ ೨೨೫

* ಹಿಮವದಗೇಂದ್ರಮೆ ಭೂಜ್ರ
ದ್ರುಮರಾಜಿಗೆ ಜನ್ಮಭೂಮಿ ಮಲಯಾದ್ರಿಯೆ ಬಂ ।
ಹಿಮವಚ್ಚಂದನಮಹಿರುಹ
ಸಮಿತಿಗೆ ಕುಲಗೇಹಮಿತರದೊಳ್ ಪುಟ್ಟುವೊಡಂ॥ ೮೮೮

ಲಕ್ಷ್ಯಂ॥

ಪ್ರಥಮಕ್ಕೆ॥

[3]ಪೆರೆ[3] ಸುಲವ ಹಿಮವದಮನೀ
ಧರಮೆಂಬುರಗಾಧಿಪತಿಯ ನಿರ್ಮೋಕದೊಳೇಂ ।
ದೊರೆಯಾದುವೊ ವಿ[4]ದ್ರುತ[4]ಜ
ಜ್ಜ್ವರಭೂರ್ಜದ್ರುಮವನಂಗಳಿಂದಚಳಂಗಳ್॥ ೮೮೯

---

1 ಮು (ಓ). 2 ಸತಿಯೇ (ಅ). * ಕಾವ್ಯಪ್ರಕಾಶ, p. 81. 3 ಹೆರೆ (ಓ).
4 ದ್ರುಮ (ಅ).

ದ್ವಿತೀಯಕ್ಕೆ ॥

ಇದು ಮಳಯಾಚಳಂ ಮಳಯಜಂ ಮಳಯಾನಿಳನೆಂದು ಪೆಂಪುವೆ
ತ್ತುದು ಸಿರಿ[1]ಕಂಡಮುಂ[1] [2]ಪದೆದು[2] ತೀಡುವ ಗಾಳಿಯುಮಿಲ್ಲಿ ಪುಟ್ಟಿ ಪೋ।
ಗದು ಪೊಸ ನುಗ್ಗಿ ಮೂಗುವಡದಿಲ್ಲಿಯ ಕೋಗಿಲೆ ಬಂದ ಮಾವು ಬೀ
ಯದು ಕುಸುಮಾಸ್ತ್ರನಾಜ್ಞೆ ತವದೆಲ್ಲಿಯುಮಿಲ್ಲಿಯ ನಂದನಂಗಳೊಳ್ ॥ ೮೯೦

ಇದು ದ್ರವ್ಯಂ ॥

ಸೂತ್ರಂ ೨೨೬

* ನುರಭಿಸಮಯದೊಳೆ ಕೋಕಿಳ
ವಿ[3]ರುತಿ[3]ನಿಬಂಧನಮನಬ್ದಕಾಲದೊಳೆ ಮದೋ ।
ದ್ಧುರಕೇಕಿಮಧುರಕೇಕಾ
ವಿರುತಿಯನಭಿಯುಕ್ತರಱಿದು ಪೇಟ್ಪುದು ಕೃತಿಯೊಳ್ ॥೮೯೧

ಲಕ್ಷ್ಯಂ ॥

ನುಗ್ಗಿಯ ಪುಗಿಲೊಳ್ ಮುಂಕೊಂ
ಡುಗ್ಗಿಯನು[4]ಜ್ಜ್ವಸಿ[4]ದಂತೆ ಮೋನಮನುಂಟಿದೇಂ ।
ಬಗ್ಗಿಸಿದುವೊ ಕೋಗಿಲೆಗಳ್
ಮೊಗ್ಗಪ್ಪ ವಿಯೋಗಿಯಂ [5]ಪುಗಲ್ ಪುಗಲೆನುತುಂ[5] ॥ ೮೯೨

ಘನಸಮಯದೊಳಿರ್ದು ಶಿಳಾ
ಸನದೊಳ್ ಶೈಳೇಯನುರಭಿತಳದೊಳ್ ಗೋವ ।
ರ್ಧನ ಕಂದರದೊಳ್ ಶಿಖಿನ ·
ರ್ತನಮಂ ನೀಂ ನೋಡ ಲಲಿತಕೇಕಾನ್ವಿತಮಂ ॥ ೮೯೩

ಇದು ಕ್ರಿಯೆ ॥

ಸೂತ್ರಂ ೨೨೭

† ಅವಿಶೇಷದಿನುದ್ಗಮದೊಳ್
ಧವಳತೆ ಮಾಣಿಕ್ಯನಿಕರದೊಳ್ ಶೋಣತೆ ಮೇ ।
ಘವಿತಾನದೊಳ್ ವಿನೀಳತೆ
ವಿವಿಕ್ತವರ್ಣವ್ಯವಸ್ಥೆಯಿಂದೊಂದಿರ್ಕುಂ ॥ ೮೯೪

---

1 ಕಂಡಮಂ (ಓ). 2 ಪಡೆದು (ಅ). * ಕಾವ್ಯಾವಾಮಾಂಸೆ, p. 82.
3 ರುತ (ಅ). 4 ಜ್ಜೆಸಿ (ಅ.ಓ), ಜ್ಜ್ವಸಿಸ (ಅ). 5 ಪುಗಿಲ್‌ಪುಗಿಲೆನುತುಂ (ಅ).
† ಕಾವ್ಯಾವಾಮಾಂಸೆ, p. 84.

ಲಕ್ಷ್ಯಂ ॥

ಪುಷ್ಪ ಶೌಕ್ಲ್ಯಕ್ಕೆ ॥

ತಳಿರಮೇಗಣಲರೋಳಿಗಳೋ ಪೊಸಮುತ್ತುಗಳ್
ತೊಳಪು[1]ವೋ ಪವಳ[1]ದಂಕುರದೊಳ್ ಪುದಿ[2]ದಿಂತು[2] ತ ।
ಮ್ಮೊಳ ವಿಚಾರಿಸಿ ಜನಂ ಕರವೊಪ್ಪುವುದಾಯ್ತು ಪ
ಲ್ಗಳೆ ಮುಗುಳ್ನಗೆಯ ಬಾಯ ಬೆಡಂಗು ಲತಾಂಗಿಯಾ ॥ ೮೯೫

ಮಾಣಿಕ್ಯ ಶೋಣತ್ವಕ್ಕೆ ॥

ತುಂಗವಿಚಿತ್ರಕೂಟನಿವಹಂಗಳೊಳೊಪ್ಪುವ ರತ್ನದಂಶುಜಾ
ಳಂ[3]ಗಳ[3] ಕೆಂಪು ತಳ್ತು ನಿಲೆ [4]ಹೆಚ್ಚರದಿಂ[4] ಗಿರಿಗಳ್ಗಧೀಶ್ವರಂ ।
ತಾಂ ಗಡಮೆಂದು ಮೇರುನಗದೊಳ್ ಕೃಣರ್ದಕ್ಕತುಳಕ್ಕೆ ವಂದು ನಾ
ರಂಗದ ತೊಂಗಲೇಱುಸಿದ ಮಾಪ್ಕೆಯೊಳಿರ್ದುದು ವಿಂಧ್ಯಪರ್ವತಂ ॥೮೯೬

ಮೇಘಕೃಷ್ಣತ್ವಕ್ಕೆ ॥

ಈ ಪುರುಷೋತ್ತಮನವನೀ
ಳೋಪಳ [5]ಸಚ್ಛಾಯ[5]ಕಾಯದೊಳ್ ಪೆಣೆದು ಘನ ।
ವ್ಯಾಪಿತಗಭೀರರುಚಿಗನು
ರೂಪಂ [6]ತಾನಕ್ಕೆ[6] ನಿನ್ನ ತನು ತನುಮಧ್ಯೇ ॥ ೮೯೭

ಇದು ಗುಣಂ ॥

ಇದು ಕವಿಸಮಯದೊಳ್ ನಿಯಮಾರ್ಥ ಪ್ರಕರಣಂ ತೃತೀಯಂ.

---

[7]ಐಕ್ಯಪ್ರಕರಣಂ[7]

ಸೂತ್ರಂ ೨೨೮

* ದಾನವದೈತ್ಯಾಸುರ ಸಂ
ತಾನಕ್ಕಂ ನಾಗಸರ್ಪಸಂಹತಿಗಳ್ಗಂ ।
ತಾನೇಕತ್ವಂ ಸಮಯಾ
ಧೀನಮದಕ್ಕುಂ ರಸಾತಳಪ್ರತಿಬದ್ಧಂ ॥ ೮೯೮

---

1 ವಾಪವಳ (ಅ). 2 ಧಿಂತು (ಅ). 3 ಗಳೊ (ಅ). 4 ಮಚ್ಚರದಿಂ, ಬೆಚ್ಚರದಿಂ (ಅ). 5 ಸುಚ್ಛಾರು (ಅ), ಸ್ಫಚ್ಛಾಯ (ಓ). 6 ತಾನಕ್ಕು (ಓ). 7 ಇಲ್ಲಯೈಕ್ಯವ್ಯತ್ತಿಯೆಂತೆನೆ (ಓ). * ಕಾವ್ಯಮೀಮಾಂಸೆ, p. 88.

ಲಕ್ಷ್ಯಂ ॥

ದನುಜರನಾಮುರಾರಿ ಗೆರೆ ಕಾದುವ ಕಾಲದೊಳಾನದೀಕೆ [1]ಪು
ಟ್ಟೆನೊ[1] ಗಡಮಂದು ಪುಟ್ಟಿದೊಡೆ ದೈತ್ಯಕುಳಕ್ಕೆ ಕಳಂಕಮಾಗಲೀ ।
